Madras University Kannada Series

KARNATAKA
KAVIRAJAMARGAM

GENERAL EDITOR
Dr. A. SHANKER KEDILAYA
Head of the Department of Kannada

UNIVERSITY OF MADRAS
MADRAS-600005.
1973

Madras University Kannada Series

KARNATAKA KAVIRAJAMARGAM

GENERAL EDITOR

Dr. A. SHANKER KEDILAYA
Head of the Department of Kannada

UNIVERSITY OF MADRAS
MADRAS-600005.
1973

Madras University Kannada Series

General Editor

Dr. A. SHANKER KEDILAYA
Head of the Department of Kannada

KARNATAKA KAVIRAJAMARGAM

First printed 1930.
Reprint 1973.

Price Rs.

PRINTED AT THE RATHNAM PRESS MADRAS-1.

Madras University Kannada Series

KARNATAKA KAVIRAJAMARGAM

ಕರ್ನಾಟಕ

ಕವಿರಾಜಮಾರ್ಗಂ

EDITED BY

A. VENKATA RAU, B.A., L.T.,

AND

PANDIT H. SESHA AIYANGAR

UNIVERSITY OF MADRAS

1973

FOREWORD

This work "Karnataka Kavirajamargam" is a new edition of the book which was published by the University of Madras in 1930 and which was out of print for a number of years. The Reader and Head of the Department of Kannada, Dr. A. S. Kedilaya, has undertaken the present edition of the work. In his Preface in English the Editor has discussed the authorship of the work and the patronage extended by the Rashtrakuta Emperor, Nrpatunga, to the author.

Karnataka Kavirajamargam is the earliest available work on literary criticism in Kannada, and it gives an account of the scholars and poets that flourished at the Court of Nrpatunga, and also of the literary personages that lived in earlier times. It treats vividly of the literary forms and conventions of the time, and also provides an insight into the social and political conditions that obtained in those early days.

I hope and trust that this new edition of an important source book in Kannada will be welcomed by scholars and students of Kannada Language and Literature in South India.

University of Madras,
17th January 1974.

N. D. SUNDARAVADIVELU,
Vice-Chancellor.

PREFACE

The Kavirājamārga popularly ascribed to King Nṛpatuṅga is the earliest available work on literary criticism is Kannada. Though inspired by earlier Samskrita works, especially those of Daṇḍin and Bhāmaha, it contains much original matter and sheds light on the social and political conditions of the Kannada land, as well as the ancient Kannada language and literature.

There is difference of opinion among sholars regarding the authorship of the work. The work is popularly known as Nṛpatuṅga's *Kavirājamārga.* It is ascribed to the Rashtrakuta Emperor, Nṛpatuṅga (815-877 A.D.) by B. L. Rice, K. B. Pathak and Narayana Srinivasa Rajapurohit. Dr. Fleet stated that it was composed during the reign of the Rashtrakuta king, Amōghavarṣa Nṛpatuṅga (815-877) by his court poet Kavīśvara. The colophon of the work states that it was approved by king Nṛpatuṅga, (*Nṛpatuṅgānumata*). R. Narasimhacar, author of *Karṇāṭaka Kavicarite* considers that Śrī Vijaya, mentioned in the colophon, composed the work at the instance of the king.

It is obvious that king Nṛpatuṅga was not the author of the work but was only the patron. Śrī Vijava must have written a work called *Kavimārga*; this mught have been revised into the present work, *Kavirājamārga* by another poet, Kavīśvara. The title Amōghavarṣa reffered to in the text itself suggests that the patron was Amōghavarṣa Nṛpatuṅga.

1. *Kavimārga by Śrī Vijaya*

In Kavirājamārga itself the name of the poet Śrī Vijaya is mentioned (*parama Śrī Vijaya...tadādya kāvyakkendum*). Durga Simha has mentioned the line, *Śrī Vijayara kavimārgam* in the preface to his work Pañcatantra. In the verse at the end of each Paricchēda of Kavirājamārga, '*Śrī Vijaya prabhūtamanidam*' is stated and hence we can surmise that the work written by Śrī Vijaya is a work on poetics.

Kēśirāja has mentioned about Śrī Vijaya while mentioning the names of the great poets preceding him in the beginning of

his work '*Śabdamaṇidarpaṇa*' (*Gajagana, Guṇanandiya, Manasijanasagana, Candrabhaṭṭa, Guṇavarma, S'rīvijayara, Honnana, Hampana, Sujanōttamsana, Sumargavidaroḷe lakṣyam* (1-5 Smd.) Kēśirāja has also quoted *lakṣya* verses from Kavirājamārga to illustrate some of the grammatical rules. While saving that in verse the word beginning with a conjunct letter should not follow a word ending with a *laghu* letter, Kēs'irāja quotes as example from Kavirājamārga the verse "*arasukumara...mārgam*" to illustrate the rule that Dēśiya words should not be compounded with the sama-samskrita words. As Kēśirāja has not mentioned the name of Nṛpatunga while mentioning the preceding poets in the preface, we can conclude that he has taken the verses from the Kavimārga of Śrī Vijaya. As some differences in the verses quoted from this work in Śabdamaṇidarpaṇa and the corresponding verses in the Kavirājamārga, are noted, we can say that the author of Kavirājamārga has made some alterations while selecting the verses from Kavimārga. The verse '*nuḍigeḷḷam sallada*...' (1-32) of Kavirājamarga is not in one manscript of the work. But this verse is quoted in S'abdamaṇidarpaṇa. This also helps us to conclude that the author of the Kavirājamārga has omitted the verse as the names of the Kavya forms Cattāṇa and Bedaṇḍe occurring therein were not familiar to him. This helps us to conclude that Kēśirāja has selected this verse not found in Kavirājamārga from the Kavimārga of Śrī Vijaya.

We come to know that Śrīvijaya, the author of Kavimārga, has written Candraprabha Purāṇa, a campu Kavya in Kannada, from one verse of Doḍḍayya of Piriyapaṭṭaṇa. (*candraprabha purāṇamam pēḷda vijaya kavīndra*). But this work has not so far been found. That Śrīvijaya seems to have been a famous *ācarya* is evident from the appellation *parama* affixed to his name as in (*parama śri vijaya*) and also from the saying of Durgasimha- (*S'rī Vijāyara kavimārgam*), wherein honorific plural is used with reference to Śrī Vijaya.

As the author of Kavirājamārga while referring to Śrīvijaya uses respectful terms always, it is possible that Śrīvijaya might have been the preceptor to the author of Kavirājamārga.

2. *Kavīśvara's Kavirājamārga*

The name of Kavīśvara figures in Kavirājamārga in the beginning of the works. We come to know from the line, (*S'rī*

Vijaya prabhūtamanidam tanagāgisidom Kavīśvaram) appearing at the end of the 2nd pariccheda of Kavirājamārga, that the poet, Kavīśvara has made use of Kavimārga of Śrī Vijaya for getting the favour of the king Nṛpatuṅga. It can also be inferred from internal evidences that Kavīśvara was in the court of Nṛpatuṅga. Both the names of Śrī Vijaya and Kāvīs'vara have been mentioned as the authors of poetic works along with other poets.

Kavīśvara while composing Kavirājamārga had added some portions relating to Kannada language. He has also added some portions from Bhāmaha's work on poetics in the *Dōṣa prakaraṇa* (the chapter on the faults in poetry). He has eschewed some verses with regard to *prāsa* (alliteration). Some minor alterations have been made in the chapter on Alaṅkāra too. Kavīśvara has illustrated some of his sūtras on Alaṅkāras by verses in praise of Nṛpatuṅga composd by himself.

3. *Kavirājamarga approved by Nṛpatuṅga* or *Nṛpatuṅga's work*

Though Kavirājamārga is not actually composed by Nṛpatuṅga, the work is popularly knowns as Nṛpatuṅga's Kavirājamārga. This is is due to the name of Nṛpatuṅga being mentioned prominently in the work as (*nṛpatuṅga devānumata*) and the name of the author only being hinted indirectly. The details that we come to know from this work about Nṛpatuṅga, the patron of the author of Kavirājamārga are given below.

- The appellations *udāra, nītinirantara, kṛtakritymalla, Vira Nārāyaṅa, Atiśaya dhavaḷa, Vivēka bṛhaspati, Naralōkacandra, Nityamalla vallabha, puruṣōttama, Vāgadhipa, paramōdaya, amōghavarṣa and sarasvati tīrthavatāra* are attributed to Nṛpatuṅga. We come to know from this work, that he was an emperor, As the titles *Vīra Nārāyana* and *Varṣa vallabha* are generally applied to Rashtrakuta kings, their use in this work makes it obvious that the patron of this work belonged to that dynasty.

The titles, *Vāgadhipa*, *Vivēka bṛhaspati* and *Sarasvati tīrthāvatāra* reveal that the king was a scholar. The verse '*vivēkāttyakta rājyēna...racitāmōghavarṣēṇa*' occurring at the end of the Samskrita work *Praśnōttara mālika* written by the king, is also another evidence of his scholarship. Being a scholar himself, it is but natural that he patronised other scholars. Mahāvīrācārya.

the Jaina author of *Gaṇitasāra saṅgraha*, a Samskrita work, praises Nṛpatuṅga in five verses in the beginning of his work. We come to know from these verses that Nṛpatuṅga was a Jain. Though he should have belonged to Hinduism (*Vaidika matāvalambi*) like other kings of his dynasty, it seems that at a later period of his reign he adopted Jainism. This accounts to the ślōka of Mahāvīrācārya, wherein Nṛpatuṅga is described '*syādvādanyāyavedi.*' It seems that the emperor wrote at the fag end of his long reign of sixtytwo years, the work, '*Ratna mālika*' extolling *vairāgya* (dispassion) therein.

Kavirājamārga is in three chapters (*paricchēdas*).

1st Paricchēda:

In the two invocatory verses in the beginning of the 1st *paricchēda*, the poet has praised Viṣṇu directly and his patron, the Emperor Nṛpatuṅga indirectly. Then he invokes Sarasvati, the Goddess of speech, and the ancient poets. The poet describes the scholars in the court of Nṛpatuṅga. Then he mentions the importance of the study of literature and the factors conducive to the writing of poetry. He mentions also the names of the preceding poets. The uses of Kavya are also stated.

After mentioning the characteristics of Kavya and its varieties, the poet describes the characteristics of prose, names the prose works in Samskrita and Kannada and points out the characteristics of Kannada Kavyas. He mentions the boundaries of the Kannada land, the place of the pith of Kannada, the scholarship of the people of the land and that a Kavya should be free from faults. He states the prevalent Old Kannada (*Haḷagannaḍa*) and Modern Kannada (*Hosagannaḍa*) forms and the mode of using Samskrita words in Kannada. Then the faults in a Kavya are described with examples. Other faults (*kāraka dōṣas*) in a Kavya are stated next and with this the first *paricchēda* comes to a close.

2nd Paricchēda:

The faults in the form and meaning arising from the compounding of words and the faults in sandhi are described. The fault in the usage of long vowel in the genitive and vocative cases

are next stated. The characteristics of alliteration are mentioned with examples. The two schools of the south and the north and the ten *kavya guṇas* beginning with *ślēṣa, prasada* etc. which determine them have been described in detail. The forms of some words according to the two schools are given. Verses with one letter, two letters and Yamaka are described with examples. *Prahēḷika* or literary puzzles are also similarly described with example. With this ends the second *paricchēda.*

3rd Paricchēda :

In this paricchēda the thirtyfive alaṅkāras and their internal differences are described with examples as in Dandi's Kavyadarśa. At the end Dhvani is added as an aiaṅkāra (this is not in kāvyādarśa). Then are described in detail the eighteen topics of descriptions which are essential for a Mahakāvya, the uses of a Kāvya and the four kinds of alteration together with examples. (perhaps this should find a place in the second paricchēda under the description of alliterations). The chapter ends with a prayer for the welfare of the world.

Some of the verses given as illustrations are translations of the illustrations given by Daṇḍi. Some have only slight similarity. Some examples have been slightly changed by this author to accord with the principles of Jaina religion. Some of the examples seem to have been taken from an earlier poetry work on Ramayana theme. But such examples are few and the author on the whole seems to have quoted no verses from other works as examples. Most of the verses given as illustrations are addressed to a king and describe his virtue and valour. It may be supposed that these verses might have been composed by the author himself.

The changes done by the author while following Daṇḍi's Kavyadarśa :

Daṇḍi's Kāvyādarśa contains four paricchēdas wheras this Kavirājamārga is divided into three paricchēdas.

The invocatory verses and the verses in praise of earlier Acharyas, and his patron, Nṛpatuṅga are the poet's own. So also the mention of the preceding poets and the verses describing the Kannada land, the people and the language are original. The form of the Old Kannada and Modern Kannada languages, the

rules on using Samskrita in Kannada and the Kāraka faults etc. (Kāraka dōṣādi kāvyadōṣa) in Kāvya mentioned in this work are also the original writing of the poet.

The two schools (Dakshina Mārga and Uttara Mārga) mentioned by Daṇḍi in the first paricchēda and the *citra* kāvyas like ēkākṣari, Yamaka etc. mentioned in the third paricchēda of his kāvyādarśa are given in Kavirājamārga in the second paricchēda. The examples given to illustrate the two schools are the poet's own creations.

In the third paricchēda of Kavirājamārga some internal distinctions in the thirtyfive arthālaṅkāras, mentioned by Daṇḍi have been left out and one or two differences have been added. The characteristics of a Mahākāvya including the eighteen topics for description have been described in detail in six verses in the Kavirājamārga. The author of Kavirājamārga ends his work with a prayer that the fame of the book may remain for ever.

Much interesting and useful information on Kannada country and its culture is found in the *Kavirājamārga.* The Kannada land extended from the River Kaveri in the South to the River Godavari in the North (1–36) and it is stated that the land bordered by places like Kisuvoḷal, Kopaṇa Nagara, Puligere and Oṅkunda constituted the pith of Kannada (1–37). The characteristics of the Kannadigas are also hinted (1-28, 29, 40, 42 ; 2-28) in glorious terms.

The names of earlier writers are also mentioned with respect. Rare forms of literature like Cattāṇa and Badaṇḍe and various forms of Dēśi in Kannada are also mentioned. Early Kannada (Haḷekannaḍa) is also referred to (p. 2, lines 1–9).

Kavirajamarga, first edited and published by the University of Madras in 1930, was out of print for a long time.

The University of Madras, following its policy of making available important University publications which have gone out of print, has kindly sanctioned this second and revised edition. My sincere thanks are due to the authorities of the Madras University.

University Buildings,
Madras.
21-12-1973

DR. A. SHANKER KEDILAYA,
Head of the Department of Kannada.

ಕವಿರಾಜಮಾರ್ಗದಲ್ಲಿಯ

ವಿಷಯ ಸೂಚಿಕೆ

—:*:—

1. ಈ 93 ನೆಯ ಕಂದವು ಲಕ್ಷ್ಯ ಲಕ್ಷಣ ಸಮನ್ವಯ ಪದ್ಯವಾದುದರಿಂದ 94 ನೆಯದಾಗಿಯೂ 94 ನೆಯ ಲಕ್ಷ್ಯಪದ್ಯವು 93 ನೆಯ ಪದ್ಯವಾಗಿಯೂ ಇರಬೇಕು. ಮೂಲಪ್ರತಿಗಳಲ್ಲಿದ್ದಂತೆ ಮುದ್ರಿಸಿದೆ, ಮತ್ತು “ವನರುಹದಳನಯನೇನಿ” ಎಂಬಲ್ಲಿ ಲಕ್ಷಣಾನುಗುಣವಾಗಿ “ವನರುಹ ದಳನಯ ನೆನಿ” ಎಂದು ಇರಬೇಕು.

ಪರಿಚ್ಛೇದ II.

---

* ಪದ್ಯ, ಪಾದ ಪ್ರತ್ಯಾಗತಲಕ್ಷ್ಯಗಳು ಲಕ್ಷಣಕ್ಕೆ ಹೋಲುವುದಿಲ್ಲ. ಪದ್ಯಗಳು ತುಂಬಾ ಅಶುದ್ಧವಾಗಿರುವಂತೆ ಕಾಣಬರುವುದು.

III. ಪರಿಚ್ಛೇದ

ಅವತರಣಿಕೆ

"ನೃಪತುಂಗ ರಚಿತ ಕವಿರಾಜಮಾರ್ಗ" ವೆಂದು ಈ ಮೊದಲೇ ಒಂದುಸಾರಿ ಮುದ್ರಿತವಾಗಿರುವ ಅಲಂಕಾರ ಗ್ರಂಥವು ಈಗ ನಮಗೆ ದೊರೆತಿರುವ ಕನ್ನಡ ಗ್ರಂಥಗಳೊಳಗೆಲ್ಲಾ ಅತಿ ಪ್ರಾಚೀನತಮವಾದುದು. ಇದು ಕನ್ನಡನಾಡಿನ ವಿಸ್ತಾರ, ಭಾಷಾಸ್ವರೂಪ, ಕನ್ನಡ ಕಾವ್ಯಗಳ ಲಕ್ಷಣ, ಹೆಸರು, ಶೈಲಿ, ಪ್ರಾಚೀನ ಕರ್ಣಾಟಕ ಕವಿಗಳು, ಮೊದಲಾದ ಹಲವು ಮುಖ್ಯವಿಷಯಗಳನ್ನು ತನ್ನ ಪೀಠಿಕೆಯಲ್ಲಿ ತಿಳಿಸಿಕೊಡುವುದಾದರೂ, ಸ್ವಕರ್ತೃವಿನ ವಿಷಯವನ್ನು ಮಾತ್ರ ಕಂಠೋಕ್ತವಾಗಿ ಎಲ್ಲಿಯೂ ತಿಳಿಸದಿರುವುದನ್ನು ನೋಡಿದರೆ ಅತ್ಯಾಶ್ಚರ್ಯವಾಗುವುದು. ಈ ಕಾರಣ ದಿಂದಲೇ ವಿಮರ್ಶಕರಿಗೆ ಈ ವಿಷಯವನ್ನು ವಿಚಾರಮಾಡುವ ಕುತೂಹಲವು ಪದೇ ಪದೇ ಹುಟ್ಟುವುದು ಸ್ವಾಭಾವಿಕವಾದುದೇ. ಈ ಗ್ರಂಥವು ಮುದ್ರಿತವಾಗಿ ಇಂದಿಗೆ ಮೂವತ್ತು ವರುಷಗಳಾದರೂ ಗ್ರಂಥಕರ್ತೃವಿನ ವಿಷಯವಾಗಿ ವಾದ ಪ್ರತಿವಾದ ಗಳು ಹುಟ್ಟಿ, ಇದು ವರೆಗೂ ಯಾವ ವಿಧವಾದ ಒಂದು ನೆಲೆಯನ್ನೂ ಹೊಂದಿರುವು ದಿಲ್ಲ. ಕ್ರಿ. ಶ. 815 ರಿಂದ 877 ರ ತನಕ ಆಳಿ ಬಾಳಿದ ರಾಷ್ಟ್ರಕೂಟ ಸಾರ್ವಭೌಮ ನಾದ ನೃಪತುಂಗನೇ ಈ "ಕವಿರಾಜಮಾರ್ಗ" ಗ್ರಂಥವನ್ನು ಬರೆದವನೆಂದು ಮೆ॥ ಬಿ. ಯಲ್. ರೈಸ್ ಸಾಹೇಬರವರೂ, ಮ॥ ರಾ॥ ಕೆ. ಬಿ. ಪಾಠಕರವರೂ, ವೇ॥ ಮೂ॥ ನಾರಾಯಣಶ್ರೀನಿವಾಸರಾಜಪುರೋಹಿತರೂ, ಒಂದು ಕಡೆಯಿಂದ ಸಾಧಿಸುತ್ತಿರುವರು. ಇದಕ್ಕೆ ಪ್ರತಿಯಾಗಿ ಡಾ॥ ಫ್ಲೀಟರವರು "ಈ ಕವಿರಾಜ ಮಾರ್ಗ" ಗ್ರಂಥವು, ರಾಷ್ಟ್ರಕೂಟ ರಾಜನಾದ ಅಮೋಘವರ್ಷ ಅಥವಾ ನೃಪ ತುಂಗನ ಆಳಿಕೆಯಲ್ಲಿ ರಚಿತವಾದುದೆಂದೂ, ಇದನ್ನು ಕವೀಶ್ವರನೆಂಬ ಬಿರು ದುಳ್ಳ ಒಬ್ಬ ಕವಿಯು ತನ್ನ ಆಶ್ರಯದಾತನಾದ ಅಮೋಘವರ್ಷನ ಪ್ರೋತ್ಸಾಹ ದಿಂದ ಬರೆದನೆಂದೂ, ಸಾಮಾನ್ಯವಾದ ಪ್ರೋತ್ಸಾಹ ಮಾತ್ರವೇ ಅಲ್ಲದೆ, ಈ ಗ್ರಂಥರಚನೆಯಲ್ಲಿ ಕವಿಗೆ ಮೊದಲಿನಿಂದ ಕೊನೆಯವರೆಗೂ ವಿಶೇಷವಾಗಿ ಸಲಹೆ ಗಳನ್ನು ಕೊಡುತ್ತ ಪ್ರಬಲವಾಗಿ ಪ್ರೋತ್ಸಾಹಿಸಿದ ನೃಪತುಂಗನಿಗೆ ಹೆಚ್ಚಿನ ಪ್ರಾಮುಖ್ಯವನ್ನು ಕೊಡಲುದ್ದೇಶಿಸಿ, ಕವಿಯು ಗ್ರಂಥದ ಹಲವೆಡೆಗಳಲ್ಲಿ "ನೃಪ ತುಂಗ ದೇವಮಾರ್ಗ" "ಉದಿತ" "ಉಕ್ತಿಕ್ರಮ" "ಅನುಮತ" ಎಂದೂ, ಪರಿಚ್ಛೇದಾಂತ್ಯಗದ್ಯಗಳಲ್ಲಿ ತನ್ನ ಹೆಸರನ್ನೇ ಹೇಳದೆ "ನೃಪತುಂಗಾನುಮತ" ಎಂದೂ ಹೇಳಿರುವುದರಿಂದ, ಅರ್ವಾಚೀನರಾದ ಭಟ್ಟಾಕಳಂಕ ಮೊದಲಾದವರಿಗೆ ನೃಪತುಂಗನೇ ಈ ಗ್ರಂಥವನ್ನು ಬರೆದನೆಂಬ ಭ್ರಾಂತಿಯುಂಟಾಗಿರಬಹುದೆಂದೂ

ಅಭಿಪ್ರಾಯಪಡುವರು. ಕರ್ಣಾಟಕ ಕವಿಚರಿತ್ರೆಯ ಕರ್ತೃಗಳಾದ ರಾವ್ ಬಹದ್ದೂರ್ ರಾ. ನರಸಿಂಹಾಚಾರ್ಯರವರು "ಯದ್ಯಪಿ ಈ ಗ್ರಂಥವು ನೃಪತುಂಗ ಗ್ರಂಥವೆಂದು ಪ್ರತೀತಿಯಿದ್ದರೂ ಮೂರು ಪರಿಚ್ಛೇದಗಳ ಅಂತ್ಯಪದ್ಯಗಳಲ್ಲಿ "ಶ್ರೀ ವಿಜಯ ಪ್ರಭೂತಮನಿದಂ............" ಎಂದಿರುವುದರಿಂದಲೂ, ಪರಿಚ್ಛೇದಾಂತ್ಯಗದ್ಯಗಳಲ್ಲಿ ನೃಪತುಂಗ "ವಿರಚಿತ" ಎಂದಿರದೆ ನೃಪತುಂಗ "ಅನುಮತ" ಎಂದಿರುವುದರಿಂದಲೂ, ದುರ್ಗಸಿಂಹನ ಪಂಚತಂತ್ರದಲ್ಲಿ ಉಕ್ತವಾಗಿರುವ "ಶ್ರೀ ವಿಜಯರ ಕವಿಮಾರ್ಗಂ" ಎಂಬ ಪದ್ಯದಿಂದಲೂ, ಶ್ರೀವಿಜಯನೆಂಬ ಬಿರುದು ನೃಪತುಂಗನಿಗೆ ಇತ್ತೆಂದು ಹೇಳಲು ಶಾಸನಾದಿಗಳ ಆವ ಆಧಾರಗಳೂ ಇದುವರೆಗೆ ದೊರಕಿಲ್ಲವಾದುದರಿಂದಲೂ, "ಶ್ರೀ ವಿಜಯ" ನೆಂಬ ನೃಪತುಂಗಸಭಾಸದನು ಈ ಗ್ರಂಥವನ್ನು ಬರೆದಿರಬಹುದೆಂಬ ಊಹೆಗೆ ಅವಕಾಶವಿದೆ" ಎಂದು ಅಭಿಪ್ರಾಯಪಡುವರು. ಮ. ರಾ. ರಾ॥ ಬ॥ ರಾ॥ ನರಸಿಂಹಾಚಾರ್ಯರವರ ಮೇಲಿನ ಅಭಿಪ್ರಾಯವನ್ನೇ ಮ॥ ರಾ॥ ಟಿ. ಯಸ್. ವೆಂಕಣ್ಣಯ್ಯನವರೂ, ಮ॥ ರಾ॥ ಎ. ಆರ್. ಕೃಷ್ಣಶಾಸ್ತ್ರಿಗಳವರೂ, ವಿಸ್ತರವಾಗಿ ಉಪಪಾದಿಸಿ ಬರೆದಿರುವರು.

ಹೀಗೆ ಭಿನ್ನ ಭಿನ್ನವಾಗಿ ಅಭಿಪ್ರಾಯಪಡುವ ವಿಮರ್ಶಕರೆಲ್ಲರೂ ಈ ಗ್ರಂಥವು ಅತಿ ಪ್ರಾಚೀನತಮವಾದುದೆಂದೂ, ಕ್ರಿ. ಶ. 815 ರಿಂದ 877 ರ ವರೆಗೆ ಆಳಿದ ಅಮೋಘವರ್ಷ ಅಥವಾ ನೃಪತುಂಗನ ಕಾಲದಲ್ಲಿ ರಚಿತವಾದುದೆಂದೂ, ನಿರ್ವಿವಾದವಾಗಿ ಒಪ್ಪಿಕೊಂಡಿದ್ದರೂ ಗ್ರಂಥಕರ್ತೃವಿನ ವಿಚಾರದಲ್ಲಿ ಮಾತ್ರ ಭಿನ್ನ ಭಿನ್ನರಾಗಿಯೇ ಇರುವರು. ಈ ವಿಮರ್ಶಕರೆಲ್ಲರೂ ಈ ಗ್ರಂಥದಲ್ಲಿಯೂ, ಇತರ ಗ್ರಂಥಗಳಲ್ಲಿಯೂ, ಶಾಸನಗಳಲ್ಲಿಯೂ, ದೊರಕಬಹುದಾದ, ಈ ಗ್ರಂಥಕ್ಕೆ ಸಂಬಂಧಪಟ್ಟ ವಿಷಯಗಳಲ್ಲಿ ಕೆಲವನ್ನು ತಾವು ಊಹಿಸುವ ವಿಷಯಕ್ಕೆ ತಕ್ಕಂತೆ ಅನ್ವಯಿಸಿ ಅರ್ಥಹೇಳಿಯೂ, ಕೆಲವನ್ನು ಸಂದಿಗ್ಧ ವಿಷಯಗಳೆಂದು ದೂರಮಾಡಿಯೂ, ಮತ್ತೆ ಕೆಲವಕ್ಕೆ ಗಮನವನ್ನೇ ಕೊಡದೆಯೂ, ಇರುವಂತೆ ಗೊತ್ತಾಗುವುದು. ಹೀಗೆ ಭಿನ್ನ ಭಿನ್ನವಾಗಿರುವ ಈ ಗ್ರಂಥದ ಬಾಹ್ಯಾಭ್ಯಂತರ ಸಾಧನಗಳಿಗೆ ಐಕಂತ್ಯವನ್ನು ಕಲ್ಪಿಸಿ, ಸಾಮಂಜಸ್ಯವನ್ನು ನಿರ್ವಹಿಸಲು ಒಟ್ಟಿನಲ್ಲಿ ಹೇಳಬಹುದಾದ ಅಭಿಪ್ರಾಯವೇ ಈ ಅವತರಣಿಕೆಯ ಮುಖ್ಯೋದ್ದೇಶವು.

ರಾಷ್ಟ್ರಕೂಟ ರಾಜನಾದ ನೃಪತುಂಗನು ಈ ಗ್ರಂಥದ ಕರ್ತೃವಲ್ಲ. ಶ್ರೀ ವಿಜಯನೆಂಬ ಕವಿಯು "ಕವಿಮಾರ್ಗ" ವೆಂಬ ಒಂದು ಲಕ್ಷಣ ಗ್ರಂಥವನ್ನು ಬರೆದಿದ್ದನು. ಕವೀಶ್ವರನೆಂಬ ಬಿರುದುಳ್ಳ ಕವಿಯೊಬ್ಬನು ಶ್ರೀ ವಿಜಯಕೃತವಾದ ಈ ಕವಿಮಾರ್ಗವನ್ನೇ ತೆಗೆದುಕೊಂಡು ಕೆಲವೆಡೆಗಳಲ್ಲಿ ಮಾರ್ಪಡಿಸಿ, ಮತ್ತೆ ಕೆಲವೆಡೆಗಳಲ್ಲಿ ಹೊಸದಾಗಿ ಕೆಲವು ವಿಷಯಗಳನ್ನು ಸೇರಿಸಿ, "ಕವಿರಾಜಮಾರ್ಗ" ವೆಂಬ ಹೆಸರಿನಿಂದ ಈ ಗ್ರಂಥವನ್ನು ಬರೆದು, ತನ್ನ ಆಶ್ರಯದಾತನೂ "ನೃಪತುಂಗ" "ಅತಿಶಯಧವಳ"

ಮೊದಲಾದ ಬಿರುದುಗಳುಳ್ಳವನೂ, ಆದ ಅಮೋಘವರ್ಷನೆಂಬ ರಾಷ್ಟ್ರಕೂಟ ಸಾರ್ವಭೌಮನಿಂದ ವಿಶೇಷ ಪ್ರಯೋಜನವನ್ನು ಹೊಂದಿ, ನೃಪತುಂಗನೇ ಈ ಗ್ರಂಥವನ್ನು ಬರೆದನೆಂಬ ಪ್ರವಾದವು ಬರಬೇಕೆಂದು ತನ್ನ ಹೆಸರನ್ನು ಎಲ್ಲಿಯೂ ಸ್ಪಷ್ಟವಾಗಿ ಹೇಳದೆ, ಸೂಕ್ಷ್ಮವಿಚಾರಿಗಳಿಗೆ ಮಾತ್ರ ತಿಳಿವಂತೆ, ಅಲ್ಲಲ್ಲಿ ಈ ವಿಷಯ ವನ್ನು ಸೂಚಿಸಿರುವನೆಂದು ಊಹಿಸುವುದಕ್ಕೆ ಕಾರಣಗಳಿವೆ. ಈ ಪದ್ಧತಿಯು ಸಂಸ್ಕೃತ ಕವಿಗಳಲ್ಲಿಯೂ ಸಾಧಾರಣವಾಗಿ ಇದ್ದೇ ಇರುವುದು. ರತ್ನಾವಳಿ, ನಾಗಾನಂದ, ಪ್ರಿಯದರ್ಶಿಕಾ ಎಂಬ ಮೂರು ಸಂಸ್ಕೃತ ನಾಟಕಗಳನ್ನೂ ಕ್ರಿ. ಶ. ಏಳನೇ ಶತಮಾನದಲ್ಲಿ ವಿಸ್ತಾರವಾದ ಉತ್ತರ ಹಿಂದುಸ್ಥಾನದ ಸಾಮ್ರಾಜ್ಯವನ್ನು ಆಳಿದ ಶ್ರೀಹರ್ಷ (ಹರ್ಷವರ್ಧನ) ಚಕ್ರವರ್ತಿಯು ಬರೆದನೆಂದು, "ಶ್ರೀ ಹರ್ಷೋ ನಿಪುಣಃ ಕವಿಃ ಪರಿಷದಪ್ಯೇಷಾ ಗುಣಗ್ರಾಹಿಣೀ" ಎಂಬ ಆಯಾ ನಾಟಕಗಳ ಕವಿ ಕಾವ್ಯಪ್ರಶಂಸಾ ಸೂಚಕವಾದ ಪ್ರಸ್ತಾವನೆಯ ಪದ್ಯದಿಂದ ತಿಳಿದುಬರುವುದರಿಂದ, ಜನರೆಲ್ಲರೂ ಶ್ರೀ ಹರ್ಷನೇ ಈ ನಾಟಕಗಳ ಕರ್ತೃವೆಂದು ತಿಳಿದುಕೊಂಡಿರುವರು. ಆದರೆ ಕ್ರಿ. ಶ. 12 ನೇ ಶತಮಾನದಲ್ಲಿ ಬರೆಯಲ್ಪಟ್ಟು ಅಲಂಕಾರ ಗ್ರಂಥಗಳಲ್ಲಿ ಪ್ರಾಮಾಣಿಕವೆಂದು ಅಂಗೀಕೃತವಾಗಿರುವ "ಕಾವ್ಯಪ್ರಕಾಶ" ದಲ್ಲಿಯ ಕಾವ್ಯ ಪ್ರಯೋಜನಗಳನ್ನು ಹೇಳುವ "ಕಾವ್ಯಂ ಯಶಸೇಽರ್ಥಕೃತೇ" ಎಂಬ ವಾಕ್ಯಕ್ಕೆ ವ್ಯಾಖ್ಯಾಕಾರರು ಯಶಸ್ಸಿಗಾಗಿ ಕಾಳಿದಾಸಾದಿಗಳೂ, ದ್ರವ್ಯಾರ್ಜನೆಗಾಗಿ ಧಾವು ಕಾದಿಗಳೂ ಕಾವ್ಯಗಳನ್ನು ಬರೆದರೆಂಬುದಕ್ಕೆ "ಶ್ರೀ ಹರ್ಷಾದೇಃ ಧಾವುಕಾದೀನಾ ಮಿವಧನಂ" ಎಂಬಲ್ಲಿ, ಧಾವುಕನು ಧನಕ್ಕಾಗಿ ಶ್ರೀ ಹರ್ಷನ ಹೆಸರಿನಲ್ಲಿ ಕಾವ್ಯಗಳನ್ನು ಬರೆದನೆಂದು ವಿವರಣೆ ಮಾಡಿರುವರು. 7 ನೇ ಶತಮಾನದಲ್ಲಿದ್ದ ಧಾವುಕನನ್ನು 9 ನೇ ಶತಮಾನದಲ್ಲಿದ್ದ ಕವೀಶ್ವರನು ಅನುಕರಿಸಿ ತಾನು ಬರೆದ ಕವಿರಾಜಮಾರ್ಗ ಗ್ರಂಥ ವನ್ನು ತನ್ನ ಆಶ್ರಯದಾತನಾದ ನೃಪತುಂಗನೇ ಬರೆದಂತೆ ಆ ಗ್ರಂಥದಲ್ಲಿ ಅಲ್ಲಲ್ಲಿ ಹೇಳಿರುವನೆಂದರೆ ಅದು ಅನುಚಿತವೆನಿಸಿಕೊಳ್ಳಲಾರದು.

ಕನ್ನಡದಲ್ಲಿ ಕಾವ್ಯಲಕ್ಷಣವನ್ನು ವಿಶದವಾಗಿ ಉಪಪಾದಿಸುವ ಅಲಂಕಾರ ಗ್ರಂಥ ವಾದ ಕಾವ್ಯಾವಲೋಕನವನ್ನು ಬರೆದ ನಾಗವರ್ಮನು ಪ್ರಾಚೀನವಾದ ಈ ಅಲಂಕಾರ ಗ್ರಂಥದ ಹೆಸರನ್ನೇ ಹೇಳಿರುವುದಿಲ್ಲ. ನಾಗವರ್ಮನಿಗೆ ಅರ್ವಾಚೀನನೂ ಕೇವಲ ವೈಯಾಕರಣನೂ ಆದ ಕೇಶಿರಾಜನು ಸ್ವಕೃತ ಶಬ್ದಮಣಿದರ್ಪಣದಲ್ಲಿ ಸ್ತುತ್ಯರಾದ ಪೂರ್ವಕವಿಗಳ ಗೋಷ್ಠಿಯಲ್ಲಿ "ಶ್ರೀ ವಿಜಯ" ಎಂಬ ಹೆಸರನ್ನು ಹೇಳಿ, ಕವೀಶ್ವರ ಅಥವಾ ನೃಪತುಂಗನ ಹೆಸರನ್ನು ಹೇಳದೆ, ಈ ಕವಿರಾಜಮಾರ್ಗದಲ್ಲಿರುವ ಮೂರು ಪದ್ಯಗಳನ್ನು ಸ್ವಲ್ಪ ಪಾಠ ಭೇದದಿಂದ ಉದಾಹರಿಸಿರುವನು. ನೃಪತುಂಗನ ಕಾಲಕ್ಕೆ ಬಹಳ ಅರ್ವಾಚೀನ ನಾದ (ಕ್ರಿ. ಶ. 1640) ಭಟ್ಟಾಕಳಂಕನು ಮಾತ್ರ ದಕ್ಷಿಣೋತ್ತರಮಾರ್ಗಗಳ ಸ್ವರೂಪ ವನ್ನು ವಿವರಿಸುವ ಈ ಗ್ರಂಥವನ್ನು ನೃಪತುಂಗ ಗ್ರಂಥವೆಂದು ಹೇಳಿರುವನು. ಇವುಗಳೆಲ್ಲ ವನ್ನೂ ನೋಡಿದರೆ, ನಾಗವರ್ಮನ ಕಾಲಕ್ಕೆ ಅಲಂಕಾರ ಶಾಸ್ತ್ರದಲ್ಲಿ ಭಿನ್ನ ಭಿನ್ನ ಮತ

ಗಳನ್ನು ಸೂಚಿಸುವ ಹಲವು ಗ್ರಂಥಗಳು ಹುಟ್ಟಿದ್ದುದರಿಂದ, ನಾಗವರ್ಮನು ಪ್ರಾಚೀನರಾದ ಲಾಕ್ಷಣಿಕರ ಮತವನ್ನು ಮಾತ್ರ ಅನುಸರಿಸಿ ಕನ್ನಡದಲ್ಲಿ ಸ್ವತಂತ್ರ ಗ್ರಂಥವಲ್ಲದ (ಪರಿವರ್ತಿತವಾದ) ಈ ಕವಿರಾಜಮಾರ್ಗವನ್ನು ಅನುಸರಿಸದೆಯೂ, ಇದರ ಹೆಸರನ್ನು ಕೂಡ ಹೇಳದೆಯೂ ಇರಬಹುದೆಂದು ತೋರುತ್ತದೆ. ಈತನು ಭಾಮಹ, ದಂಡಿ, ವಾಮನ, ರುದ್ರಟ, ಅಮರಸಿಂಹ, ಉದ್ಭಟ, ಮೊದಲಾದ ಹಲವು ಸಂಸ್ಕೃತ ಅಲಂಕಾರಿಕರ ಗ್ರಂಥಗಳಿಗೆ ಗಮನಕೊಟ್ಟು, ಅವರ ಅಭಿಪ್ರಾಯಗಳನ್ನು ಸಂಗ್ರಹಿಸಿ, ತಾನೇ ಸ್ವತಂತ್ರ ಗ್ರಂಥವನ್ನು ಬರೆದುದರಿಂದ, ಶ್ರೀ ವಿಜಯನ ಕವಿಮಾರ್ಗಕ್ಕಾಗಲಿ, ಕವೀಶ್ವರನ ಈ ಕವಿರಾಜಮಾರ್ಗಕ್ಕಾಗಲಿ, ಪ್ರಾಮುಖ್ಯವನ್ನು ಕೊಡದಿರಬಹುದು. ಕೇಶಿರಾಜನ ಕಾಲದಲ್ಲಾದರೋ ಪ್ರಾಚೀನವಾದ ಶ್ರೀ ವಿಜಯನ ಕವಿಮಾರ್ಗವೇ ವಿಶೇಷ ಪ್ರಚಾರದಲ್ಲಿದ್ದುದರಿಂದ, ತತ್ಕರ್ತೃವಾದ ಶ್ರೀ ವಿಜಯನನ್ನು ಪೂರ್ವ ಕವಿಗೋಷ್ಠಿಯಲ್ಲಿ ಸೇರಿಸಿ ಸ್ತುತಿಸಿ, ಆ ಗ್ರಂಥದಿಂದಲೇ ತಾನೂ ಮೂರು ನಾಲ್ಕು ಪದ್ಯಗಳನ್ನು ಲಕ್ಷ್ಯವಾಗಿ ಉದಾಹರಿಸಿರಬಹುದೆಂದು ತೋರುತ್ತದೆ. ಅರ್ವಾಚೀನನಾದ ಭಟ್ಟಾಕಳಂಕನ ಕಾಲಕ್ಕೆ ಶ್ರೀ ವಿಜಯನ ಕವಿಮಾರ್ಗವು ಕಾರಣಾಂತರಗಳಿಂದ ದೊರಕದೆ ಈ ಕವಿರಾಜಮಾರ್ಗವೇ ಹೆಚ್ಚಿನ ಪ್ರಾಶಸ್ತ್ಯವನ್ನು ಪಡೆದಿದ್ದುದರಿಂದ ಈ ಗ್ರಂಥವನ್ನೇ ನೃಪತುಂಗನ ಗ್ರಂಥವೆಂದು ಈತನು ಭ್ರಮಿಸಿರಬಹುದೆಂದು ಊಹಿಸಿ ಹೇಳುವುದು ಅಷ್ಟೊಂದು ಅನುಚಿತವಾಗಲಾರದು.

ನಮ್ಮ ಅಭಿಪ್ರಾಯಕ್ಕೆ ಪ್ರಕೃತದಲ್ಲಿ ದೊರೆತಿರುವ ಸಾಧನಗಳೆಲ್ಲವೂ, ಎಷ್ಟರ ಮಟ್ಟಿಗೆ ಸಹಾಯಕಗಳಾಗುವುವೆಂಬುದನ್ನು ಇನ್ನು ವಿಚಾರಮಾಡುವೆವು.

೧. ಶ್ರೀ ವಿಜಯ ಕೃತ ಕವಿಮಾರ್ಗ

ಈ ಕವಿರಾಜಮಾರ್ಗ ಗ್ರಂಥದಲ್ಲಿ ಹೇಳಿರುವ "ಪರಮ ಶ್ರೀ ವಿಜಯ......... ತದಾದ್ಯಕಾವ್ಯಕ್ಕೆಂದುಂ" ಎಂಬ ವಾಕ್ಯದಿಂದ ಶ್ರೀ ವಿಜಯನು ಒಬ್ಬ ಕವಿಯೆಂಬುದು ಸ್ಪಷ್ಟವಾಗುವುದು. "ಶ್ರಿ ವಿಜಯರ "ಕವಿಮಾರ್ಗಂ" ಎಂದು ದುರ್ಗಸಿಂಹನು ತನ್ನ ಪಂಚತಂತ್ರದ ಪೀಠಿಕಾಪ್ರಕರಣದಲ್ಲಿ ಶ್ರೀ ವಿಜಯನು "ಕವಿಮಾರ್ಗ"ವೆಂಬ ಗ್ರಂಥವನ್ನು ಬರೆದನೆಂದು ಹೇಳಿರುವುದರಿಂದ, ದುರ್ಗಸಿಂಹನು ಹೇಳುವ ಶ್ರೀ ವಿಜಯನೇ ಈತನಾಗಿರಬಹುದೆಂದೂ ಹೇಳಬಹುದು. ಈ ಕವಿರಾಜಮಾರ್ಗದ ಪರಿಚ್ಛೇದಾಂತ್ಯ ಪದ್ಯಗಳಲ್ಲಿ "ಶ್ರೀ ವಿಜಯ ಪ್ರಭೂತಮನಿದಂ" ಎಂಬ ಭಾಗಗಳಿಂದ, ಶ್ರೀ ವಿಜಯನು ಒಂದು ಅಲಂಕಾರ ಗ್ರಂಥವನ್ನು ಬರೆದಿರಬಹುದೆಂದು ಸೂಚಿತವಾಗುವುದರಿಂದ, ಶ್ರೀ ವಿಜಯನು ಬರೆದ "ಕವಿಮಾರ್ಗವು" ಒಂದು ಅಲಂಕಾರ ಗ್ರಂಥವಾಗಿಯೇ ಇರಬೇಕು. ಈ ಕವಿಮಾರ್ಗವನ್ನನುಸರಿಸಿ ಎಂದರೆ, ಅದರ ಹಲವು ಭಾಗಗಳನ್ನೇ ಆರಿಸಿಕೊಂಡು, ಈ ಪ್ರಕೃತ ಕವಿರಾಜಮಾರ್ಗ ಗ್ರಂಥವು ವಿರಚಿತವಾಗಿರಬೇಕೆಂಬ ಅಂಶಕ್ಕೆ ಈ ಗ್ರಂಥದ ಮೂರನೆಯ ಪದ್ಯವಾದ ಸರಸ್ವತೀ ಸ್ತುತಿರೂಪವಾದ ಮಂಗಳ ಪದ್ಯವು ಹೆಚ್ಚು

ಸಹಾಯಕವಾಗುತ್ತಿದೆ. ಸರಸ್ವತೀ ಸ್ತುತಿರೂಪವಾದ ಮಂಗಳ ಪದ್ಯಗಳನ್ನುಳ್ಳ ದಂಡಿಯ ಕಾವ್ಯಾದರ್ಶವನ್ನನುಸರಿಸಿಯೇ ಈ ಕವಿಮಾರ್ಗವು ಬರೆಯಲ್ಪಟ್ಟಿರುವುದೆಂದು ಊಹಿಸುವುದಕ್ಕೂ ಕಾರಣಗಳಿವೆ. ಕನ್ನಡ ಕವಿಗಳು ಸಾಧಾರಣವಾಗಿ ಗ್ರಂಥದ ಆದಿಯ ಮಂಗಳ ಪದ್ಯಗಳ ಪ್ರಾರಂಭದಲ್ಲಿ “ಶ್ರೀ” ಶಬ್ದವಿರಬೇಕೆಂಬ ನಿಯಮವನ್ನನುಸರಿಸಿರುವುದರಿಂದ, ಕವಿರಾಜಮಾರ್ಗದಲ್ಲಿ ಶ್ರೀ ಶಬ್ದವನ್ನು ಆದಿಯಲ್ಲಿ ಉಳ್ಳ ಸರಸ್ವತೀ ಸ್ತುತಿರೂಪವಾದ ಮೂರನೆಯ ಪದ್ಯವು ಒಂದು ಗ್ರಂಥದ ಮಂಗಳ ಪದ್ಯವೆಂಬುದರಲ್ಲಿ ಸಂದೇಹವಿಲ್ಲ. ಪರಿಶೇಷಾನುಮಾನದಿಂದ ಇದೇ ಕವಿಮಾರ್ಗದ ಮಂಗಳ ಪದ್ಯವೆಂದೂ ತಿಳಿಯಬಹುದು. ಕವಿರಾಜಮಾರ್ಗ ಗ್ರಂಥಕರ್ತನು ಕವಿಮಾರ್ಗದ ಈ ಮಂಗಳ ಪದ್ಯವನ್ನು ತೆಗೆದುಕೊಂಡು, ತನ್ನ ಗ್ರಂಥದಲ್ಲಿ ಸೇರಿಸಿ, ತಾನೂ ತನ್ನ ಗ್ರಂಥಕ್ಕೆ ಹೊಸದಾಗಿ ಮತ್ತೆರಡು ಮಂಗಳಪದ್ಯಗಳನ್ನು ಮಾಡಿ ಸೇರಿಸಿರುವನು. ವೈದಿಕಮತಾನುಸಾರಿಯಾದ ದಂಡಿಯ ಸರಸ್ವತೀ ಸ್ತುತಿರೂಪವಾದ ಮಂಗಳ ಪದ್ಯದಲ್ಲಿರುವ “ಚತುರ್ಮುಖಮುಖಾಂಭೋಜವನ” (ಎಂದರೆ ವೈದಿಕಪುರಾಣಗಳಲ್ಲಿ ಸರಸ್ವತಿಯು ಸರ್ವದಾ ಬ್ರಹ್ಮನ ಮುಖದಲ್ಲಿರುವಳು ಎಂಬ ವರ್ಣನೆಯಿರುವುದು. ಜೈನರಲ್ಲಿ ಈ ರೀತಿ ಇಲ್ಲ) ಎಂಬ ವಿಶೇಷಣವೊಂದು ಹೊರತು ಉಳಿದ ವಿಶೇಷಣಗಳೆಲ್ಲವೂ ಈ ಮಂಗಳ ಪದ್ಯದಲ್ಲಿ ಕಂಡುಬರುವುದೆಂಬುದನ್ನು ಈ ಕೆಳಗೆ ತೋರಿಸಿರುವ ಹೋಲಿಕೆಯಿಂದ ಕಾಣಬಹುದು.

(ದಂಡಿಯಪದ್ಯದಲ್ಲಿರುವ ಪದಗಳು.)	(ಕವಿಮಾರ್ಗದ ಪದ್ಯದಲ್ಲಿರುವ ಪದಗಳು.)
ಸರ್ವಶುಕ್ಲಾ	ಶ್ರೀವಿಶದವರ್ಣೆ.
(ಚತುರ್ಮುಖಮುಖಾಂಭೋಜವನ)	
ಹಂಸವಧೂಃ	ಹಂಸವಿಭಾವದೆ.
ಮಮ	ಮನ್ಮಾನಸದೊಳ್.
ಸರಸ್ವತೀ	ಸರಸ್ವತೀದೇವಿ.
ರಮತಾಂ	ಕೂರ್ತು ನೆಲೆಗೊಳ್ಗೆ.

ಮಧುರಾರಾವೋಚಿತೆ—ಚತುರರುಚಿರ ಪದರಚನೆ—ಚಿರಂದೇವಿ, ಎಂಬೀ ಪದಗಳು ದಂಡಿಯ ಪದ್ಯದಲ್ಲಿಲ್ಲ. ಇವನ್ನು ವೃತ್ತಪೂರ್ತಿಗಾಗಿಯೂ, ಕಾವ್ಯಪರವಾಗಿ ಮತ್ತೊಂದರ್ಥವು ತನ್ನ ಪದ್ಯದಲ್ಲಿ ತೋರುವುದಕ್ಕಾಗಿಯೂ, ಈ ಕವಿಯು ಸೇರಿಸಿರುವನು. ಈ ಬಗೆಯ ಬದಲಾವಣೆಯಿಂದ ಕವಿಮಾರ್ಗಕರ್ತೃವಾದ ಈ ಶ್ರೀ ವಿಜಯನು ಜೈನಮತದವನೆಂದೂ ಹೇಳಬಹುದು.

ಕೇಶಿರಾಜನು ಪೂರ್ವಕವಿಗಳ ಕಾವ್ಯಗಳು ತನ್ನ ಲಕ್ಷಣಗ್ರಂಥಕ್ಕೆ ಲಕ್ಷ್ಯಗಳೆಂದು ಹೇಳಲು ಹೊರಟು, ಪೂರ್ವಕವಿಗೋಷ್ಠಿಯಲ್ಲಿ ಈ ಶ್ರೀ ವಿಜಯನನ್ನು ಸೇರಿಸಿ ಹೇಳುವ ಸಂದರ್ಭದಲ್ಲಿ, ಬಹು ಪ್ರಾಚೀನರಾದ “ಗಜಗ, ಗುಣನಂದಿ, ಮನಸಿಜ, ಅಸಗ (ಈತನನ್ನು ಪೊನ್ನನು ಹೇಳಿರುವನು), ಚಂದ್ರಭಟ್ಟ, ಗುಣವರ್ಮ” ಎಂಬ ಕವಿಗಳನ್ನು

ಹೇಳಿ ಹತ್ತನೆಯ ಶತಮಾನದವರಾದ ಪಂಪ ಪೊನ್ನ ರನ್ನರನ್ನು ಹೇಳುವ ಮೊದಲು ಶ್ರೀ ವಿಜಯನ ಹೆಸರನ್ನು ಹೇಳುವನು. ಹೀಗೆ ಹೇಳುವ ಕೇಶಿರಾಜನು ಶ್ರೀ ವಿಜಯ ಕವಿಯ ಗ್ರಂಥದಿಂದ ಅವುದನ್ನಾದರೂ ಲಕ್ಷ್ಯವನ್ನು ತೆಗೆದುಕೊಂಡೇ ಇರಬೇಕು. ಅಲ್ಲದೆ ಕೇಶಿರಾಜನು ತನ್ನ ವ್ಯಾಕರಣ ಗ್ರಂಥದಲ್ಲಿ ಅಲಂಕಾರಕ್ಕೆ ಸಂಬಂಧಪಡುವ ಒಂದೆರಡು ವಿಷಯಗಳನ್ನು ಹೇಳುವಾಗ, ಲಘ್ವಕ್ಷರಾಂತವಾದ ಪದದ ಮುಂದೆ ಒತ್ತಕ್ಷರದ ಪದವನ್ನು ಹೇಳಕೂಡದೆಂಬ ಲಕ್ಷಣವನ್ನು ಹೇಳಿ, ಈ ಕವಿರಾಜಮಾರ್ಗದಲ್ಲಿ ತೋರುವ ಪದ್ಯವನ್ನೇ ಉದಾಹರಿಸಿರುವನು. ಮತ್ತು ಲಿಂಗಲಕ್ಷಣವನ್ನು ಹೇಳುವಾಗ ಸಮಸಂಸ್ಕೃತಕ್ಕೂ ದೇಶ್ಯಕ್ಕೂ ಸಮಾಸಮಾಡಕೂಡದೆಂಬ ಲಕ್ಷಣಕ್ಕೆ ಈ ಗ್ರಂಥದಲ್ಲಿನ ಲಕ್ಷ್ಯ ಪದ್ಯವನ್ನೇ "ಅರಸುಕುಮಾರ...ಮಾರ್ಗಂ" ಉದಾಹರಿಸಿರುವನು. ಆಪಾತತಃ ನೃಪತುಂಗ ಕರ್ತೃಕವೆಂದು ಕಂಡುಬರುವ ಈ ಕವಿರಾಜ ಮಾರ್ಗದಿಂದಲೇ ಆತನು ವಿಷಯವನ್ನೂ ಲಕ್ಷ್ಯಪದ್ಯವನ್ನೂ ಆರಿಸಿಕೊಂಡಿದ್ದರೆ, ಪೂರ್ವಕವಿಗಳ ಗೋಷ್ಠಿಯಲ್ಲಿ ನೃಪತುಂಗನ ಹೆಸರನ್ನು ಎಂದಿಗೂ ಸೇರಿಸದೆ ಬಿಡುತ್ತಿರಲಿಲ್ಲ. ಹೀಗೆ, ಲಕ್ಷ್ಯ ಗ್ರಂಥಕರ್ತೃಗಳ ಗೋಷ್ಠಿಯಲ್ಲಿ ನೃಪತುಂಗನ ಹೆಸರನ್ನೇ ಹೇಳದೆ, ಶ್ರೀ ವಿಜಯನ ಹೆಸರನ್ನೇ ಹೇಳಿರುವುದರಿಂದ, ಶಬ್ದಮಣಿದರ್ಪಣದಲ್ಲಿ ದೊರೆವ ಪದ್ಯಗಳು ಈ ಶ್ರೀ ವಿಜಯನ ಕವಿಮಾರ್ಗದ ಪದ್ಯಗಳೆಂದೇ ಹೇಳಬೇಕಾಗುವುದು. ಕವಿರಾಜಮಾರ್ಗದಲ್ಲಿ ತೋರುವ ಪಾಠಕ್ಕೂ, ಶಬ್ದಮಣಿದರ್ಪಣದಲ್ಲಿ ತೋರುವ ಪಾಠಕ್ಕೂ, ಸ್ವಲ್ಪ ಭೇದವು ಇರುವುದರಿಂದ, ಕವಿರಾಜಮಾರ್ಗ ಕರ್ತೃವು ಕವಿಮಾರ್ಗದಿಂದ ತಾನು ಆರಿಸಿಕೊಂಡ ಈ ಪದ್ಯಗಳಲ್ಲಿ ಸ್ವಲ್ಪ ಮಾರ್ಪಾಡನ್ನೂ ಮಾಡಿರುವನೆಂದು ಹೇಳಬಹುದು. ಅಲ್ಲದೆ, ಈ ಕವಿರಾಜಮಾರ್ಗದಲ್ಲಿರುವ "ನುಡಿಗೆಲ್ಲಂ ಸಲ್ಲದ... (I-32) ಎಂಬ ಪದ್ಯವು ಒಂದು ಹಸ್ತಲಿಖಿತ ಪ್ರತಿಯಲ್ಲಿಲ್ಲ. ಆದರೆ ಶಬ್ದಮಣಿದರ್ಪಣದಲ್ಲಿ ಉದಾಹೃತವಾಗಿದೆ. ಆದುದರಿಂದ ಈ ಕವಿರಾಜಮಾರ್ಗವನ್ನು ಬರೆದವನು ತನ್ನ ಕಾಲಕ್ಕೇ ಅಪ್ರಸಿದ್ಧವಾಗಿದ್ದ ಚತ್ತಾಣ, ಬೆದಂಡೆ, ಎಂಬ ಕಾವ್ಯಗಳಿಗೆ ಉದಾಹರಣೆಯನ್ನು ಕೊಡಲು ಶಕ್ತಿಸಾಲದೆ, ಕವಿಮಾರ್ಗದ ಚತ್ತಾಣ ಬೆದಂಡೆ ಎಂಬ ಕನ್ನಡ ಕಾವ್ಯಭೇದಗಳ ಹೆಸರನ್ನು ಉಪಪಾದಿಸುವ, ಆ ಪದ್ಯವನ್ನು ಬಿಟ್ಟಿದ್ದರೂ ಇರಬಹುದು. ಈ ಕೇಶಿರಾಜನಿಗೆ ಸ್ವಲ್ಪ ಕಾಲ ಹಿಂದೆ ಇದ್ದ ನಾಗವರ್ಮನೂ, ಚತ್ತಾಣ, ಬೆದಂಡೆ, ಕಾವ್ಯಗಳ ಲಕ್ಷಣವನ್ನು ಹೇಳಿರುವನು. ಉದಾಹರಣೆಗಳನ್ನು ಮಾತ್ರ ಕೊಡಲಿಲ್ಲ. ಕೇಶಿರಾಜನು ಮಾತ್ರ ಕವಿಮಾರ್ಗದಿಂದಲೇ ಕವಿರಾಜಮಾರ್ಗದಲ್ಲಿಲ್ಲದ ಈ ಪದ್ಯವನ್ನು ಆರಿಸಿಕೊಂಡನೆಂಬುದಕ್ಕೆ ಇದೂ ಒಂದು ರೀತಿಯಿಂದ ಸಹಕಾರಿಯಾಗುವುದು.

ಈ ಶ್ರೀ ವಿಜಯನು ಈ ಕವಿಮಾರ್ಗವಲ್ಲದೆ ಬೇರೆ ಗ್ರಂಥಗಳನ್ನೂ ಬರೆದಿರುವಂತೆ ಊಹಿಸಲು ಅವಕಾಶವಿದೆ. ಮಂಗರಸನು ತನ್ನ ನೇಮಿಜಿನೇಶ ಸಂಗತಿಯಲ್ಲಿ, "ಕನ್ನಡ ಚಂಪೂಕಾವ್ಯಮಂ ಪೇಳ್ದ ಕವೀಶ್ವರರ ಪೇಟುವೆನು" ಎಂದು ಆರಂಭಿಸಿ, "ದೇವಚಂದ್ರಪ್ರಭರನು ಕೊಂಡಾಡಿದ ಶ್ರೀ ವಿಜಯರ" ಎಂದು ಹೇಳಿರುವುದನ್ನು, ಪಿರಿಯಪಟ್ಟಣದ

ದೊಡ್ಡಯ್ಯನ "ಚಂದ್ರ ಪ್ರಭಾಪುರಾಣಮಂ ಪೇೞ್ದ ವಿಜಯ ಕವೀಂದ್ರ" ಎಂಬ ಹೇಳಿಕೆಯು ದೃಢಪಡಿಸುತ್ತದೆ. ಆದುದರಿಂದ ಈ ಶ್ರೀ ವಿಜಯನು ಕನ್ನಡದಲ್ಲಿ ಚಂದ್ರ ಪ್ರಭ ಪುರಾಣವೆಂಬ ಚಂಪೂಕಾವ್ಯವೊಂದನ್ನು ಬರೆದನೆಂದು ವ್ಯಕ್ತವಾಗುವುದು. ಈಗ ಪ್ರಚಾರದಲ್ಲಿರುವ ಚಂದ್ರಪ್ರಭ ಪುರಾಣವು ಅಗ್ಗಳಕೃತವು. ಶ್ರೀ ವಿಜಯಕೃತ ಗ್ರಂಥವು ಇನ್ನೂ ದೊರಕಲಿಲ್ಲ. ಶಬ್ದಮಣಿದರ್ಪಣದಲ್ಲೂ, ಕಾವ್ಯಾವಲೋಕನದಲ್ಲೂ ನೃಪತುಂಗ ಭೂಪನನ್ನು ಸ್ತುತಿಸುವ ನಾಲ್ಕಾರುಪದ್ಯಗಳು ದೊರಕುವುವು. ಇದರಿಂದ ಶ್ರೀ ವಿಜಯನು ನೃಪತುಂಗನನ್ನುದ್ದೇಶಿಸಿ ಒಂದು ಕಾವ್ಯವನ್ನು ಬರೆದಿರಬಹುದೆಂದು ಊಹಿಸಲೂ ಅವ ಕಾಶವುಂಟು. ಕೇಶಿರಾಜನು ಈತನನ್ನು ಪೂರ್ವ ಕವಿಗಳಾದ ಅಸಗ, ಮೊದಲಾದ ಪ್ರಾಚೀನ ಕವಿಗೋಷ್ಠಿಯಲ್ಲಿ ಸೇರಿಸಿರುವುದರಿಂದಲೂ, ಈ ಕವಿರಾಜಮಾರ್ಗದಲ್ಲಿ "ಪರಮ ಶ್ರೀ ವಿಜಯ" ಎಂಬಲ್ಲಿ "ಪರಮ" (ಶ್ರೇಷ್ಠವಾದ) ಎಂಬ ವಿಶೇಷಣವು ಇರುವುದ ರಿಂದಲೂ, ದುರ್ಗಸಿಂಹನ "ಶ್ರೀ ವಿಜಯರ ಕವಿಮಾರ್ಗಂ" ಎಂಬ ಬಹುವಚನ ಪ್ರಯೋಗ ದಿಂದಲೂ, ಈತನು ಪ್ರಸಿದ್ಧನಾದ ಒಬ್ಬ ಆಚಾರ್ಯನಾಗಿದ್ದನೆಂದೂ, ನಾವು ಹೇಳಬಹುದು.

ಈ ಕವಿರಾಜಮಾರ್ಗದಲ್ಲಿ "ಪರಮಕವೀಶ್ವರರಕೃತಕಾಚಾರಪರರ್; ಪರಮ ಕವಿ ವೃಷಭರ್ಕಳ್; ಪರಮಕವಿ ಪ್ರಧಾನರಾಕಾವ್ಯಂಗಳ್; ಪರಮಾಚಾರ್ಯರ ಪೋಲ್ ಸಯ್ತಿರಲ್; ಪರಮಾಚಾರ್ಯರ್......ಮಿಕ್ಕರ್; ಪರಮಕವೀಶ ಪ್ರಯೋಗ ಗತಮಾರ್ಗ" ಎಂಬ ಪದಗಳು ದೊರಕುವುದರಿಂದ, ಈ ಕವಿರಾಜಮಾರ್ಗಕರ್ತೃವು ತನ್ನ ಗ್ರಂಥಕ್ಕೆ ಆಧಾರ ಭೂತವಾದ ಕವಿಮಾರ್ಗಗ್ರಂಥವನ್ನು ಬರೆದಿದ್ದ ಪರಮ ಶ್ರೀ ವಿಜಯನನ್ನೇ ಈ ಪದಗಳಿಂದ ಸೂಚಿಸಿರುವನೆಂದೂ ತಿಳಿದುಬರುವುದರಿಂದ, ಈ ಶ್ರೀ ವಿಜಯನು ಕವಿ ರಾಜಮಾರ್ಗ ಗ್ರಂಥಕರ್ತೃವಿಗೆ ಒಂದುವೇಳೆ ಗುರುವಾಗಿದ್ದರೂ ಇರಬಹುದು ಎಂದು ನಾವು ತಿಳಿಯಬಹುದು.

ಈ ಕವಿರಾಜಮಾರ್ಗದಲ್ಲಿ ಹೇಳಿರುವ "ಅಱಪುವೆಂ ತದ್ಭವದೊಳ್" ಎಂಬ ಪದ್ಯ ದಲ್ಲಿ ತದ್ಭವ ಶಬ್ದಕ್ಕೆ ತತ್ಸಮ ತದ್ಭವ ಶಬ್ದವೆಂದು ಅರ್ಥಮಾಡುವುದು ಅಪ್ರಾಕರಣಿಕ ವಾದುದು. ಹಿಂದೆ ದಕ್ಷಿಣೋತ್ತರಮಾರ್ಗಗಳ ಲಕ್ಷಣವನ್ನು ಹೇಳಿರುವುದರಿಂದ ಈ ಪದ್ಯದ ಉತ್ತರಾರ್ಧದಲ್ಲಿ "ಅದನ್ನು ಅತಿಶಯಧವಳೋಕ್ತಿ ಕ್ರಮದಿಂ ಅಱಪುವೆಂ" ಎಂದು ಇಷ್ಟನ್ನೇ ಹೇಳಬೇಕಾಗಿರುವಾಗ "ಅದನ್ನು" ಎಂಬುದಕ್ಕೆ ಬದಲಾಗಿ ಅದರಲ್ಲಿ ಹುಟ್ಟಿದ ಎಂಬ ಕ್ಲಿಷ್ಟಾನ್ವಯವುಳ್ಳ (ತದ್ಭವದೊಳ್) ಶಬ್ದವನ್ನು ಪ್ರಯೋಗಿಸಿರುವ ಈ ಕವಿಯು, ಆ ಮಾರ್ಗದ್ವಯಲಕ್ಷಣವನ್ನು ಅತಿಶಯಧವಳೋಕ್ತಿ ಕ್ರಮದಲ್ಲಿ (ತತ್) ಆ ಕವಿ ಮಾರ್ಗದಿಂದ (ಭವದೊಳ್) ಹುಟ್ಟಿದ ಈ ಗ್ರಂಥದಲ್ಲಿ ಹೇಳುವೆನು ಎಂಬ ನಿಜತತ್ವಾಂಶ ವನ್ನು ಇಲ್ಲಿ ಸೂಚಿಸುವನೆಂದು ತಾತ್ಪರ್ಯವನ್ನು ಹೇಳಬಹುದು. ಈ ಗ್ರಂಥಕ್ಕೆ ಮೂಲ ಗ್ರಂಥವು ಮತ್ತೊಂದಿತ್ತೆಂದು ಸೂಚಿಸುವ ಇದು ಕೂಡ, ಶ್ರೀ ವಿಜಯನ ಕವಿಮಾರ್ಗ ವೆಂಬ ಗ್ರಂಥವನ್ನು ಈ ಕವಿರಾಜಮಾರ್ಗ ಗ್ರಂಥವು ಅನುಸರಿಸಿದೆ ಎಂಬುದನ್ನು ತಿಳಿಸುವು ದರ ಮೂಲಕ ಕವಿಮಾರ್ಗದ ಅಸ್ತಿತ್ವಕ್ಕೆ ಸಹಕಾರಿಯಾಗುವುದು.

ಈಗ ನಾವು ಒಟ್ಟಿನಲ್ಲಿ, ಈ ಕವಿರಾಜಮಾರ್ಗ ಗ್ರಂಥದಲ್ಲಿ ದೊರೆವ "ಶ್ರೀ ವಿಶದ ವರ್ಣೆ" "ಪರಮ ಶ್ರೀ ವಿಜಯಕವೀಶ್ವರ" "ಪರಮಾಲಂಕಾರೋಚಿತ......ಪರಮಕವೀಶ್ವರರ" ಎಂಬ ಪದ್ಯಗಳೂ, ಅಲ್ಲಲ್ಲಿ ದೊರಕುವ ಪರಮಾಚಾರ್ಯ, ಪರಮಕವೀಶ್ವರ, ವೊದಲಾದ ಪದಗಳೂ, ಪರಿಚ್ಛೇದಾಂತ್ಯಗಳ "ಶ್ರೀ ವಿಜಯಪ್ರಭೂತ" ಎಂಬ ಪದ್ಯಗಳೂ, ಗ್ರಂಥೋಪಸಂಹಾರದಲ್ಲಿರುವ "ಅನ್ಯಮಾರ್ಗಲಕ್ಷಣಂ" ಎಂಬ ವಚನವೂ, ಕೇಶಿರಾಜನ ಪೂರ್ವಕವಿಸ್ತುತಿರೂಪವಾದ "ಗಜಗನ ಗುಣನಂದಿಯ..." ಎಂಬ ಪದ್ಯವೂ, ಆತನೇ ಲಕ್ಷ್ಯದಲ್ಲಿ ಉದಾಹರಿಸಿರುವ "ಬರಿಸಿ ಪ್ರಧಾನರಂ" "ಅರಸುಕುಮಾರನ" "ನುಡಿಗೆಲ್ಲಂ ಸಲ್ಲದ" ಈ ಪದ್ಯಗಳೂ, "ಶ್ರೀ ವಿಜಯರ ಕವಿಮಾರ್ಗಂ" ಎಂಬ ದುರ್ಗಸಿಂಹನ ಉಕ್ತಿಯೂ, ಶ್ರೀ ವಿಜಯನು ಕವಿಮಾರ್ಗವೆಂಬ ಲಕ್ಷಣ ಗ್ರಂಥವೊಂದವನ್ನು ಬರೆದಿರುವನೆಂದು ವ್ಯಕ್ತಪಡಿಸುವುವು. ದೊಡ್ಡಯ್ಯ ಮತ್ತು ಮಂಗರಸರು ಹೇಳುವಂತೆ, ಈ ಶ್ರೀ ವಿಜಯನೇ ಚಂದ್ರಪ್ರಭ ಪುರಾಣವೆಂಬ ಮತ್ತೊಂದು ಕಾವ್ಯವನ್ನು ಬರೆದಿರುವನೆಂದೂ, ಈತನು ಜೈನನೆಂದೂ, ಕವಿರಾಜಮಾರ್ಗ ಕರ್ತೃವಿಗೆ ಒಂದುವೇಳೆ ಗುರುವಾಗಿದ್ದರೂ ಇರಬಹುದೆಂದೂ ತಿಳಿದುಬರುವುದು.

೨. ಕವೀಶ್ವರಕೃತ ಕವಿರಾಜಮಾರ್ಗ

ಈ ಕವಿರಾಜಮಾರ್ಗದಲ್ಲಿ ಪದ್ಯಗ್ರಂಥಕರ್ತೃಗಳ ಹೆಸರನ್ನು ಹೇಳುವ "ಪರಮ ಶ್ರೀ ವಿಜಯ ಕವೀಶ್ವರ ಪಂಡಿತ......" ಎಂಬ ಪದ್ಯದಿಂದ "ಕವೀಶ್ವರ" ಎಂಬ ಒಬ್ಬ ಕವಿಯು ಇದ್ದನೆಂದು ಗೊತ್ತಾಗುವುದು. ಇದೇ ಗ್ರಂಥದ ಎರಡನೆಯ ಪರಿಚ್ಛೇದದ ಕೊನೆಯಲ್ಲಿಯ "ಶ್ರೀ ವಿಜಯಪ್ರಭೂತಮನಿದಂ ತನಗಾಗಿಸಿದೊಂ ಕವೀಶ್ವರಂ" ಎಂಬ ಪದ್ಯಭಾಗದಿಂದ ಕವೀಶ್ವರನೆಂಬವನು ಶ್ರೀ ವಿಜಯಕರ್ತೃಕವಾದ ಈ ಗ್ರಂಥವನ್ನು ತನ್ನ ಪ್ರಯೋಜನಕ್ಕಾಗಿ ಉಪಯೋಗಿಸಿಕೊಂಡನು, ಎಂಬ ಅರ್ಥವು ತೋರಿಬರುವುದರಿಂದ, ಕವೀಶ್ವರನೆಂಬ ಕವಿಯೊಬ್ಬನು ಶ್ರೀ ವಿಜಯಕೃತ ಕವಿಮಾರ್ಗವನ್ನು, ಅರಸನಾದ ನೃಪತುಂಗನಿಂದ ಪ್ರಯೋಜನಪಡೆವುದಕ್ಕಾಗಿ ಉಪಯೋಗಿಸಿಕೊಂಡನೆಂದು ಹೇಳಬಹುದಾದುದಾಗಿ, ಕವಿರಾಜಮಾರ್ಗವು ಕವೀಶ್ವರಕೃತವೆಂದು ಹೇಳಿದಂತಾಗುವುದು. ಅಲ್ಲದೆ ಈ ಗ್ರಂಥದ "ಕವಿರಾಜಮಾರ್ಗ" ಎಂಬ ಹೆಸರೂ ಕೂಡ "ಕವೀಶ್ವರಮಾರ್ಗ" ಎಂಬುದಕ್ಕೆ ಸಂವಾದಿಯಾಗುವುದರಿಂದ ಈ ಗ್ರಂಥವನ್ನು ಕವೀಶ್ವರನೇ ಬರೆದನೆಂದು ಸೂಚಿತವಾಗುವುದು. "ಕವಿರಾಜಮಾರ್ಗ" ಶಬ್ದಕ್ಕೆ ಕವಿಗಳ ರಾಜಮಾರ್ಗ ಅಥವಾ ಕವಿಶ್ರೇಷ್ಠರ ಮಾರ್ಗ ಎಂಬ ಎರಡು ಅರ್ಥಗಳು ಇರುವುದಾದರೂ, ಕವಿಯು ತನ್ನ ಹೆಸರನ್ನು ಕವಿರಾಜ (ಕವೀಶ್ವರ) ಎಂಬ ಈ ಶಬ್ದದಿಂದ ಸೂಚಿಸಿರುವನೆಂದೇ ಹೇಳಬಹುದು. ಮಂಗಳ ಪದ್ಯಗಳ ತರುವಾಯ ನೃಪತುಂಗನ ಸಭಾಸದರನ್ನು ಎರಡು ಪದ್ಯಗಳಿಂದ ವರ್ಣಿಸಿರುವುದೂ, ಗ್ರಂಥದ ಉಪಸಂಹಾರ ಸ್ಥಳಗಳಲ್ಲಿ "ನೃಪತುಂಗಸಭಾಸದಂ" ಎಂದು ಏಕವಚನದಲ್ಲಿ ನೃಪತುಂಗನ ಸಭಾಸದನೊಬ್ಬನನ್ನು ವರ್ಣಿಸಿರುವುದೂ, "ನೃಪ

ತುಂಗ ಸಭಾಸದರ್" ಎಂಬ ಪದ್ಯದಲ್ಲಿ "ಉದಾರ ಕವೀಶ್ವರಂ" ಎಂಬ ಬೇರೆಯ ಪಾಠವು ದೊರಕುವುದೂ, ಈ ಕವೀಶ್ವರನು ನೃಪತುಂಗಸಭಾಸದನೆಂಬುದನ್ನು ಸೂಚಿಸುತ್ತವೆ. ಅಲ್ಲದೆ, ಈ ಕವಿಯು ಅಲ್ಲಲ್ಲಿ "ನೃಪತುಂಗಮಾರ್ಗ" ಎಂದು ಹೇಳಿರುವಂತೆ "ಪರಮಕವೀಶಪ್ರಯೋಗಗತಮಾರ್ಗ" (II-46) ಎಂದೂ ಹೇಳಿರುವುದರಿಂದ ಕವೀಶ್ವರನಾದ ತಾನು ಈ ಕವಿರಾಜಮಾರ್ಗವನ್ನು ಬರೆದನೆಂಬ ಅಭಿಪ್ರಾಯವನ್ನೇ ಅಲ್ಲಲ್ಲಿ ಸೂಚಿಸಿರುವನೆಂದು ಹೇಳುವುದೂ ಅನುಚಿತವಾಗಲಾರದು.

ಈ ಗ್ರಂಥದ "ಪರಮ ಶ್ರೀ ವಿಜಯ ಕವೀಶ್ವರ......" ಎಂಬ ಪದ್ಯದಲ್ಲಿ ಹೇಳಿರುವ "ತದಾದ್ಯಕಾವ್ಯಕ್ಕೆಂದುಂ ಲಕ್ಷ್ಯಂ" ಎಂಬ ಭಾಗಕ್ಕೆ, ಪ್ರಾಚೀನ ಗ್ರಂಥಕಾರರೆಂದು ಅರ್ಥವಾಗುವ ಕಾರಣ ಪ್ರಕೃತಕವೀಶ್ವರನು ತನ್ನ ಹೆಸರನ್ನೂ ಶ್ರೀ ವಿಜಯನ ಹೆಸರನ್ನೂ ಈ ಪ್ರಾಚೀನ ಕವಿಗೋಷ್ಠಿಯಲ್ಲಿ ಸೇರಿಸಿರುವುದು ಅನುಚಿತವಾದುದೆಂದು ಪೂರ್ವಪಕ್ಷಮಾಡಬಹುದು. ಆದರೆ "ತದಾದ್ಯ" ಶಬ್ದಕ್ಕೆ ಅರ್ಥವನ್ನು ಮಾಡುವಾಗ, ಈ ಪದ್ಯದ ಸಂಪೂರ್ಣವಾದ ಅರ್ಥವನ್ನೂ ಪ್ರಕರಣವನ್ನೂ ವಿಚಾರಮಾಡಬೇಕಾಗಿದೆ. ಈ ಪದ್ಯವು ಪದ್ಯಕಾವ್ಯಗಳ ಲಕ್ಷಣವನ್ನೂ, ಸಂಸ್ಕೃತ ಪದ್ಯಕಾವ್ಯಕರ್ತೃಗಳ ಹೆಸರುಗಳನ್ನೂ, ಕನ್ನಡದ ಚತ್ತಾಣ, ಬೆದಂಡೆ ಎಂಬ ಕಾವ್ಯಭೇದಗಳ ಹೆಸರನ್ನೂ, ಹೇಳಿದ ಮೇಲೆ ಬಂದಿದೆ. ಪದ್ಯ ಲಕ್ಷಣವನ್ನು ಹೇಳುವ "ಪದ್ಯಂ ಪಾರಾಯಣಮಾದ್ಯಂ ಸದ್ವೃತ್ತಿವೃತ್ತಜಾತ್ಯಾಯತ್ತಂ" ಎಂಬ ಪದ್ಯದಲ್ಲಿ ಪದ್ಯಶಬ್ದಕ್ಕೆ "ಆದ್ಯ" ಎಂಬ ವಿಶೇಷಣವು ಇರುವುದು. ಪದ್ಯಕಾವ್ಯಕ್ಕೆ ಲಕ್ಷ್ಯವನ್ನು ಹೇಳುವ ಈ ಪದ್ಯದಲ್ಲಿಯೂ ಕೂಡ "ಆದ್ಯ" ಶಬ್ದಕ್ಕೆ ಹಿಂದಣ ಲಕ್ಷಣಪದ್ಯದ "ಆದ್ಯ" ಶಬ್ದದೊಡನೆ ಹೋಲಿಸಿ ಅರ್ಥ ಹೇಳುವುದು ಯುಕ್ತವೇ ಹೊರತು ಅದಕ್ಕೆ ವಿರುದ್ಧವಾಗಿ ಅರ್ಥ ಹೇಳುವುದು ಸಮಂಜಸವಲ್ಲ. • "ತದಾದ್ಯ" ಶಬ್ದದಲ್ಲಿರುವ "ತತ್" ಶಬ್ದಕ್ಕೆ, ಪ್ರಸಿದ್ಧಾರ್ಥಕ್ಕಿಂತಲೂ, ಪೂರ್ವಪರಾಮರ್ಶಕಾರ್ಥವನ್ನು ಹೇಳುವುದೇ ಪ್ರಕರಣೋಚಿತವಾದುದು. ಆದುದರಿಂದ "ತದಾದ್ಯಕಾವ್ಯ" ಶಬ್ದಕ್ಕೆ, ಹಿಂದೆ ಹೇಳಿದ ಪದ್ಯಗಳಿಂದ ಕೂಡಿದ ಕಾವ್ಯವೆಂದು ಅರ್ಥಮಾಡಬೇಕಲ್ಲದೆ "ತದಾದ್ಯ ಕಾವ್ಯಕ್ಕೆ" ಆ ಪ್ರಾಚೀನರ ಕಾವ್ಯಕ್ಕೆ, ಎಂದು ಅರ್ಥವನ್ನು ಮಾಡುವುದು ಉಚಿತವಾಗಿರುವುದಿಲ್ಲ. ಪ್ರಕೃತದಲ್ಲಿ ಪ್ರಾಚೀನ ಅರ್ವಾಚೀನ ಎಂಬ ಪ್ರಸಕ್ತಿಯೇ ಬಂದಿರುವುದಿಲ್ಲ. "ಪರಮ ಶ್ರೀ ವಿಜಯ............ಲೋಕಪಾಲಾದಿಗಳ ಆ ನಿರತಿಶಯವಸ್ತು ವಿಸ್ತರರಚನೆ ತದಾದ್ಯಕಾವ್ಯಕ್ಕೆ ಲಕ್ಷ್ಯಂ" ಎಂಬ ಅನ್ವಯದಲ್ಲಿ "ಪರಮ ಶ್ರೀ ವಿಜಯ ಮೊದಲಾದವರುಗಳ ನಿರತಿಶಯವಾದ ವಸ್ತುವಿಸ್ತರ ರಚನೆಯು ಆ ಪೂರ್ವಿಕರ ಕಾವ್ಯಕ್ಕೆ ಲಕ್ಷ್ಯವಾಗಿರುವುದು" ಎಂದು ಅರ್ಥಮಾಡುವುದು ಅಪ್ರಸ್ತುತವೂ, ಅನನ್ವಿತವೂ ಆಗುವುದು. ಮೇಲೆ ಹೇಳಿದ ಈ ವಿಚಾರಗಳಿಂದ ಪರಮ ಶ್ರೀ ವಿಜಯಕವೀಶ್ವರರು ಪದ್ಯಗ್ರಂಥಕರ್ತರೆಂದು ಅರ್ಥಮಾಡಬೇಕಲ್ಲದೆ ಪ್ರಾಚೀನ ಗ್ರಂಥಕರ್ತರೆಂದು ಅರ್ಥಮಾಡಕೂಡದು. ಕವೀಶ್ವರನೆಂಬ ಕವಿಯು ತನ್ನ ಗುರುವಾದ ಶ್ರೀ ವಿಜಯ

ನನ್ನೂ ತನ್ನನ್ನೂ ಇತರ ಪದ್ಯಗ್ರಂಥಕರ್ತೃಗಳ ಗೋಷ್ಠಿಯಲ್ಲಿ ಸೇರಿಸಿ ಪ್ರಕೃತ ಗ್ರಂಥದಲ್ಲಿ ಹೇಳಿಕೊಂಡಿರುವನೆಂದು ಹೇಳುವುದರಲ್ಲಿ ಯಾವ ಅನುಪಪತ್ತಿಯೂ ಇರಲಾರದು.

ಕಾವ್ಯಾವಲೋಕನದಲ್ಲಿಯೂ ಶಬ್ದಮಣಿದರ್ಪಣದಲ್ಲಿಯೂ, ನೃಪತುಂಗನ ಶೌರ್ಯೌದಾರ್ಯಾದಿ ಗುಣಗಳನ್ನು ವರ್ಣಿಸಿರುವ ಕೆಲವು ಪದ್ಯಗಳು ದೊರಕುವುವು. ಪ್ರಾಯಃ ಈ ಕವಿಯೇ ತನ್ನ ಆಶ್ರಯದಾತನಾದ ನೃಪತುಂಗನ ಹೆಸರಿನಲ್ಲಿ ಈ ಕವಿರಾಜಮಾರ್ಗವನ್ನು ಬರೆದುದೂ ಅಲ್ಲದೆ, ಅವನನ್ನೇ ಉದ್ದೇಶಿಸಿ ಬರೆದಿದ್ದ ಮತ್ತೊಂದು ಪದ್ಯ ಗ್ರಂಥದಿಂದಲೇ ಆ ಪದ್ಯಗಳು ಉದ್ಧೃತವಾಗಿದ್ದರೂ ಇರಬಹುದೆಂದು ನಾವು ಊಹಿಸಬಹುದು. ಈ ಕಾರಣದಿಂದಲೇ ಕವೀಶ್ವರನು ತನ್ನನ್ನು ಪದ್ಯಗ್ರಂಥಕರ್ತೃಗಳ ಗುಂಪಿನಲ್ಲಿ ಸೇರಿಸಿ ಹೇಳಿಕೊಂಡಿರುವನೆಂದು ಊಹಿಸಲೂ ಹೆಚ್ಚಿನ ಅವಕಾಶವುಂಟು. ಜೈನಮತದವನಾದ ಈ ಕವಿಯು ಪಂಪ, ರನ್ನರಂತೆ ಮಂಗಳಪದ್ಯದಲ್ಲಿ ತನ್ನ ಆಶ್ರಯದಾತನನ್ನು ವಿಷ್ಣುವಿಗೆ ಹೋಲಿಸಿ ವರ್ಣಿಸಿರುವನೆಂದು ಹೇಳುವುದೂ ಅಸಮಂಜಸವಾಗಲಾರದು. ನಾವು ಹಿಂದೆ ಹೇಳಿದಂತೆ ಮೊದಲು ದಂಡಿಯ ಕಾವ್ಯಾದರ್ಶವನ್ನು ಸಂಪೂರ್ಣವಾಗಿ ಅನುಸರಿಸಿ ಬರೆದಿದ್ದ ಕವಿಮಾರ್ಗದ ಸಂಸ್ಕೃತಾನುಗುಣವಾಗಿದ್ದ ದಕ್ಷಿಣೋತ್ತರ ಮಾರ್ಗಲಕ್ಷಣಗಳ ಜತೆಗೆ ಕವೀಶ್ವರನು ಕನ್ನಡಭಾಷೆಗೆ ಸಂಬಂಧಪಟ್ಟ ಕೆಲವು ಭಾಗಗಳನ್ನು ಸೇರಿಸಿಯೂ, ದೋಷಪ್ರಕರಣದಲ್ಲಿ, ಭಾಮಹನ ಅಲಂಕಾರ ಗ್ರಂಥದಿಂದ ಕೆಲವು ಭಾಗಗಳನ್ನು ತೆಗೆದು ಸೇರಿಸಿಯೂ, ಪ್ರಾಸಾದಿಗಳ ವಿಷಯದಲ್ಲಿ ಕೆಲವನ್ನು ಬಿಟ್ಟೂ, ಇನ್ನು ಕೆಲವನ್ನು "ಅನ್ಯಮಾರ್ಗ ಲಕ್ಷಣಂ" ಎಂದು ಹೇಳಿಯೂ, ಅಲಂಕಾರ ಪ್ರಕರಣದಲ್ಲಿ, ಅಲಂಕಾರಗಳ ಅಂತರಾಳಿಕ ಭೇದಗಳಲ್ಲಿ ಕೆಲವನ್ನು ಬಿಟ್ಟೂ, ಒಂದೆರಡನ್ನು ಹೆಚ್ಚಾಗಿ ಸೇರಿಸಿಯೂ, ಈ ಕವಿರಾಜಮಾರ್ಗವನ್ನು ಬರೆದಿರುವನೆಂದು ಹೇಳಬಹುದು. ಈ ಗ್ರಂಥದ ಕೆಲವು ಲಕ್ಷ್ಯಪದ್ಯಗಳಲ್ಲಿ, ಒಬ್ಬರಾಜನನ್ನು ಕುರಿತು "ನೀನು" "ನಿನ್ನ" ಎಂದು ಮೊದಲಾಗಿ ಸಂಬೋಧಿಸಿ, ಆತನ ಶೌರ್ಯೌದಾರ್ಯಾದಿಗುಣಗಳ ವರ್ಣನೆಯೂ, ಮತ್ತೆ ಕೆಲವು ಪದ್ಯಗಳಲ್ಲಿ ನೃಪತುಂಗ, ಅತಿಶಯಧವಳ, ವೀರನಾರಾಯಣ, ಎಂಬ ಬಿರುದುಳ್ಳ ಅಮೋಘವರ್ಷನ ಸ್ತುತಿಯೂ ಇರುವುದರಿಂದ, ಆಸ್ಥಾನ ಕವಿಯಾದ ಈ ಕವೀಶ್ವರನು ತನ್ನ ಆಶ್ರಯದಾತನಾದ ನೃಪತುಂಗನ ಸ್ತುತಿಪದ್ಯಗಳನ್ನೂ ತಾನು ಬರೆದ ಅಲಂಕಾರಗ್ರಂಥದೊಳಗೆ ಅಲ್ಲಲ್ಲಿ ಲಕ್ಷ್ಯವಾಗಿ ಉದಾಹರಿಸಿರುವನೆಂದು ಹೇಳುವುದೂ ಸಮಂಜಸವಾಗುವುದು.

ಈ ಕವಿಯು, ಪ್ರಾಚೀನಾಲಂಕಾರಿಕರಾದ ಭಾಮಹ, ದಂಡಿ, ಇವರುಗಳ ಗ್ರಂಥಗಳಿಂದ ಆವಾವ ವಿಷಯುವನ್ನು ಆರಿಸಿ ಪರಿವರ್ತಿಸಿರುವನೆಂಬುದನ್ನು ಮುಂದೆ ಅನುಬಂಧದಲ್ಲಿ ತಿಳಿಸುತ್ತೇನೆ.

೩. ನೃಪತುಂಗಾನುಮತ ಕವಿರಾಜಮಾರ್ಗ

ಅಥವಾ

ನೃಪತುಂಗ ಗ್ರಂಥ

ನೃಪತುಂಗನಿಂದ ಈ ಕವಿರಾಜಮಾರ್ಗವು ರಚಿತವಾಗದಿದ್ದರೂ, ಈ ಗ್ರಂಥದಲ್ಲಿ ಅಲ್ಲಲ್ಲಿ ದೊರಕುವ, ನೃಪತುಂಗನೇ ಈ ಗ್ರಂಥವನ್ನು ರಚಿಸಿದನೆಂಬ ಉಕ್ತಿಗಳಿಗೂ, ಶಬ್ದಾನುಶಾಸನಕಾರನು ಇದನ್ನೇ ನೃಪತುಂಗ ಗ್ರಂಥವೆಂದು ಹೇಳಿರುವುದಕ್ಕೂ ಉಪಪತ್ತಿಯು ಹಿಂದಿನ ವಿಮರ್ಶೆಗಳಿಂದಲೇ ಸ್ಪಷ್ಟವಾಗಿರುವುದು. ಹೀಗೆ ಈ ಕವಿರಾಜಮಾರ್ಗ ಗ್ರಂಥಕರ್ತನಿಗೆ ವಿಶೇಷ ಪ್ರೋತ್ಸಾಹಕನೂ ಆಶ್ರಯದಾತನೂ ಆದ ಈ ನೃಪತುಂಗನ ವಿಷಯವನ್ನು ಈ ಗ್ರಂಥದ ಮತ್ತು ಇತರ ಸಾಧನಗಳ ಸಹಾಯದಿಂದ ವಿಚಾರ ಮಾಡುವೆವು.

ಈ ನೃಪತುಂಗನಿಗೆ ಉದಾರ, ನೀತಿನಿರಂತರ, ಕೃತಕೃತ್ಯಮಲ್ಲ, ವೀರ ನಾರಾಯಣ, ಅತಿಶಯಧವಳ, ವಿವೇಕಬೃಹಸ್ಪತಿ, ನರಲೋಕಚಂದ್ರ, ನಿತ್ಯಮಲ್ಲವಲ್ಲಭ, ಪುರುಷೋತ್ತಮ, ವಾಗಧಿಪ, ಪರಮೋದಯ, ಅಮೋಘವರ್ಷ, ಸರಸ್ವತೀ ತೀರ್ಥಾವತಾರ, ಎಂಬ ಬಿರುದುಗಳಿದ್ದಂತೆ ತಿಳಿದುಬರುವುದು. ಈ ಗ್ರಂಥದಲ್ಲಿ ಅಲ್ಲಲ್ಲೇ ಅಖಿಳ ಧರಾವಲ್ಲಭ, ಅತಿಶಯಧವಳೋರ್ವಿಪ, ಎಂದು ಹೇಳಿರುವುದರಿಂದ, ಈ ನೃಪತುಂಗನು ಸಾರ್ವಭೌಮನಾಗಿದ್ದನೆಂದೂ ತಿಳಿದುಬರುವುದು. ಈ ಬಿರುದುಗಳಲ್ಲಿ, ವೀರ ನಾರಾಯಣ, ವರ್ಷ-ವಲ್ಲಭ, ಎಂಬ ಬಿರುದುಗಳು ಕರ್ಣಾಟಕ ರಾಜದಲ್ಲಿ ಕ್ರಿ. ಶ. ಏಳನೆಯ ಶತಮಾನದಿಂದ ಹತ್ತನೆಯ ಶತಮಾನದವರೆಗೂ ಸಾರ್ವಭೌಮರಾಗಿ ಆಳಿದ ರಾಷ್ಟ್ರಕೂಟ ರಾಜರಿಗೆ ಸಂಬಂಧಿಸಿರುವುದರಿಂದ, ಈ ಗ್ರಂಥದಲ್ಲಿ ಉಕ್ತನಾದ ರಾಜನೂ ರಾಷ್ಟ್ರಕೂಟದ ಅರಸರ ವಂಶದವನೆಂದು ಹೇಳುವುದರಲ್ಲಿ ಸಂದೇಹವೇ ಇಲ್ಲ. "ಹಿರಣ್ಯಾಕ್ಷನಿಂದ ಅಪಹೃತವಾಗಿದ್ದ ಭೂಮಿಯನ್ನು ಶ್ರೀಮನ್ನಾರಾಯಣನು ವರಾಹಾವತಾರವನ್ನೆತ್ತಿ ಉದ್ಧಾರ ಮಾಡಿದಂತೆ ಈ ವಂಶದ ಮೂಲಪುರುಷನಾದ ದಂತಿದುರ್ಗನು ಚಾಳುಕ್ಯರ ವಶವಾಗಿದ್ದ ಭೂಮಿಯನ್ನು ಮತ್ತೆ ತಾನು ವಶಮಾಡಿಕೊಂಡುದರಿಂದ 'ವೀರ ನಾರಾಯಣ' ನೆಂಬ ಬಿರುದನ್ನು ಪಡೆದನು" ಎಂದೂ ಈ ಬಿರುದುಗಳು ಇವನಿಗೆ ಮಾತ್ರವಲ್ಲದೆ ಇವನ ವಂಶದವರಿಗೂ ಇದ್ದಿತೆಂದೂ ಶಾಸನಗಳಿಂದ ತಿಳಿದುಬರುವುದು. ಈತನ ಹಿಂದೆ ಆಳಿದ ಅರಸರಿಗೆ ಪ್ರಭೂತವರ್ಷ, ಅಕಾಲವರ್ಷ ಎಂಬ ಹೆಸರುಗಳಿದ್ದುದರಿಂದ, ಅಮೋಘವರ್ಷನೆಂಬುದೇ ಈತನ ಹೆಸರೆಂದೂ, ನೃಪತುಂಗ (ರಾಜರಲ್ಲಿ ಮೇಲಾದವನು) ನೆಂಬುದು ಈತನ ಬಿರುದೆಂದೂ ಕೆಲವರು ಹೇಳುವರು. ವರ್ಷಶಬ್ದಕ್ಕೆ ಮಳೆ ಎಂದು ಅರ್ಥವಾಗುವುದರಿಂದ, ಈ ವಂಶದ ಅರಸರು ಮಳೆಯಂತೆ ಅರ್ಥಿಗಳಲ್ಲಿ ದ್ರವ್ಯವನ್ನು ವರ್ಷಿಸಿ ಅವರ ಸಂತಾಪವನ್ನು ಅಡಗಿಸುತ್ತಿದ್ದರೆಂದು ಹೇಳಬಹುದಾದುದರಿಂದ, "ವರ್ಷ" ಎಂಬುದು ಕೂಡ ಇವರ ಬಿರುದೆಂದೇ ಹೇಳಿಬಿಡಬಹುದು. ಹಾಗೆಯೇ "ವಲ್ಲಭ" (ಪ್ರಿಯ) ಪ್ರಜೆ

ಗಳಿಗೆ ಇಷ್ಟವನ್ನುಂಟುಮಾಡುವವನು ಅಥವಾ ಒಡೆಯ ಎಂಬ ಅರ್ಥದಿಂದ ಬಂದಿರಬಹುದೆಂದೂ ನಾವು ಊಹಿಸಬಹುದು.

ಈತನು ಸ್ವತಃ ವಿದ್ಯಾವಂತನಾಗಿದ್ದುದರಿಂದ "ವಾಗಧಿಪ" "ವಿವೇಕ ಬೃಹಸ್ಪತಿ" "ಸರಸ್ವತೀ ತೀರ್ಥಾವತಾರ" ಎಂಬ ಬಿರುದುಗಳು ಬಂದಂತೆ ಕಾಣುತ್ತದೆ.[1] ಇವನಿಂದ ರಚಿತವಾದ "ಪ್ರಶ್ನೋತ್ತರಮಾಲಿಕೆ" ಎಂಬ ಸಂಸ್ಕೃತ ಗ್ರಂಥದ ಅಂತ್ಯದಲ್ಲಿರುವ 'ವಿವೇಕಾತ್ತ್ಯಕ್ತರಾಜ್ಯೇನ...ರಚಿತಾಽಮೋಘವರ್ಷೇಣ...' ಎಂಬ ಪದ್ಯವು ಈತನ ಪಾಂಡಿತ್ಯವನ್ನು ವ್ಯಕ್ತಪಡಿಸುವುದು. ಈತನು ಹೀಗೆ ಸ್ವತಃ ವಿದ್ಯಾವಂತನಾಗಿದ್ದುದರಿಂದಲೇ ಹಲವು ಮಂದಿ ಪಂಡಿತರಿಗೆ ಆಶ್ರಯನಾಗಿದ್ದನೆಂದೂ ತಿಳಿದುಬರುವುದು. ಕರ್ಣಾಟಕ ರಾಜ್ಯಾಧಿಪತಿಯಾಗಿದ್ದುದರಿಂದ ಕನ್ನಡಕ್ಕೆ ಈತನು ವಿಶೇಷ ಪ್ರೋತ್ಸಾಹವನ್ನು ಕೊಟ್ಟಿರಬೇಕು. ವೀರಾಚಾರ್ಯನೆಂಬ ಜೈನ ಕವಿಯು ತನ್ನ ಸಂಸ್ಕೃತ ಗಣಿತಸಾರಸಂಗ್ರಹದಲ್ಲಿ, ಅರ್ಹಂತನನ್ನು ಸ್ತುತಿಸುವ ಮಂಗಳ ಪದ್ಯಗಳಾದ ಮೇಲೆ, ಐದು ಪದ್ಯಗಳಿಂದ ಈ ನೃಪತುಂಗನನ್ನು ಹೊಗಳಿ, ಆ ಬಳಿಕ ಗ್ರಂಥವನ್ನು ಆರಂಭಿಸಿರುವನು. ಹೀಗೆ ಈತನು ತನ್ನ ಗ್ರಂಥದಲ್ಲಿ ನೃಪತುಂಗನನ್ನು ವರ್ಣಿಸಿರುವುದರಿಂದ, ನೃಪತುಂಗನು ಆತನಿಗೆ ವಿಶೇಷ ಪ್ರೋತ್ಸಾಹವನ್ನು ಕೊಟ್ಟಿದ್ದನೆಂದೇ ಹೇಳಬಹುದು. ಈ ಪದ್ಯಗಳಲ್ಲಿ ಒಂದಾದ "ಪ್ರೀಣಿತಃ..."[2] ಎಂಬುದು ಈತನ ಅಮೋಘವರ್ಷನೆಂಬ ಹೆಸರನ್ನೂ "ವಿದ್ವದ್ಯೈಕಾಂತಪಕ್ಷಸ್ಯ..." ಎಂಬುದು ನೃಪತುಂಗನೆಂಬ ಮತ್ತೊಂದು ಬಿರುದನ್ನೂ ಸೂಚಿಸುವುದಲ್ಲದೆ "ಈತನು ಜೈನನೆಂಬುದನ್ನೂ ಸೂಚಿಸುವುದು. ಅಮೋಘವರ್ಷನ ಕಾಲಕ್ಕೆ, ರಾಷ್ಟ್ರಕೂಟರಾಜರು ಉಚ್ಛ್ರಿತರಾಜಪದವಿಗೆ ಬಂದು ಸುಮಾರು ಅರುವತ್ತು ವರುಷಗಳ ಮೇಲಾಗಿತ್ತು. ಕನ್ನಡನಾಡನ್ನು ಆಕ್ರಮಿಸುವ ವೊತ್ತ ಮೊದಲಿಗೆ ನಾಸಿಕವೇ ಈ ರಾಜರಿಗೆ ರಾಜಧಾನಿಯಾಗಿದ್ದು ಅಮೋಘವರ್ಷನ ಕಾಲಕ್ಕೆ ರಾಜಧಾನಿಯು ನಾಸಿಕದಿಂದ ಮಾನ್ಯಖೇಟಕ್ಕೆ ಮಾರ್ಪಟ್ಟಿದೆಂದು ಪಂಡಿತರು ಅಭಿಪ್ರಾಯಪಡುತ್ತಾರೆ. ರಾಷ್ಟ್ರಕೂಟ ರಾಜರು ಕನ್ನಡನಾಡಿನಲ್ಲಿ ನೆಲಸಿ ವಾಸಮಾಡಲು ಮೊದಲು ಮಾಡಿದ ಈ ಅಲ್ಪಕಾಲದಲ್ಲಿ, ರಾಷ್ಟ್ರಕೂಟರಾಜನಾದ ಅಮೋಘವರ್ಷ(ನೃಪತುಂಗ)ನು ಅಷ್ಟು ಬೇಗನೆ ಕನ್ನಡಭಾಷೆಯ ಮರ್ಮಗಳನ್ನು ತಿಳಿದು ಭಾಷೆಯನ್ನು ವಶಪಡಿಸಿಕೊಂಡು ಪ್ರೌಢವಾದ ಕವಿರಾಜಮಾರ್ಗದಂತಹ ಲಕ್ಷಣ ಗ್ರಂಥವನ್ನು ಬರೆದಿರಬಹುದೆಂದು ನಂಬಲು

---

1. ಕವಿಗಳು ತಮ್ಮ ಬಿರುದನ್ನೂ, ಹೆಸರನ್ನೂ ತಾವು ರಚಿಸುವ ಕಥಾ ನಾಯಕನಿಗೂ ತಮ್ಮ ಆಶ್ರಯದಾತರಿಗೂ ಉಪಯೋಗಿಸುವುದುಂಟು. (ಅಭಿನವ ಪಂಪನಲ್ಲಿ ಇದು ಸ್ಪಷ್ಟವಾಗಿ ಕಂಡುಬರುವುದು). ಅದರಂತೆ ಈ ಬಿರುದುಗಳು ಕವಿಗೂ ಇದ್ದಿರಬಹುದು.

2. ಪ್ರೀಣಿತಃ ಪ್ರಾಣಿಸಸ್ಯೌಘೋ ನಿರೀತಿರ್ನಿರವಗ್ರಹಃ ॥
ಶ್ರೀಮತಾಽಮೋಘವರ್ಷೇಣ ಯೇನ ಸ್ವೇಷ್ಟಹಿತೈಷಿಣಾ ॥
ವಿದ್ವದ್ಯೈಕಾನ್ತಪಕ್ಷಸ್ಯ ಸ್ಯಾದ್ವಾದ ನ್ಯಾಯ ವೇದಿನಃ ॥
ದೇವಸ್ಯ ನೃಪತುಂಗಸ್ಯ ವರ್ಧತಾಂ ತಸ್ಯ ಶಾಸನಮ್ ॥

ನಮಗೆ ಅಷ್ಟು ಧೈರ್ಯಸಾಲದು. ಹಾಗಾದರೆ ಭಾಷಾಭಿಜ್ಞನಲ್ಲದ ಈ ನೃಪತುಂಗನು ಕನ್ನಡ ಕವಿಗಳಿಗೆ ಏಕೆ ಪ್ರೋತ್ಸಾಹವನ್ನು ಕೊಡುತ್ತಿದ್ದನೆಂಬ ಪ್ರಶ್ನೆಯು ಬರಬಹುದು. ಕನ್ನಡನಾಡಿನ ರಾಜನಾದ ಈತನು ತನ್ನ ಆಸ್ಥಾನದಲ್ಲಿ ಸಂಸ್ಕೃತಕವಿಗಳಂತೆಯೇ ಕನ್ನಡ ನಾಡಿನ ಪ್ರಜೆಗಳ ಉಪಕಾರಕ್ಕಾಗಿ ಕನ್ನಡದಲ್ಲಿ ಗ್ರಂಥವನ್ನು ರಚಿಸುತ್ತಿದ್ದ ಕವಿಗಳಿಗೂ ಪ್ರೋತ್ಸಾಹವನ್ನು ಕೊಡುತ್ತಿದ್ದನೆಂಬ ಸಮಾಧಾನವೂ ಹಿಂದೆಯೇ ಸಿದ್ಧವಾಗಿರುವುದು.

ಹೀಗೆ ವಿದ್ಯಾವಂತನಾದ ಈತನ ಸಭೆಯಲ್ಲಿ ಹಲವು ಮಂದಿ ವಿದ್ಯಾವಂತರು ಸೇರಿ, ಆಗಾಗ ಶಾಸ್ತ್ರವಿಚಾರಗಳನ್ನು ನಡೆಸುತ್ತಿದ್ದರೆಂದು ನಾವು ಒಪ್ಪಿಕೊಳ್ಳಬಹುದು. ಇದು ವರೆಗೆ ಭಾಮಹ, ದಂಡಿ, ಮೊದಲಾದ ಹಲವು ಅಲಂಕಾರಿಕರು ಹುಟ್ಟಿ, ಕಾವ್ಯಾಲಂಕಾರ ವಿಷಯದಲ್ಲಿ ಭಿನ್ನ ಭಿನ್ನವಾದ ಮತವನ್ನು ಪ್ರಕಾಶಪಡಿಸಿ ಸಂಸ್ಕೃತ ಭಾಷೆಯಲ್ಲಿ ಹಲವು ಗ್ರಂಥಗಳನ್ನು ರಚಿಸಿದ್ದರು. ವಿದ್ಯಾವಂತನಾದ ಈ ಅರಸನು ತನ್ನ ಸಭೆಯ ಪಂಡಿತರ ಸಹಾಯದಿಂದ ಈ ಅಲಂಕಾರ ಶಾಸ್ತ್ರಗಳೆಲ್ಲವನ್ನೂ ಕ್ರೋಡೀಕರಿಸಿ, ತನ್ನ ಅಭಿಪ್ರಾಯ ವೊಂದನ್ನು ಸೂಚಿಸಿಯೂ ಇರಬಹುದು. ಅಥವಾ ಸಂಸ್ಕೃತದಲ್ಲಿ "ನೃಪತುಂಗ ದೇವ ಮಾರ್ಗ" ಎಂಬ ಗ್ರಂಥವೊಂದನ್ನು ಬರೆದೂ ಇರಬಹುದು. ಈ ನೃಪತುಂಗನ ಅಭಿ ಪ್ರಾಯವನ್ನೋ ಅಥವಾ ಆತನ ಗ್ರಂಥವನ್ನೋ ಕ್ರೋಡೀಕರಿಸಿ, ಕವೀಶ್ವರನು ತನ್ನ ಕವಿರಾಜಮಾರ್ಗದಲ್ಲಿ ಆ ಅಭಿಪ್ರಾಯಗಳನ್ನು ಸೇರಿಸಿರಬಹುದೆಂದೂ ಊಹಿಸಬಹುದಾದುದ ರಿಂದ, ಈ ಕವಿರಾಜಮಾರ್ಗದಲ್ಲಿ ಅಲ್ಲಲ್ಲಿ ದೊರಕುವ ನೃಪತುಂಗ "ದೇವಮಾರ್ಗಾನುಗತ" ಎಂಬ ಶಬ್ದಾರ್ಥವೂ ಸಮಂಜಸವಾಗುವುದೆಂದು ಹೇಳಬಹುದು. ಆದರೆ ಈ ಊಹೆಗೆ ಇನ್ನೂ ಅಷ್ಟು ಪ್ರಬಲ ಕಾರಣಗಳು ದೊರೆತಿಲ್ಲ.

ಮೇಲೆ ಹೇಳಿದ ವೀರಸೇನಾಚಾರ್ಯನ ಉಕ್ತಿಯೂ, ಅರುವತ್ತೆರಡುವರ್ಷಗಳ ಕಾಲ ರಾಜ್ಯಭಾರಮಾಡಿದ ಈತನು, ಜೈನಮತದ ರಾಜರ ಪದ್ಧತಿಯಂತೆ ಹೇಯಾಹೇಯ ಜ್ಞಾನಪೂರ್ವಕವಾಗಿ ರಾಜ್ಯವನ್ನು ಮಗನಿಗೆ ಒಪ್ಪಿಸಿ, ಜಿನದೀಕ್ಷೆಯನ್ನು ತೆಗೆದುಕೊಂಡ ನೆಂದು ಹೇಳುವ ಚರಿತ್ರೆಗಳಲ್ಲಿಯ ಚರಿತ್ರಾಂಶವೂ, ಸನಾತನಮತಾನುಯಾಯಿಗಳಾಗಿದ್ದ ರಾಷ್ಟ್ರಕೂಟದರಸರಲ್ಲಿ ಹೇಗೆ ಸಮಂಜಸವಾಗುವುದು ಎಂಬ ಶಂಕೆಯು ತೋರಬಹುದು. ರಾಷ್ಟ್ರಕೂಟವಂಶಕ್ಕೆ ಸೇರಿದ ಈ ಅರಸನು ತನ್ನ ವಂಶೀಯರಂತೆ ಆದಿಯಲ್ಲಿ ವೈದಿಕ ಮತಾನುಯಾಯಿಯಾಗಿದ್ದರೂ, ವಿದ್ವತ್ಪಕ್ಷಪಾತಿಯಾಗಿ ಎಲ್ಲ ಮತದ ಪಂಡಿತರನ್ನೂ ಪಕ್ಷಪಾತವಿಲ್ಲದೆ ಪ್ರೋತ್ಸಾಹಿಸುತ್ತಿದ್ದುದರಿಂದ ಬಹುದೀರ್ಘಕಾಲದ (೬೨ ವರ್ಷಗಳ) ತನ್ನ ಆಳಿಕೆಯಲ್ಲಿ ಕನ್ನಡನಾಡಿನ ಜೈನಪಂಡಿತರ ಪ್ರಾಬಲ್ಯವು ಆಸ್ಥಾನದಲ್ಲಿ ಹೆಚ್ಚುತ್ತ ಬಂದುದರಿಂದ ಅವರಲ್ಲಿ ವಿಶೇಷವಾದ ಅಭಿಮಾನವುಂಟಾದುದರಿಂದ ಅವರ ಮತದಲ್ಲಿಯೂ ನಂಬಿಕೆಯು ಹೆಚ್ಚಲು ಜೈನಮತವನ್ನು ತನ್ನ ಆಳಿಕೆಯ ಮಧ್ಯಕಾಲದಲ್ಲಿಯೋ, ಅಪರಾರ್ಧದ ಮಧ್ಯದಲ್ಲಿಯೋ ಅವಲಂಬಿಸಿರಬೇಕು. ಈ ಕಾಲದಲ್ಲಿಯೇ ವೀರಸೇನಾ ಚಾರ್ಯನು ತನ್ನ ಗ್ರಂಥವನ್ನು ಬರೆದು ಈತನನ್ನು "ಸ್ಯಾದ್ವಾದನ್ಯಾಯವೇದಿ" ಎಂದು

ವಿಶೇಷಿಸಿ ಜೈನಮತದವನೆಂದು ವರ್ಣಿಸಿರುವನು. ಅಂತ್ಯಕಾಲದಲ್ಲಿ ಈತನು ಜೈನಮತದ ದೃಢವಾದ ನಂಬಿಕೆಯಿಂದ ವೈರಾಗ್ಯದ ಮಾಹಾತ್ಮ್ಯವನ್ನು ಸೂಚಿಸುವ "ರತ್ನಮಾಲಿಕಾ" ಎಂಬ ಗ್ರಂಥವನ್ನು ಬರೆದು, ಜಿನದೀಕ್ಷೆಯನ್ನು ವಹಿಸಿದನು ಎಂದು ನಾವು ಊಹಿಸುವುದರಿಂದ ಎಲ್ಲವೂ ಸಮಂಜಸವಾಗಿಯೇ ಆಗುವುದು.

ಮ. ರಾ. ಎಂ. ಗೋವಿಂದ ಪೈಗಳವರು ಕರ್ಣಾಟಕ ಸಾಹಿತ್ಯ ಪರಿಷತ್ಪತ್ರಿಕೆಯಲ್ಲಿ, ಈ ನೃಪತುಂಗನ ಮತದ ವಿಷಯವನ್ನು ವಿಮರ್ಶೆಮಾಡಿ "ಆತನು ಕೊನೆಯವರೆಗೂ ಸನಾತನ ಧರ್ಮಾವಲಂಬಿಯಾಗಿದ್ದನೇ ಹೊರತು ಜೈನಮತವನ್ನು ಸ್ವೀಕರಿಸಲಿಲ್ಲ" ಎಂದು ಉಪಪಾದಿಸಿರುವರು. ಉಪಪಾದನಾಕ್ರಮದಲ್ಲಿ ಇವರು ಮೊದಲು ರಾಷ್ಟ್ರಕೂಟರಾಜರ ವಂಶ, ವಂಶದ ಶಾಖೆ, ರಾಜಧಾನಿ, ಬಿರುದು, ಅಥವಾ ಕಾಲಕ್ರಮವಾದ ಗೌಣಾಭಿಧಾನ, ಇವುಗಳನ್ನು, ಪ್ರಾಚೀನ ಲೇಖಮಾಲೆ, ಮೈಸೂರಿನ ಶಾಸನಗಳು, ಶಬ್ದಮಣಿದರ್ಪಣ, ಕವಿರಾಜಮಾರ್ಗ ಮೊದಲಾದುವುಗಳ ಆಧಾರಗಳಿಂದ ಉದಾಹರಿಸಿ, ಈ ವಂಶದವರೆಲ್ಲರೂ ಸನಾತನ ಧರ್ಮಾವಲಂಬಿಗಳಾಗಿದ್ದ ಕಾರಣ, ಈ ನೃಪತುಂಗನೂ ಸನಾತನಧರ್ಮಾವಲಂಬಿಯೇ ಎಂದು ನಿರ್ಧರಿಸಿ, ನೃಪತುಂಗನು ಜೈನಮತಾವಲಂಬಿಯಾಗಿದ್ದನೆಂಬುದಕ್ಕೆ ದೊರಕುವ ಜಿನಸೇನಾಚಾರ್ಯನ ಜಯಧವಳಾಟೀಕಾಪೂರಣ, ಪಾರ್ಶ್ವಾಭ್ಯುದಯ ಕಾವ್ಯ, ಮತ್ತು ಪಂಡಿತಾರಾಧ್ಯನ ಈ ಕಾವ್ಯದ ಟೀಕೆ, ಸಂಸ್ಕೃತದ ಆದಿಪುರಾಣ, ವೀರ ಸೇನಾಚಾರ್ಯರ ಗಣಿತಸಾರಸಂಗ್ರಹ, ಈ ನೃಪತುಂಗವಿರಚಿತವಾದ ಪ್ರಶ್ನೋತ್ತರ ರತ್ನಮಾಲಿಕಾ, ಎಂಬ ಪ್ರಮಾಣಗಳಲ್ಲಿ ಒಂದೊಂದಕ್ಕೆ ಒಂದೊಂದು ದೋಷವನ್ನು ಹೇಳಿ ನಿರಾಕರಿಸಿರುವರು. ಅಲ್ಲದೆ, ಈ ವಂಶದವರು ಕೊಟ್ಟಿರುವ ಜೈನಮತ ಪ್ರೋತ್ಸಾಹವನ್ನೂ "ಪ್ರಾಚೀನ ಭಾರತದಲ್ಲಿಯ ಸರ್ವಮತಸಮತಾವೃತ್ತಿ" ಎಂಬ ಮಾತಿನಿಂದ ಸಮಾಧಾನಗೊಳಿಸಿರುವರು. ಇವರು ಆ ಉಪನ್ಯಾಸದಲ್ಲಿ ನೃಪತುಂಗನ ಮತವನ್ನು ನಿರ್ಧರಿಸಲು ಮುಖ್ಯ ಸಾಧನವಾದ ಕವಿರಾಜಮಾರ್ಗ ಗ್ರಂಥಕರ್ತೃತ್ವದ ವಿಮರ್ಶೆಗೆ ಪ್ರಯತ್ನಿಸಲೇ ಇಲ್ಲ. ಆದರೂ ಸ್ವಕೃತ ಅಥವಾ ಸ್ವಾಸ್ಥಾನಪಂಡಿತ ಕೃತವಾದ ಈ ಕವಿರಾಜಮಾರ್ಗದಲ್ಲಿ ಗ್ರಂಥಕರ್ತೃವು ಎಲ್ಲಿಯೂ ವೈದಿಕಮತದವನೆಂದು ತೋರಿಬರದೆ[1] ಜೈನನೆಂದೇ ಹಲವೆಡೆಗಳಲ್ಲಿ ಸ್ಪಷ್ಟವಾಗಿರುವುದಕ್ಕೆ ಯಾವ ಸಮಾಧಾನವನ್ನೂ ಹೇಳಿಲ್ಲ.

ಕವಿರಾಜಮಾರ್ಗವನ್ನು ನೃಪತುಂಗನೇ ರಚಿಸಿರಲಿ, ಅಥವಾ ಅವನ ಆಸ್ಥಾನ ಪಂಡಿತನೇ ನೃಪತುಂಗನ ಹೆಸರಿನಲ್ಲಿ ರಚಿಸಿರಲಿ, ನೃಪತುಂಗನು ಸನಾತನಧರ್ಮಾವಲಂಬಿಯಾ

---

1. (a) ಕಾವ್ಯಾದರ್ಶದ ಲಕ್ಷ್ಯ ಲಕ್ಷಣಗಳೇ ಬಹುಪಟ್ಟಿಗೆ ಕವಿರಾಜಮಾರ್ಗದಲ್ಲಿ ಪರಿವರ್ತಿತವಾಗಿವೆ. ಆದರ್ಶದಲ್ಲಿಯ—ಹರಿಪಾದಃ ಶಿರೋಲಗ್ನಜಹ್ನುಕನ್ಯಾಜಲಾಂಶುಕಃ (2–81) ಎಂಬ ವಿಷ್ಣುಸ್ತುತಿರೂಪವಾದ ಲಕ್ಷ್ಯಪದ್ಯವನ್ನು—ಜಿನಚರಣನಖಾದರ್ಶಂ......ಮುಕ್ಕುಂ, (3–18) ಎಂದು ಕವಿರಾಜಮಾರ್ಗಕರ್ತೃವು ಜಿನಸ್ತುತಿರೂಪವಾಗಿ ಮಾರ್ಪಡಿಸಿರುವನು. (b) ಆಗಮ ಲಕ್ಷಣವನ್ನು ಹೇಳುವಾಗ "ರಾಗಾದಿದೋಷವಿರಹಿತ...ದೋಷಂ" (1–103) ಎಂದು ಆಗಮಕ್ಕೆ ಜೈನಮತ ಲಕ್ಷಣವನ್ನೇ ಹೇಳಿರುವನು. (c) ಮನದೆ ನೆನೆದವರ ಕಿಡುಗುಂ ಜಿನಾಧಿಪಾ... (1–80) ಇವೇ ಮೊದಲಾದ ಜಿನಸ್ತುತಿರೂಪವಾದ ಪದ್ಯಗಳೇ ವಿಶೇಷವಾಗಿ ದೊರಕುವುವು. ವೈದಿಕಮತವಿಷಯಗಂಧವೇ ಇಲ್ಲ.

ಗಿಯೇ ಇದ್ದನೆಂಬುದಕ್ಕೆ ಇದು ಸಂಪೂರ್ಣ ವಿರೋಧವಾಗಿರುವುದು. ವೈದಿಕಮತಾವಲಂಬಿಯಾದ ನೃಪತುಂಗನೇ ಈ ಗ್ರಂಥಕರ್ತೃವಾಗಿದ್ದರೆ ತನ್ನ ಗ್ರಂಥದೊಳಗೆ ಬಹು ಮುಖ್ಯ ಸಂದರ್ಭಗಳಲ್ಲಿ ವೈದಿಕಮತ ಪ್ರಕ್ರಿಯೆಯನ್ನು ಹೇಳುವುದಕ್ಕೆ ಬದಲಾಗಿ ಜೈನಮತ ಪ್ರಕ್ರಿಯೆಯನ್ನು ಹೇಳುತ್ತಿರಲಿಲ್ಲ. ವೈದಿಕಮತಾನುಸಾರಿಯಾದ ಅರಿಕೇಸರಿಯನ್ನು ಉದ್ದೇಶಿಸಿ ಜೈನಮತದವನಾದ ಪಂಪನು ಬರೆದಿರುವ "ವಿಕ್ರಮಾರ್ಜುನವಿಜಯ" ದಲ್ಲಿ ಜೈನಮತಪ್ರಕ್ರಿಯೆಯ ಗಂಧಲೇಶವೂ ಇಲ್ಲ. ಹೀಗೆಯೇ ತೈಲಪನನ್ನುದ್ದೇಶಿಸಿ ಜೈನಮತ ಶಿಖಾಮಣಿಯಾದ ರನ್ನನು ಬರೆದ ಗದಾಯುದ್ಧದಲ್ಲೂ ಜೈನಮತಪ್ರಕ್ರಿಯಾವಾಸನೆಯೇ ಇಲ್ಲ. ಹೀಗಿರುವಾಗ ವೈದಿಕ ಮತಾನುವರ್ತಿಯಾದ ನೃಪತುಂಗನ ಆಸ್ಥಾನದಲ್ಲಿಯ ಜೈನ ಕವಿಯು ನೃಪತುಂಗನನ್ನುದ್ದೇಶಿಸಿ ಬರೆದ ಕಾವ್ಯದಲ್ಲಿ ಜೈನಮತಪ್ರಕ್ರಿಯೆಯ ಸಾರವನ್ನು ಹಲವೆಡೆಗಳಲ್ಲಿ ಪ್ರವೇಶಮಾಡಿಸಿರುವನೆಂಬುದನ್ನು "ಸರ್ವಮತಸಮತಾವೃತ್ತಿಯೆಂಬ" ಅಲ್ಪಕಾರಣದಿಂದ ದೂರೀಕರಿಸುವುದು ಅಷ್ಟು ಉಚಿತವೆಂದು ಕಂಡುಬರುವುದಿಲ್ಲ.

ಈ ಲೇಖನದಲ್ಲಿ ಇವರು ಉದಾಹರಿಸಿರುವ ಶಾಸನವನ್ನು ಪರಿಶೀಲಿಸುವುದರಿಂದ ನಮಗೆ ತೋರುವ ಅಭಿಪ್ರಾಯವನ್ನು ಸಂಗ್ರಹವಾಗಿ ಇಲ್ಲಿ ತಿಳಿಸುತ್ತೇವೆ. ಈ ನೃಪ ತುಂಗನ ರಾಜ್ಯಭಾರದ 52 ನೆಯ ವರುಷದಲ್ಲಿ ಹುಟ್ಟಿದ ಈ ಶಾಸನದ ಆದಿಯಲ್ಲಿ, ಸನಾತನ ಧರ್ಮಾನುಗುಣವಾಗಿ ತ್ರಿಮೂರ್ತಿಗಳನ್ನು—ಅದರಲ್ಲಿಯೂ ವಿಷ್ಣುವಿಗೆ ಪ್ರಾಶಸ್ತ್ಯವನ್ನಿತ್ತು—ಸ್ತುತಿಸಿರುವ ಪದ್ಯವು ಇರುವುದು. ಬಳಿಕ, ರಾಷ್ಟ್ರಕೂಟ ರಾಜರನ್ನು ಜಗತ್ತುಂಗನ (ನೃಪತುಂಗನ ತಂದೆ) ವರೆಗೂ ವರ್ಣಿಸಿ, ಆಮೇಲೆ ಕೀರ್ತಿ ನಾರಾಯಣನೆಂಬ ಬಿರುದುಳ್ಳ ಅತಿಶಯಧವಳನನ್ನು ವರ್ಣಿಸಿ, ಮುಂದೆ, "ಅಮೋಘವರ್ಷ ನೃಪತುಂಗ ನಾಮಾಂಕಿತನಾ ವಿಜಯರಾಜ್ಯಂ" ಎಂದು, ಈ ಅತಿಶಯಧವಳನನ್ನೇ ನೃಪತುಂಗನೆಂದು ಸ್ಪಷ್ಟಪಡಿಸಿ ಮತ್ತೆ "ಸ್ವಸ್ತಿ ಸಮಧಿಗತ ಪಂಚ ಮಹಾಶಬ್ದ..." ಎಂಬ ವಾಕ್ಯವು ಆರಂಭವಾಗಿದೆ. ಶಾಸನದ ಮಧ್ಯದಲ್ಲಿ ಮತ್ತೆ ಸ್ವಸ್ತಿಶಬ್ದವನ್ನು ಪ್ರಯೋಗಿಸಿರುವುದನ್ನು ನಾವು ಔದಾಸೀನ್ಯ ದಿಂದ ದೂರಮಾಡಕೂಡದು. "ಸಮಧಿಗತ ಪಂಚಮಹಾಶಬ್ದ............ಭಟ್ಟಾರಕ" ಎಂಬುದು ಜೈನಮತಾವಲಂಬಿಗಳಿಗೆ ಪ್ರಯೋಗಿಸುವ ವಿಶೇಷಣಗಳು. ಇದರಿಂದ ನೃಪ ತುಂಗನೂ ಈತನ ವಂಶದವರೂ ಸನಾತನ ಧರ್ಮಾವಲಂಬಿಗಳಾಗಿದ್ದರೂ, ಈ ಶಾಸನ ಕಾಲದಲ್ಲಿ ಮಾತ್ರ ಈತನು ಜೈನನಾಗಿದ್ದನೆಂದು ಊಹಿಸುವುದು ತಪ್ಪಾಗಲಾರದು. ತನ್ನ ಪೂರ್ವಿಕರೂ, ತನ್ನ ಪೂರ್ವವಯಸ್ಸಿನಲ್ಲಿ ತಾನೂ ಅವಲಂಬಿಸಿದ್ದ ಸನಾತನ ಧರ್ಮದ ಮಾನ್ಯತೆಯನ್ನು ಮಾತ್ರ ಈತನು ದೂರಮಾಡಲಿಲ್ಲವೆಂಬುದನ್ನು ಈ ಶಾಸನದ ಆದಿಭಾಗವೇ ತೋರಿಸುತ್ತದೆ. ಈ ಶಾಸನವೇ ಈತನು ಉಭಯಮತಗಳನ್ನೂ ವಿಶೇಷವಾಗಿ ಗೌರವಿಸುತ್ತಿದ್ದನೆಂಬುದಕ್ಕೆ ಮುಖ್ಯಸಾಧನವಾಗಿರುತ್ತದೆ. ಇಂತಹ ಮತಾಂತರಾವಲಂಬಿಗಳಾದ ಕೆಲವರಲ್ಲಿಯೇ ಪ್ರಾಚೀನ ಭಾರತದಲ್ಲಿಯ ಧರ್ಮಸಮವೃತ್ತಿಯು ಇದ್ದಿತೇ ಹೊರತು, ಎಲ್ಲ ಕಾಲಗಳಲ್ಲಿಯೂ, ಎಲ್ಲಾ ರಾಜರುಗಳಲ್ಲಿಯೂ, ಈ ಗುಣವು ಇರಲಿಲ್ಲವೆಂದು ಇತರ ಹಲವು ಉದಾಹರಣೆಗಳಿಂದ ಸ್ಪಷ್ಟಪಡಿಸಬಹುದು. "ಕವಿರಾಜಮಾರ್ಗ ಗ್ರಂಥಕರ್ತನು

ನೃಪತುಂಗನ ಆಸ್ಥಾನ ಕವಿಯಾದುದರಿಂದ, ಪಂಪ—ರನ್ನರಂತೆ ಈತನೂ ತನ್ನ ಆಶ್ರಯ ದಾತನನ್ನು ಮಂಗಳಪದ್ಯದಲ್ಲಿ ಶ್ಲೇಷೆಯಿಂದ ವಿಷ್ಣುವಿನೊಡನೆ ಹೋಲಿಸಿ ಸ್ತುತಿಸಿರುವನೆಂದೂ, ಹೇಳಬಹುದಾದುದರಿಂದ, ನೃಪತುಂಗನು ಸನಾತನಧರ್ಮಾವಲಂಬಿಯೆಂದು ಸ್ಪಷ್ಟವಾಗುವುದು" ಎಂಬ ಇವರ ನಿರ್ಧರವು ನಮಗೂ ಇಷ್ಟವಾದರೂ ಕೊನೆಯವರೆಗೂ ಸನಾತನ ಧರ್ಮಾವಲಂಬಿಯಾಗಿದ್ದನೆಂದು ಮಾತ್ರ ನಾವು ಒಪ್ಪಲಾರೆವು. ಈ ಗ್ರಂಥ ಕರ್ತೃವು ಜೈನನು. ಆಶ್ರಯದಾತನು ಸನಾತನ ಧರ್ಮಾವಲಂಬಿಯು ಎಂದು ಮಾತ್ರ ಈ ಭಾಗದಿಂದ ತಿಳಿದುಬರುವುದು. ಆದುದರಿಂದ ಈ ಗ್ರಂಥವನ್ನು ಬರೆದ ಕಾಲದಲ್ಲಿ ನೃಪತುಂಗನು ವೈದಿಕಮತಾಚಾರವನ್ನು ಸಂಪೂರ್ಣವಾಗಿ ಬಿಡದಿದ್ದರೂ ಜೈನಮತಾಭಿನಿವೇಶವು ಆಗಲೇ ಅವನ ಹೃದಯದಲ್ಲಿ ಬೇರೂರಿತ್ತೆಂದು ನಿಸ್ಸಂದೇಹವಾಗಿ ಹೇಳಬಹುದು. ಒಟ್ಟನಮೇಲೆ ನೋಡುವಲ್ಲಿ, ನೃಪತುಂಗನು ಆದಿಯಲ್ಲಿ ವೈದಿಕ ಮತಾವಲಂಬಿಯಾಗಿದ್ದು, ಅನೂಚಾನವಾಗಿದ್ದ ವೈದಿಕಮತದ ಆಚಾರವನ್ನು ಬಿಡದೆ ಜಿನಮತವನ್ನು ಸ್ವೀಕರಿಸಿ, ಕೊನೆಗೆ ಜಿನದೀಕ್ಷೆಯನ್ನು ಸ್ವೀಕರಿಸಿದನೆಂದು ಒಪ್ಪಿಕೊಳ್ಳುವುದರಿಂದ ಈಗ ಉಪಲಬ್ಧವಾಗಿರುವ ಆವ ಸಾಧನಗಳಿಗೂ ಪರಸ್ಪರ ವಿರೋಧವು ಇರುವುದಿಲ್ಲ.

ಈ ಮೇಲೆ ಹೇಳಿದ ಊಹೆಗಳಿಗೆ ಪೊನ್ನನು ಶಾಂತಿಪುರಾಣದ ಅಂತ್ಯದಲ್ಲಿ ಕುಕವಿನಿಂದಾ ಪ್ರಸಂಗದಲ್ಲಿ ಹೇಳಿರುವ :—

"ಎಸೆಯದೆ ಪೂಬ್ದು ಕೆಟ್ಟ ಪಟಗಬ್ಬಮನಾವಗಮೆಮ್ಮವೆಂದು ಬಾ ।
ಚಿಸಿ ಪೆಱರ್ಗಿತ್ತುದಲ್ಲದೆ ಬಹುಶ್ರುತಮೆಂಬಿನ ವೆಕ್ಕಲಾವಣಂ ॥
ಪೊಸಯಿಪ ಕಮ್ಮಯಿಪ್ಪ ಸಮುಕಟ್ಟುವ ಬಿನ್ನಣ ಮಿಲ್ಲದರ್ಕೆ ರಂ ।
ಜಿಸವೆರ್ದೆಗೊಳ್ಳವೀಗಡಿನ ಕಬ್ಬಿಗವಂದಿಗಳೊಂದವಿಂದಿಗಳ್ ॥ XIV-76"

ಈ ಪದ್ಯವೊಂದು, ವಿಶೇಷ ಸಹಾಯಕವಾಗಿರುವುದು. ಈ ಪೊನ್ನನು ಕವಿರಾಜಮಾರ್ಗ ಗ್ರಂಥಕರ್ತೃವಿಗಿಂತಲೂ ಸು. 50-60 ವರುಷಗಳಷ್ಟು ಈಚಿನವನು. ಇಷ್ಟು ಸಮೀಪಕಾಲದಲ್ಲಿದ್ದ ಇವನಿಗೆ ಕವಿರಾಜಮಾರ್ಗ ಕರ್ತೃವಿನ ವಿಷಯದಲ್ಲಿನ ಪ್ರವಾದವೆಲ್ಲವೂ ಚೆನ್ನಾಗಿ ತಿಳಿದಿರಬೇಕು. ಆದುದರಿಂದಲೇ ಈ ಪದ್ಯದಲ್ಲಿ ಅನ್ಯೋಕ್ತಿಯಿಂದ ಕವಿರಾಜಮಾರ್ಗ ಕರ್ತೃವನ್ನೇ ಇವನು ನಿಂದಿಸಿರಬೇಕು. (ಇನ್ನಾವ ಕವಿಗಳೂ ಈ ಬಗೆಯಲ್ಲಿ ಅನ್ಯಕವಿಗಳನ್ನು ನಿಂದಿಸಿಲ್ಲ.)

ಕವಿರಾಜಮಾರ್ಗಗ್ರಂಥ

ಇಷ್ಟರ ತನಕ ಈ ಗ್ರಂಥದ ಕರ್ತೃತ್ವ, ಗ್ರಂಥಕರ್ತೃವಿನ ಮತ ಈ ವಿಷಯಗಳಲ್ಲಿ ವಿಮರ್ಶಕರ ಅಭಿಪ್ರಾಯಗಳೆಲ್ಲವನ್ನೂ ಕ್ರೋಡೀಕರಿಸಿ, ಅಲ್ಲಲ್ಲಿ ನಮಗೆ ತೋರಿದ ಅಭಿಪ್ರಾಯಗಳನ್ನು ಸೂಚಿಸಿದುದಾಯಿತು. ಇನ್ನು "ಕವಿರಾಜಮಾರ್ಗ" ಗ್ರಂಥದ ಸ್ವರೂಪವನ್ನು ಸ್ಥೂಲಮಾನದಿಂದ ಇಲ್ಲಿ ನಿರೂಪಿಸಿ ಪ್ರಕೃತ ವಿಷಯವನ್ನು ಉಪಸಂಹರಿಸುವೆವು.

೧ ನೆಯ ಪರಿಚ್ಛೇದ

ಈ ಅಲಂಕಾರಗ್ರಂಥವು ಮೂರು ಪರಿಚ್ಛೇದಗಳಾಗಿ ವಿಭಾಗಿಸಲ್ಪಟ್ಟಿದೆ. (ಆದರೆ ಇದಕ್ಕೆ ಮಾತೃಕೆಯಾದ ದಂಡಿಯ ಕಾವ್ಯಾದರ್ಶದಲ್ಲಿ ನಾಲ್ಕು ಪರಿಚ್ಛೇದಗಳಿವೆ.) ಕವಿಯು ಮೊದಲನೆಯ ಪರಿಚ್ಛೇದದ ವಿಷ್ಣುಸ್ತುತಿ ರೂಪವಾದ ಎರಡು ಮಂಗಳಪದ್ಯಗಳಲ್ಲಿ ಶ್ಲೇಷೆಯಿಂದ, ತನ್ನ ಆಶ್ರಯದಾತನಾದ ನೃಪತುಂಗನನ್ನು ಸ್ತುತಿಸಿ ಬಳಿಕ ಸರಸ್ವತಿಯನ್ನೂ, ಪೂರ್ವಾಚಾರ್ಯರನ್ನೂ, ನೃಪತುಂಗಸಭಾಸದರನ್ನೂ ಪ್ರಾರ್ಥಿಸಿ, ಭಾಷೆಯ ಮತ್ತು ಭಾಷಾಶಾಸ್ತ್ರದ ಆವಶ್ಯಕತೆಯನ್ನು ನಿದರ್ಶನಪೂರ್ವಕವಾಗಿ ಉಪಪಾದಿಸಿ, ಕಾವ್ಯಹೇತುವನ್ನು ನಿರೂಪಿಸಿ, ಅಶಕ್ತನು ಕವಿತ್ವಮಾಡಲು ಯತ್ನಿಸಕೂಡದೆಂದು ನಿರಾಕರಿಸಿ, ಪರಚ್ಛಾಯಾನುವರ್ತಿಗಳಾಗದೆ ಸ್ವಪ್ರತಿಭಾಶಕ್ತಿಯಿಂದಲೇ ಕಾವ್ಯವನ್ನು ರಚಿಸುವ ಕವಿಶ್ರೇಷ್ಠರನ್ನೂ, ವಿಶೇಷವಾಗಿ ಪದ್ಯಗ್ರಂಥಕರ್ತೃಗಳಾದ ಕವಿಮಣಿಗಳನ್ನೂ ಶ್ಲಾಘಿಸಿ, (ಈ ಗ್ರಂಥಕ್ಕೆ ಮೂಲವಾದ ಕಾವ್ಯಾದರ್ಶದಲ್ಲಿ ಈ ವಿಷಯವಿಲ್ಲದಿರುವುದೂ, ಈ ಗ್ರಂಥದಲ್ಲಿ ಪದ್ಯಗ್ರಂಥಕರ್ತೃಗಳ ಗೋಷ್ಠಿಯಲ್ಲಿ ಕವೀಶ್ವರನೆಂಬುವನನ್ನು ಸೇರಿಸಿ ಹೇಳಿರುವುದೂ, ಈ ಕವಿಯು ಪದ್ಯಕಾವ್ಯಗಳನ್ನು ಬರೆದಿರಬಹುದೆಂಬ ಊಹೆಗೆ ಉಪಷ್ಟಂಭಕವಾಗಿರುವುವು.) ಉತ್ತಮ ಕವಿಕೃತಕಾವ್ಯಪ್ರಯೋಜನವನ್ನು ಹೇಳಿ, ಕಾವ್ಯವನ್ನು ಅವಶ್ಯವಾಗಿ ರಚಿಸಲೇಬೇಕೆಂದು ಉಪದೇಶಿಸಿ, ಪ್ರಕೃತಗ್ರಂಥವನ್ನು ಆರಂಭಿಸುವನು.

ಕಾವ್ಯಲಕ್ಷಣವನ್ನೂ ಪದ್ಯಗದ್ಯಾತ್ಮಕಕಾವ್ಯಭೇದಗಳನ್ನೂ ಹೇಳಿದ ತರುವಾಯ, ಗದ್ಯಲಕ್ಷಣ, ಸಂಸ್ಕೃತ ಗದ್ಯಗ್ರಂಥಗಳು, ಕರ್ಣಾಟಕ ಗದ್ಯಗ್ರಂಥಗಳು, ಪದ್ಯಲಕ್ಷಣ, ಸಂಸ್ಕೃತ ಪದ್ಯಗ್ರಂಥಕರ್ತೃಗಳು, ಕನ್ನಡಕಾವ್ಯಭೇದ, ಈ ಕನ್ನಡಕಾವ್ಯಗಳ ಲಕ್ಷಣ, ಕನ್ನಡನಾಡಿನ ಮೇರೆಗಳು, ತಿರುಳ್ಗನ್ನಡದ ತವರ್ಮನೆ, ಕನ್ನಡನಾಡಿನವರ ಪಾಂಡಿತ್ಯ, ಇವುಗಳನ್ನು ವಿವರಿಸಿ, ಕನ್ನಡಭಾಷೆಯ ಮಹತ್ವವನ್ನೂ ನಿರೂಪಿಸಿ, ಕಾವ್ಯದಲ್ಲಿ ಅಲ್ಪದೋಷವೂ ಇರಕೂಡದೆಂದು ನಿದರ್ಶನ ಪೂರ್ವಕವಾಗಿ ಉಪಪಾದಿಸಿ, ತಾತ್ಕಾಲಿಕವಾದ ಹಳಗನ್ನಡ ಹೊಸಗನ್ನಡ ಭಾಷೆಗಳ ಸ್ವರೂಪವನ್ನೂ, ಕನ್ನಡಭಾಷೆಯಲ್ಲಿ ಸಂಸ್ಕೃತಪದಗಳನ್ನು ಉಪಯೋಗಿಸುವ ನಿಯಮವನ್ನೂ ತಿಳಿಸಿ, ಭಾಮಹ ಮತ್ತು ದಂಡಿ, ಇವರಿಬ್ಬರ ಮತವನ್ನೂ ಒಟ್ಟಿಗೆ ಸೇರಿಸಿ, ಕಾವ್ಯದೋಷಗಳನ್ನು ಲಕ್ಷ್ಯಲಕ್ಷಣದೊಡನೆ ವಿವರಿಸಿ, ಬಳಿಕ ಕಾವ್ಯದಲ್ಲಿ ದೋಷವಿರಕೂಡದೆಂದು ಹೇಳಿ, ಮತ್ತೆ (ಈ ಪುನರುಕ್ತಿಯಿಂದಲೇ ಇಲ್ಲಿಂದ ಮುಂದೆ ಹೇಳುವ ವಿಷಯವೆಲ್ಲವೂ ಶ್ರೀ ವಿಜಯಕೃತಕವಿಮಾರ್ಗದಲ್ಲಿಲ್ಲದೆ, ಈ ಕವಿರಾಜಮಾರ್ಗಕರ್ತೃವಿನಿಂದಲೇ ಬರೆಯಲ್ಪಟ್ಟುವೆಂದು ಊಹಿಸಲು ಅವಕಾಶವಿರುವುದು.) ಕೆಲವು ಕಾರಕದೋಷಾದಿಕಾವ್ಯದೋಷಗಳನ್ನು ಹೇಳಿ ಈ ಪ್ರಥಮ ಪರಿಚ್ಛೇದವನ್ನು ಮುಗಿಸಿರುವನು. ದಂಡಿಯಾದರೋ ಈ ದೋಷ ಪ್ರಕರಣವನ್ನು ನಾಲ್ಕನೆಯ ಪರಿಚ್ಛೇದದಲ್ಲಿ ಹೇಳಿರುವನು. ಕಾರಕ ದೋಷಾದಿಗಳನ್ನು ಹೇಳಲೇ ಇಲ್ಲ.

೨ ನೆಯ ಪರಿಚ್ಛೇದ

ಇನ್ನು ಎರಡನೆಯ ಪರಿಚ್ಛೇದದಲ್ಲಿ ಶಬ್ದಾರ್ಥಾಲಂಕಾರಗಳೆಂಬ ಅಲಂಕಾರ ಭೇದಗಳನ್ನು ಹೇಳಲು ಹೊರಟು ಅವುಗಳೊಳಗೆ ಪ್ರಧಾನವಾದ ಶಬ್ದಾಲಂಕಾರ ಸ್ವರೂಪವನ್ನು ಮೊದಲು ನಿರೂಪಿಸುವುದಾಗಿ ಪ್ರತಿಜ್ಞೆಮಾಡಿ, ಕನ್ನಡಭಾಷೆಯಲ್ಲಿ ಸಂಭವಿಸಬಹುದಾದ ಪದಸಂಯೋಗಾರ್ಥಸಂಯೋಗ ಜನ್ಯದೋಷಗಳನ್ನೂ, ಸಂಧಿದೋಷವನ್ನೂ (ಇದು ಶಬ್ದ ಮಣಿದರ್ಪಣದಲ್ಲಿಯೂ ಉಕ್ತವಾಗಿದೆ), ಷಷ್ಠಿಯ ಮತ್ತು ಸಂಬೋಧನೆಯ ದೀರ್ಘ ಪ್ರಯೋಗದ ದೋಷವನ್ನೂ, ಪ್ರಾಸಲಕ್ಷಣವನ್ನೂ, ಪ್ರಾಸಭೇದಗಳನ್ನೂ, ಲಕ್ಷ್ಯಲಕ್ಷಣ ಗಳೊಡನೆ ವಿವರಿಸಿ, ಅನಂತ ವಿಕಲ್ಪವುಳ್ಳ ಮಾರ್ಗಗತಿಗಳನ್ನು, ಪುರಾಣ ಶಾಸ್ತ್ರವನ್ನು ಅನುಸರಿಸಿ ಕನ್ನಡದಲ್ಲಿ "ಇನಿಸಂ ಪೇೞ್ವೆ"ನೆಂದು ಪ್ರತಿಜ್ಞೆಮಾಡಿ, (ಇದರಿಂದಲೂ ಪೂರ್ವಶಾಸ್ತ್ರವೆಂದರೆ ದಂಡಿಯ ಮಾರ್ಗಲಕ್ಷಣವನ್ನು ಅನುಸರಿಸಿದ್ದ "ಕವಿಮಾರ್ಗವನ್ನು" ನೋಡಿ ಕನ್ನಡಕ್ಕೆ ಸಂಬಂಧಿಸಿದ ಕೆಲವು ಲಕ್ಷಣವನ್ನು, ಇಲ್ಲಿ ತಾನು ಹೆಚ್ಚಾಗಿ ಸೇರಿ ಸಿರುವನೆಂಬ ಧ್ವನಿಯು ಸೂಚಿತವಾಗುವುದು) ದಕ್ಷಿಣೋತ್ತರಮಾರ್ಗಭೇದಕ್ಕೆ ನಿದಾನ ವಾದ ಶ್ಲೇಷ ಪ್ರಸಾದಾದಿ ಹತ್ತು ಕಾವ್ಯಗುಣಗಳನ್ನು ಲಕ್ಷ್ಯಲಕ್ಷಣಗಳೊಡನೆ ವಿವರಿಸಿ, ಈ ಮಾರ್ಗಲಕ್ಷಣಕ್ಕೆ ಸಂಬಂಧಿಸಿದ ಕನ್ನಡ ಭಾಷೆಯಲ್ಲಿಯ ಕೆಲವು ಪದಗಳ ಸ್ವರೂಪ ವನ್ನೂ ಹೇಳಿ, ಕನ್ನಡಭಾಷೆಯಲ್ಲಿ ರಚಿಸಲಶಕ್ಯವಾದ, ಚಿತ್ರಕಾವ್ಯಗಳ ಜಾತಿಗೆ ಸೇರಿದ, ಏಕಾಕ್ಷರಿ, ದ್ವ್ಯಕ್ಷರಿ, ಯಮಕ ಮೊದಲಾದ ಶಬ್ದಚಿತ್ರವುಳ್ಳ ಪದ್ಯಗಳನ್ನೂ, ಪ್ರಹೇಳಿಕೆ ಗಳನ್ನೂ, ಉದಾಹರಿಸಿ, ಈ ಎರಡನೆಯ ಪರಿಚ್ಛೇದವನ್ನು ಮುಗಿಸಿರುವನು.

ದಂಡಿಯು ತನ್ನ ಕಾವ್ಯಾದರ್ಶದಲ್ಲಿ ಪ್ರಥಮಪರಿಚ್ಛೇದದಲ್ಲಿಯೇ ಕಾವ್ಯಾಂಗವೆನಿಸಿದ ಶಬ್ದರಚನಾಸಂಘಟನಾತ್ಮಕವಾದ ಈ ಮಾರ್ಗದ್ವಯಲಕ್ಷಣಗಳನ್ನು ನಿರೂಪಿಸಿ, ಏಕಾಕ್ಷರಿ, ಯಮಕ, ಪ್ರಹೇಳಿಕೆ, ಮೊದಲಾದ ಚಿತ್ರಕಾವ್ಯ ವಿಚಾರವನ್ನು ಮೂರನೆಯ ಪರಿಚ್ಛೇದ ದಲ್ಲಿ ಹೇಳಿರುವನು.

೩ ನೆಯ ಪರಿಚ್ಛೇದ

ಈ ಪರಿಚ್ಛೇದದಲ್ಲಿ ದಂಡಿಯು ಹೇಳಿರುವಂತೆಯೇ ಈ ಗ್ರಂಥಕರ್ತೃವೂ, ಮೂವ ತ್ತೈದುಬಗೆಯ ಅರ್ಥಾಲಂಕಾರಗಳನ್ನೂ, ಅವುಗಳ ಅಂತರಾಳಿಕಭೇದಗಳನ್ನೂ, (ಕೆಲವು ಅಂತರಾಳಿಕ ಭೇದಗಳನ್ನು ಬಿಟ್ಟಿರುವನು. ಒಂದೆರಡು ಭೇದಗಳನ್ನು ಹೆಚ್ಚಾಗಿ ಸೇರಿಸಿ ರುವನು.) ಲಕ್ಷ್ಯಲಕ್ಷಣಗಳೊಡನೆ ವಿವರಿಸಿ, ಕೊನೆಯಲ್ಲಿ ಧ್ವನಿಯೆಂಬ ಅಲಂಕಾರ ವೊಂದನ್ನೂ ಸೇರಿಸಿರುವನು (III. 208). ಬಳಿಕ, ದಂಡಿಯು ಕಾವ್ಯಾದರ್ಶದ ಪ್ರಥಮಾ ಧ್ಯಾಯದ ಕೊನೆಯಲ್ಲಿ ಹೇಳಿರುವ ಅಷ್ಟಾದಶವರ್ಣನೆಯನ್ನು ಒಳಕೊಂಡಿರಬೇಕೆಂಬ ಮಹಾಕಾವ್ಯಲಕ್ಷಣವನ್ನು (III. 210 - 216) ಆರು ವೃತ್ತಗಳಿಂದ ಅತಿಯಾಗಿ ವಿವರಿಸಿ ಹೇಳಿ, (ಈ ಲಕ್ಷಣವು ಪ್ರಾಯಃ ಕವಿಮಾರ್ಗದಲ್ಲಿ ದಂಡಿಯ ಲಕ್ಷಣದಂತೆಯೇ ಸಂಗ್ರಹ

ವಾಗಿದ್ದಿರಬಹುದು.) ಈ ಕಾವ್ಯ ಪ್ರಯೋಜನವನ್ನು ಪ್ರಶಂಸಿಸಿ, ದ್ವಿಪ್ರಾಸ ಮೊದಲಾದ ನಾಲ್ಕು ಬಗೆಯ ಪ್ರಾಸಗಳನ್ನು ಲಕ್ಷ್ಯಲಕ್ಷಣದೊಡನೆ ವಿವರಿಸಿ, [1](ಇದು ಪ್ರಾಯಃ ಹಿಂದೆ ಎರಡನೆಯ ಪರಿಚ್ಛೇದದ ಪ್ರಾಸಪ್ರಕರಣದಲ್ಲಿಯೇ ಇರಬೇಕಾದುದು.) ಪ್ರಶಸ್ತಿವಾಕ್ಯದೊಡನೆ ಗ್ರಂಥವನ್ನು ಪರಿಸಮಾಪ್ತಿಮಾಡಿರುವನು. ಪ್ರತಿಯೊಂದು ಪರಿಚ್ಛೇದದ ಕೊನೆಯಲ್ಲಿಯೂ "ನೃಪತುಂಗದೇವಾನುಮತಕವಿರಾಜಮಾರ್ಗದೊಳ್" ಎಂದು ಹೇಳಿದ್ದರೂ, ಈ ಮೂರನೆಯ ಪರಿಚ್ಛೇದದ ಕೊನೆಯಲ್ಲಿ ಮಾತ್ರ "ಪರಮಸರಸ್ವತೀತೀರ್ಥಾವತಾರ ನೃಪತುಂಗದೇವಾನುಮತ" ಎಂದು ವಿಶೇಷಣವೊಂದನ್ನು ಹೆಚ್ಚಾಗಿ ಸೇರಿಸಿ ಹೇಳಿರುವನು.

ಈ ಗ್ರಂಥದಲ್ಲಿಯ ಲಕ್ಷ್ಯಪದ್ಯಗಳಲ್ಲಿ ಕೆಲವು ದಂಡಿಯ ಲಕ್ಷ್ಯಪದ್ಯಗಳ ಪರಿವರ್ತನಗಳಾಗಿವೆ. ಮತ್ತೆ ಕೆಲವು ಛಾಯಾಮಾತ್ರಾನುವರ್ತಿಗಳಾಗಿವೆ. ಮತ್ತೆ ಕೆಲವು ವೈದಿಕಮತಾನುಸಾರಿಯಾದ ಅರ್ಥವನ್ನು ಕೊಡುವುವಾದರೂ, ಅವು ದಂಡಿಯಪದ್ಯಗಳ ಛಾಯೆಗಳೇ ಹೊರತು ಬೇರೆಯಲ್ಲ. ಕೆಲವು ಜೈನಮತಪ್ರಕ್ರಿಯೆಯನ್ನು ಪ್ರತಿಪಾದಿಸುವಂತೆ ಈ ಗ್ರಂಥಕರ್ತೃವಿನಿಂದಲೇ ಮಾರ್ಪಡಿಸಲ್ಪಟ್ಟಿವೆ. (ಇವುಗಳನ್ನು ಕವಿಮಾರ್ಗದ ಪದ್ಯಗಳೆಂದಾದರೂ ಹೇಳಬಹುದು.) ರಾಮಾಯಣದ ಕಥಾಭಾಗವನ್ನೊಳಕೊಂಡಿರುವ ಕೆಲವು ಲಕ್ಷ್ಯಪದ್ಯಗಳು ಒಂದೆರಡೆಡೆಗಳಲ್ಲಿ ಕಂಡುಬರುವುವು (II. 36; 38; 40. III. 189; 194). ಇದರಿಂದ ಈ ಕಾವ್ಯಕ್ಕಿಂತಲೂ ಹಿಂದೆ ರಾಮಾಯಣಗ್ರಂಥವೊಂದಿತ್ತೆಂತಲೂ, ಅದರಿಂದ ಈ ಪದ್ಯಗಳು ಉದ್ಧೃತವಾದುವುಗಳೆಂದೂ ಕೆಲವರು ಊಹಿಸುವರು. ಆದರೆ ಈ ಗ್ರಂಥಕರ್ತನು ಆವುದೊಂದು ಲಕ್ಷ್ಯಪದ್ಯವನ್ನೂ ಪೂರ್ವಗ್ರಂಥಗಳಿಂದ ಉದ್ಧರಿಸಿದಂತೆ ಕಂಡುಬರುವುದಿಲ್ಲ.[2] ಏಕೆಂದರೆ ಇದರಲ್ಲಿರುವ ಲಕ್ಷ್ಯಪದ್ಯಗಳಲ್ಲಿ ದಂಡಿಯ ಅನುವಾದರೂಪವಾದ ಪದ್ಯಗಳನ್ನೂ, ರಾಮಾಯಣದ ಕಥಾಭಾಗವನ್ನು ಸೂಚಿಸುವ ಮೇಲೆ ಹೇಳಿದ ಪದ್ಯಗಳನ್ನೂ ಮತ್ತು ಎರಡನೆಯ ಪರಿಚ್ಛೇದದ 34 ನೆಯ ಈ ಪದ್ಯವನ್ನೂ ಬಿಟ್ಟರೆ, ಉಳಿದುವುಗಳಲ್ಲಿ ಹಲವು ಒಬ್ಬ ಅರಸನನ್ನು ಕುರಿತು ಸಂಬೋಧಿಸಿ, ಅವನ ಶೌರ್ಯೌದಾರ್ಯಾದಿ ಗುಣಗಳನ್ನು ವರ್ಣಿಸಿದಂತಿವೆ. ಇವನ್ನು ಗ್ರಂಥಕರ್ತನೇ ತನ್ನ ಆಶ್ರಯದಾತನನ್ನು ಕುರಿತು ಹೇಳಿದಂತೆ ನಾವು ಊಹಿಸಬಹುದು. ಮತ್ತೆ ಕೆಲವು ಒಬ್ಬ ಸ್ತ್ರೀಯನ್ನು ಕುರಿತು ಆಕೆಯ ಸೌಂದರ್ಯಾದಿಗಳನ್ನು ವರ್ಣಿಸಿದಂತಿರುವುದರಿಂದ ಇವನ್ನು ಕವಿಯು,

---

1. ಈ ಪ್ರಾಸವಿಚಾರವು II ನೆಯ ಪರಿಚ್ಛೇದದ 43 ನೆಯ ಪದ್ಯದ ಮುಂದೆ ಬರಬೇಕು. ಈ ಪದ್ಯಗಳಲ್ಲಿ "ಒಂದೊಂದರ..."—III 233 ಎಂಬ ಪದ್ಯವು ನೇಮಿಚಂದ್ರನ ಲೀಲಾವತಿಯಲ್ಲಿರುವುದರಿಂದ, ಪ್ರಾಯಃ ಈ ಪ್ರಾಸಕ್ಕೆ ಕೊಟ್ಟಿರುವ ಲಕ್ಷ್ಯಪದ್ಯಗಳನ್ನು ಆಧುನಿಕರು ಯಾರೋ ಹೊಸದಾಗಿ ಸೇರಿಸಿರಬಹುದೆಂಬ ಊಹೆಗೆ ಅವಕಾಶವುಂಟು.

2. ಪ್ರಾಸಕ್ಕೂ, ರಸಾದ್ಯಲಂಕಾರಗಳಿಗೂ ಕೊಟ್ಟಿರುವ ಲಕ್ಷ್ಯಗಳಲ್ಲಿ ಮಾತ್ರವೇ ಈ ಬಗೆಯ ಅನ್ಯಗ್ರಂಥಪದ್ಯಗಳು ಕಂಡುಬರುವುವು. ಈ ಪ್ರಾಸಲಕ್ಷ್ಯಗಳನ್ನು ಮಾತ್ರ ಆಧುನಿಕರು ಬೇರೆ ಗ್ರಂಥದಿಂದ ಆರಿಸಿ ಸೇರಿಸಿರಬಹುದೆಂಬ ಊಹೆಗೂ ಅವಕಾಶವುಂಟು.

ತನ್ನ ಆಶ್ರಯದಾತನು ಶೃಂಗಾರರಸ ಪ್ರಿಯನು ಎಂದು ತೋರಿಸುವುದಕ್ಕಾಗಿ, ಆತನು ಹೇಳಿದಂತೆ ತಾನೇ ರಚಿಸಿ ಹೇಳಿರುವನೆಂದೂ ಊಹಿಸಬಹುದು. ದಂಡಿಯು ಕೂಡ ತನ್ನ ಲಕ್ಷ್ಯಪದ್ಯಗಳನ್ನು ಸ್ವಂತವಾಗಿಯೇ ವಿರಚಿಸಿರುವನಲ್ಲದೆ ಬೇರೆ ಗ್ರಂಥಗಳಿಂದ ಆರಿಸಿ ಕೊಂಡಿರುವುದಿಲ್ಲ. ಆದರೆ ಈ ಗ್ರಂಥದ ಪ್ರಾಸಪ್ರಕರಣದಲ್ಲಿ, "ಒಬ್ಬ ಸ್ತ್ರೀಯು ಹಡಗಿ ನಲ್ಲಿ ಪ್ರಯಾಣಮಾಡುತ್ತ, ಹಡಗು ಒಡೆದು ಹೋಗಲು, "ಪ್ರಮಾದಫಲಕದ" (Life saving appliance) ಆಧಾರದಿಂದ ಬದುಕಿದಳು. ಹೀಗೆ ಬದುಕುವುದು ದುರ್ಲಭ" ಎಂಬ ಅರ್ಥವನ್ನು ಕೊಡುವ—"ಪತ್ತಿ ಪ್ರಮಾದ ಫಲಕವ..." (II. 34.) ಎಂಬ ಪದ್ಯವು ರತ್ನಾವಳೀ ನಾಟಿಕೆಗೆ ಸಂಬಂಧಪಟ್ಟಂತೆ ಕಂಡುಬರುವುದು. ಸಂಸ್ಕೃತ ರತ್ನಾವಳೀ ನಾಟಿಕೆಯು ಕನ್ನಡಕ್ಕೆ ಪರಿವರ್ತಿತವಾಗಿದ್ದು ಅದರಿಂದ ಈ ಪದ್ಯವು ಉದ್ಧೃತ ವಾದುದು ಎಂದು ಹೇಳುವುದಕ್ಕೆ ಸಾಕಾದಷ್ಟು ದೃಢವಾದ ಕಾರಣವಿಲ್ಲದುದರಿಂದ, ಸಂಸ್ಕೃತ ಭಾಷೆಯಲ್ಲಿಯೂ ವಿಶೇಷ ಪಾಂಡಿತ್ಯವುಳ್ಳ ಈ ಕವಿಯು ಸಂದರ್ಭಾನುಸಾರವಾಗಿ, ಆ ಪದ್ಯ ವೊಂದನ್ನು ಪರಿವರ್ತನೆಮಾಡಿ, ಸೇರಿಸಿರುವನೆಂದು ಊಹಿಸುವುದೇ ಪ್ರಕೃತಕ್ಕೆ ಯುಕ್ತ ವಾಗಿ ತೋರುವುದು.

ಈತನು ಸಂಸ್ಕೃತಾಲಂಕಾರಿಕರಾದ ಭಾಮಹಾದಿಗಳಿಗೆ ಎಷ್ಟರಮಟ್ಟಿಗೆ ಋಣಿಯಾಗಿ ರುವನೆಂಬುದನ್ನು ಇಲ್ಲಿ "ಸ್ಥಾಲೀಪುಲಾಕನ್ಯಾಯ" ದಿಂದ ತೋರಿಸಿ, ಈ ಬರವಣಿಗೆ ಯನ್ನು ಉಪಸಂಹರಿಸುವೆವು.

ಭಾಮಹ	ಕವಿರಾಜಮಾರ್ಗ
1. "ಗುರೂಪದೇಶಾದಧ್ಯೇತುಂ ಶಾಸ್ತ್ರಂ ಜಡಧಿಯೋಽಪ್ಯಲಂ" I-5.	"ಜಡಜನಮುಂ...ಕ್ರಮದಿಂ I-10.
2. "ಗದ್ಯಂ ಪದ್ಯದ್ವಿತಿ ವಿಧಾ"	"ಕ್ರಮದೆ ಗದ್ಯಪದ್ಯಾಖ್ಯಾತಂ I-24. (ಈ ಬಗೆಯ ವಿಭಾಗವು ದಂಡಿಯ ಕಾವ್ಯಾದರ್ಶದಲ್ಲಿಲ್ಲ).
3. "ಶ್ರುತಿದುಷ್ಟಾರ್ಥದುಷ್ಟೇಚ ಕಲ್ಪನಾ ದುಷ್ಟಮಿತ್ಯಪಿ, ಶ್ರುತಿಕಷ್ಟಂ ತಥೈವಾಹುಃ ವಾಚಾಂ ದೋಷಂ ಚತುರ್ವಿಧಂ" I-47.	"ಶ್ರುತದುಷ್ಟಂ.................." I-61. (ಈ ದೋಷವಿಭಾಗವು ಕಾವ್ಯಾದರ್ಶದಲ್ಲಿಲ್ಲ).

ದಂಡಿ (ಕಾವ್ಯಾದರ್ಶ)	ಕವಿರಾಜಮಾರ್ಗ
1. "ಅಪಾರ್ಥಂ...ವಿಸಂಧಿಕಂ" IV-2.	3. "ಯತಿಭಂಗ..." I-68.
2. "ದೇಶಕಾಲ...ಸೂರಿಭಿಃ" IV-3.	5. "ಆಗಮುಸಮಯ..." I-69.

3. " ಸಮುದಾಯಾರ್ಥಶೂನ್ಯಂ ಯ-ತ್ತದಪಾರ್ಥಕಮಿಷ್ಯತೆ " IV-5.	" ಸಮುದಾಯಾರ್ಥಮನಾರಯೆ " I-77.
4. " ನೈತನ್ಮುಖಮಿದಂ...ಪಸ್ತವ " II-94.	" ವದನಮಿದಲ್ತಂಬುರುಹಂ " III-24.
5. " ಪವನೋ ದಕ್ಷಿಣಃಪರ್ಣಂ...... ವೀರುಧಾಂ ॥" II-98.	" ಮಲಯಾನಿಲನೊಯ್ಯನೆ... " III-54.

ಇನ್ನು ಈ ಗ್ರಂಥದ ಪ್ರಾಮಾಣಿಕತ್ವವನ್ನು ಕುರಿತು ಇಲ್ಲಿ ಒಂದೆರಡು ಮಾತುಗಳನ್ನು ಹೇಳುವುದು ಅಗತ್ಯವು. ಉಭಯಕವಿಚಕ್ರವರ್ತಿಯೆನಿಸಿದ ಪೊನ್ನನು ತನ್ನ ಶಾಂತಿಪುರಾಣದಲ್ಲಿ ಈ ಗ್ರಂಥದ ಶಬ್ದಾರ್ಥಗಳ ಆನುರೂಪ್ಯವನ್ನು ನಿದರ್ಶನಗಳೊಡನೆ ವಿವರಿಸಿರುವ ಎರಡು ಪದ್ಯಗಳ (II-4, 5) ಭಾವವನ್ನು ಸಂಪೂರ್ಣವಾಗಿ ಅನುವದಿಸಿ ಹೇಳಿರುವುದನ್ನು ನೋಡಿದರೆ, ಈ ಗ್ರಂಥಕರ್ತೃವು ಕರ್ಣಾಟಕ ಕವಿಸಾರ್ವಭೌಮರಿಗೆ ಎಷ್ಟರಮಟ್ಟಿಗೆ ಪ್ರಮಾಣಾರ್ಹನಾಗಿದ್ದನೆಂಬುದನ್ನು ನಾವು ಇಲ್ಲಿ ಕಂಠೋಕ್ತವಾಗಿ ಹೇಳಬೇಕಾದುದಿಲ್ಲ.

ಕವಿರಾಜಮಾರ್ಗ.	ಶಾಂತಿಪುರಾಣ.
ಇಲ್ಲಿಗಿದು ತಕ್ಕುದಿಲ್ಲಿಗೆ । ಪೊಲ್ಲದಿದೆಂದಱಿದು ಸಮಱಿ ಬಲ್ಲಂತೆಲ್ಲಂ ॥	ಸಾರತರೋಕ್ತಿಗೆ ನೆಲ್ಲುಂ । ಮೋರುಂ ಗುಡಿದಂತೆ (ಗೋದಂತೆ) ನೇಱಿತ ಲ್ತಾರ್ಪರವ ॥
ನೆಲ್ಲುಂ ಮೊಸರುಂ ಗುಡಿದಂ । ತಲ್ಲದೆ ತಲ್ಲಣಿಸದಲಸದಿದು ಮೃದುಪದಮಂ ॥ II-4.	ಕೊರ್ಗೆ ನಿಬಂಧನೆ ಟೀಕಾ । ಕಾರಂಗಲ್ಲದೆ ಪೆಱಂಗೆ ಕೋಟಿಪ್ಪೋದಪುದೇ ॥ X-182.
ಗಱಿಯಿಸಿದರ್ಥಂ ಸಲೆ ಪಾಂ । ಗಱಿಯದೆಯುಂ ಶಬ್ದವೇಂದ ದಿದ್ದೊಡೆ ಮುತ್ತುಂ ॥	ಪೞಗಾಂಪರ ನುಡಿ ಮುತ್ತುಂ । ಮೆಱಿಸುಂ ಗೋದಂದದಕ್ಕೆ ಭಾಷ್ಯಮನೊರ್ವಂ ॥
ಮೆಱಿಸುಂ ಕೋದಂತಿಕ್ಕುಂ । ಕಱಲ್ಚಿ ಕಳೆಗೊಂದಿ ಮುಂದೆ ಬಾರದ ಪದಮಂ ॥ II-5.	ಕಱಿಯೋದಿದಾತನಲ್ಲದೆ । ಬಱಿವಱಿಯಂ ಬಂದು ಬರೆಯಲಾಗದಗಣ್ಯಂ ॥ X-181.

ಈ ಗ್ರಂಥವನ್ನು ಶೋಧಿಸಿ ಪರಿಷ್ಕರಿಸುವುದರಲ್ಲಿ, ಈ ವೊದಲೇ ಮುದ್ರಿತವಾಗಿದ್ದ ಕವಿರಾಜಮಾರ್ಗದ ಪ್ರತಿಯೂ, ಮದರಾಸು ಪ್ರಾಚ್ಯಕೋಶಾಲಯದಲ್ಲಿರುವ ತಾಳಪತ್ರ ಪ್ರತಿಯೂ, ಮೈಸೂರು ಲೈಬ್ರರಿಯಲ್ಲಿಯ ಮತ್ತು ಬೊಮ್ಮರಸ ಪಂಡಿತರು ಕಳುಹಿಸಿದ ಪ್ರತಿಗಳೂ ನಮಗೆ ಸಹಾಯಕಗಳಾಗಿರುತ್ತವೆ.

ನಮಗೆ ಇದುವರೆಗೂ ದೊರೆತ ಸಾಧನಗಳನ್ನು ವಿಮರ್ಶೆಮಾಡಿ ತೋರಿ ಬಂದ ಅಭಿಪ್ರಾಯವನ್ನು ಇಲ್ಲಿ ಬರೆದಿರುವೆವು. ಸಹೃದಯರಾದ ವಾಚಕರು ಗುಣಲೇಶದಿಂದಾದರೂ ಸಂತೋಷಗೊಂಡು ಸೂಚನೆಗಳನ್ನು ಕೊಡುವರಾಗಿ ಕೋರುವ.

University Oriental Research Institute, Madras.
15th April, 1929.

A. VENKATA RAU, B.A., L.T.,
Reader in Kannada.

PANDIT, H. SESHA AYYANGAR,
Fellow in Kannada.

ಶ್ರೀ

ಶ್ರೀ ನೃಪತುಂಗದೇವಾನುಮತ

ಮಪ್ಪ

ಕವಿರಾಜಮಾರ್ಗಂ

— ಮಂಗಳಾಚರಣಂ —

ಕಂ॥ ಶ್ರೀ ತಳ್ತುರದೊಳ್ ಕೌಸ್ತುಭ
ಜಾತದ್ಯುತಿ ಬಳಸಿ ಕಾಂಡಪಟದಂತಿರೆ ಸಂ।
ಪ್ರೀತಿಯಿನಾವಗಮಗಲಳ್
ನೀತಿನಿರಂತರನುದಾರನಾ ನೃಪತುಂಗಂ ॥ ೧ ॥

ಕೃತಕೃತ್ಯಮಲ್ಲನಪ್ರತಿ
ಹತವಿಕ್ರಮನೊಸೆದು ಪೀರನಾರಾಯಣನ।
ಪ್ಪತಿಶಯ (ಧ) ವಳಂ ನಮಗೀ
ಗತರ್ಕ್ಕಿತೋಪಸ್ಥಿತಪ್ರತಾಪೋದಯಮಂ ॥ ೨ ॥

ಶ್ರೀ ವಿಶದವರ್ಣೆ ಮಧುರಾ
ರಾವೋಚಿತೆ ಚತುರರುಚಿರಪದರಚನೆ ಚಿರಂ।
ದೇವಿ ಸರಸ್ವತಿ ಹಂಸೀ
ಭಾವದೆ ನೆಲೆಗೊಳ್ಗೆ ಕೂರ್ತು ಮನ್ಮಾನಸದೊಳ್ ॥ ೩ ॥

ಪೂರ್ವ ಕವಿಸ್ತುತಿ.

ಪರಮಾಲಂಕಾರೋಚಿತ
ವಿರಚನೆಗಳ್ ನೆಗಟ್ಟುಮಾರ ವದನೋದರದೊಳ್।
ನೆರೆಮುಕ್ಕಾ ಪರಮಕವೀ
ಶ್ವರರೆಮಗೀ ಕೃತಿಯೊಳಕೃತಕಾಚಾರಪರರ್ ॥ ೪ ॥

ಪೀಠಿಕೆ

ಅತಿಶಯಧವಳ ಸಭಾವರ್ಣನಂ.

ಕಂ॥ ಶ್ರುತದೊಳ್ ಭಾವಿಸಿ ನೋೞ್ಪೊಡೆ
(ಸತತಂ) ಕವಿವೃಷಭರಾ ಪ್ರಯೋಗಂಗಳೊಳಂ ।
ಕೃತಪರಿಚಯಬಲನಪ್ಪನ
ನತಿಶಯಧವಳನ ಸಭಾಸದರ್ ಮನ್ನಿಸುವರ್ ॥ ೫ ॥

ವ್ಯಾಕರಣಕಾವ್ಯನಾಟಕ
ಲೋಕಕಳಾಸಮಯಮಾದಳಂಕೃತಿಗಳೊಳಂ ।
ವ್ಯಾಕುಳನಲ್ಲದನೇಕೆ ವಿ
ವೇಕಬೃಹಸ್ಪತಿಯ ನಗರಮಂ ಪುಗುತಪ್ಪಂ ॥ ೬ ॥

ಅಪಂಡಿತ ನಿಂದೆ.

ಮೃಗಪಶುಶಕುನಿಗಣಂಗಳೊ
ಳಗಣಿತನಿಜಜಾತಿಜನಿತಭಾಷೆಗಳಿಂದುಂ ।
ನೆಗೞ್ದಿಂತಿರೆ ನರರೊಳಮ
ಪ್ರಗಲ್ಭವಚನಪ್ರವೃತ್ತಿನೆಗೞ್ಗಂ ಸಹಜಂ ॥ ೭ ॥

ಗುಣಮಿದು ದೋಷಮಿದೆಂಬೀ
ಗಣಿದಮನೆತ್ತಱಿಂಗುಮಶ್ರುತಪ್ರಕೃ(ತಿ)ಜನಂ ।
ತೃಣಸಸ್ಯಘಾಸವಿಷಯ
ಪ್ರಯಣಂ ಸಮವೃತ್ತಿಯಪ್ಪವೋಲ್ ಮೃಗಗಣದೊಳ್ ॥ ೮ ॥

ಕಾವ್ಯಾಭ್ಯಾಸದ ಆವಶ್ಯಕತೆ.

ಆದಱಿಂ ಪರಮಾಗಮಕೋ
ವಿದನಪ್ಪುದು ಪೂರ್ವಕಾವ್ಯರಚನೆಗಳಂ ತಾಂ ।
ಮೊದಲೊಳ್ ಕಲ್ತಂಗಲ್ಲದೆ
ಪದದೊಳ್ ಜಾಣುಂ ಬೆಡಂಗುಮಕ್ಕುಮೆ ಕೃತಿಯೊಳ್ ॥ ೯ ॥

ಜಡಜನ (ಮು) ಮೆಲ್ಲಮೋದಂ
ತಡೆಯದೆ ಕಲ್ಗಂ ಗುರೂಪದೇಶಕ್ರಮದಿಂ ।
ನುಡಿವಲ್ಮೆಯುಲ್ತದೇಂ ಕ
ಲ್ತೊಡನೋದುವುದಲ್ತೆ ಗಿಳಿಗಳುಂ ಪುರುಳಿಗಳುಂ ॥ ೧೦ ॥

ಕಾವ್ಯರಚನಾಶಕ್ತಿ ಕಾರಣಂ.

ಕಂ॥ ಪ್ರತಿಭಾವತ್ವಮುಮಕೃತಕ
ಚತುರತೆಯುಂ ಪರಮಬುಧಜನೋಪಾಸನಮುಂ ।
ಕೃತಿಪರಿಚಯಮುಂ (ತರ್ಕುಂ)
ಪ್ರತೀತಿ (ಯಂ) ವಾಗ್ವಿದಗ್ಧತಾನಿಪುಣತೆ (ಯೊಳ್) ॥ ೧೧ ॥

ಅಶಕ್ತಕವಿ ನಿಂದೆ.

ಪಸರಿಸಿದಾ ಬಗೆಮನದೊಳ್
ಪೊಸತಾಗೆ ನೆಗಲ್ಚಲಱಿಯನಾ ರಚನೆಯೊಳೇಂ ।
ಬಸನಂ ತನಗಿನಿತಱ ಬೇ
ವಸಮೇಂ ಕವರ್ದವರುಮೊಳರೆ ಕವಿಯಲ್ಲದರಂ ॥ ೧೨ ॥

ಸುಕವಿತ್ವಪ್ರಾಪ್ತಿ ವಿಧಾನಂ.

ಬಗೆಬಗೆದು ಕೇಳ್ದು ಬುಧರೊಲ
ವೊಗೆದಿರೆ ಹೃದಯದೊಳ್ ತಾಳ್ದಿ ಮಣಿಹಾರಂಬೋಲ್ ।
ಸೊಗಯಿಸುವ ವಚನವಿರಚನೆ
ನೆಗಲ್ಗುಂ ಭಾವಿಸುವೊಡದಱ ಪೆಂಪತಿಸುಲಭಂ ॥ ೧೩ ॥

ಪರಚ್ಛಾಯಾನುವೃತ್ತಿ ಕುಕವಿನಿಂದೆ.

ನೆನೆ ನೆನೆದು ಪೆಱರ ಮಾತುಗ
ಳನೆ ನೆಗಲ್ದಿರೆ ಕೃತಿಯೊಳದು ವ(ರಂ) ನಗದ ಗುಹಾ ।
ಧ್ವನಿಯವೊಲನರ್ಥವಚನಂ
ತನಗಾಗಿಸಲಱಿಯನುಚಿತವಾಕ್ಚತುರತೆಯಂ ॥ ೧೪ ॥

ಕವಿಜನ ತಾರತಮ್ಯಂ.

ಕುಱಿತಂತು ಪೆಱರ ಬಗೆಯಂ
ತೆಱೆದಿರೆ ಪೆಱರ್ಗಱಿಪಲಾರ್ಪವಂ ಮಾತಱಿವಂ ।
*ಕಿಱಿದಱೊಳೆ ಪಿರಿದುಮರ್ಥಮ
ನಱಿಪಲ್ ನೆಱೆ(ವಾ)ತನಾತನಿಂದಂ ನಿಪುಣಂ ॥ ೧೫ ॥

* ಶ. ದ. ಸೂ. 110 ರಲ್ಲಿ, ಉದಾಹರಣೆಗಾಗಿ ಕೊಟ್ಟದೆ. (ಮಂಗಳೂರು 2 ನೆಯ ಮುದ್ರಣ.)

ಗುಣವಚನಕ್ಕೆ :— ಕಿಱಿದಱೊಳೆ ಪಿರಿ.........ಜಾಣಂ.

ಕಂ॥ ನುಡಿಯಂ ಛಂದದೊಳೊಂದಿರೆ
ತೊಡರ್ಚಲಱಿವಾತನಾತನಿಂದಂ ಜಾಣಂ।
ಕಡೆಯದೆ ಮಹಾಧ್ವಕೃತಿಗಳ
ನೊಡರಿಸಲಾರ್ಪಾತನೆಲ್ಲರಿಂದಂ ಬಲ್ಲಂ ॥ ೧೬ ॥

ಮಾತಱಿವರ್ ಕೆಲಬರ್ ಜಗ
ತೀತಳಗತಮನುಜರೊಳಗೆ ಮಾತಱಿವವರೊಳ್।
ನೀತಿವಿದರಮಲಕವಿತಾ
ನೀತಿಯುತರ್ ಕೆಲರೆ ಪರಮಕವಿವೃಷಭರ್ಕಳ್ ॥ ೧೭ ॥

ಸುಕವಿಕಾವ್ಯ ಪ್ರಶಂಸೆ.

ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತಪ್ರಕಾರಮಿದು ಸುಖಮಿದು ದುಃ।
ಖೋಪಾತ್ತಮಿದೆಂದಱಿವುಗು
ಮಾ ಪರಮಕವಿಪ್ರಧಾನರಾ ಕಾವ್ಯಂಗಳ್ ॥ ೧೮ ॥

ಲೌಕಿಕಸಾಮಯಿಕೋರುವಿ
ವೇಕಮುಮಭ್ಯುದಯಪರಮನಿಶ್ರೇಯಸಮುಂ।
ಪ್ರಾಕಟಮಕ್ಕುಂ ವಿದಿತಾ
ನೇಕ ಕವೀಶಪ್ರಯೋಗಪದಪದ್ಧತಿಯೊಳ್ ॥ ೧೯ ॥

ಶಾಸ್ತ್ರಾರಂಭಂ

ಕಾವ್ಯಪ್ರಯೋಜನಂ.

ಅಧಿಕೃತಸತ್ಪುರುಷಾರ್ಥ
ಪ್ರಧಾನಧರ್ಮಾರ್ಥಕಾಮಮೋಕ್ಷಂಗಳವಾ।
ಬುಧಜನ ವಿವಿಕ್ತಕಾವ್ಯ
ಪ್ರಧಾರಿತಾರ್ಥಂಗಳಖಿಳಭುವನಹಿತಂಗಳ್ ॥ ೨೦ ॥

ಲೋಕದೊಳದಱಿಂ ಕಾವ್ಯ
ಸ್ವೀಕರಣೋದ್ಯುಕ್ತನಕ್ಕೆ ಕವಿ ತನ್ನಱಿವಂ।
ತಾಕಲ್ಪಾಂತಸ್ಥಾಯಿ
ಶ್ರೀಕೀರ್ತಿವಧೂಪ್ರಧಾನವಲ್ಲಭನಕ್ಕುಂ ॥ ೨೧ ॥

ಕಾವ್ಯಲಕ್ಷಣಂ.

ಕಂ॥ ಕವಿಭಾವಕೃತಾನೇಕ
ಪ್ರವಿಭಾಗವಿವಿಕ್ತಸೂಕ್ತಮಾರ್ಗಂ ಕಾವ್ಯಂ ।
ಸವಿಶೇಷಶಬ್ದರಚನಂ
ವಿವಿಧಾರ್ಥವ್ಯಕ್ತಿವರ್ತಿತಾಲಂಕಾರಂ ॥ ೨೨ ॥

ಕಾವ್ಯಪುರುಷಸ್ವರೂಪಂ.

ನರಲೋಕಚಂದ್ರ ಮತದಿಂ
ಪರಮಾಲಂಕಾರಮುಂ ಶರೀರಮುಮೆಂದಿಂ ।
ತೆರಡಕ್ಕುಂ ಭೇದಂ ಬಹು
ಪರಿಕರಮಾ ಕಾವ್ಯವಸ್ತುಪುರುಷಂಗೆಂದುಂ ॥ ೨೩ ॥

ಕಾವ್ಯಶರೀರಭೇದಂ.

ಅವಱೊಳ್ ಶರೀರಮೆಂಬುದು
ಕವಿಪ್ರಧಾನ ಪ್ರಯೋಗಪದಪದ್ಧತಿಯೊಳ್ ।
ದ್ವಿವಿಧಮೆನಿಕ್ಕುಮದತಿಶಯ
ಧವಳೋಕ್ತ ಕ್ರಮದೆ 'ಗದ್ಯಪದ್ಯಾ'ಖ್ಯಾತಂ ॥ ೨೪ ॥

ಗದ್ಯಕಾವ್ಯಲಕ್ಷಣಂ.

ಪದಪಾದವಿಯುತನಿಯಮಾ
ಸ್ಪದಮಲ್ಲದಳಂಕೃತಂ ಕ್ರಿಯಾಕಾರಕದೊಳ್ ।
ಪುದಿದರ್ಥವ್ಯಕ್ತಿಯನೀ
ವುದು 'ಗದ್ಯ'ಮನೇಕರೂಪಭೇದವಿಭಕ್ತಂ ॥ ೨೫ ॥

ಸಮಸಂಸ್ಕೃತ ಗದ್ಯಕಾವ್ಯಂಗಳ್.

ಸದಮಳಸಮಸಂಸ್ಕೃತ (ಕಾ
ವ್ಯದ) ಹೃದಯಂ 'ಹರ್ಷಚರಿತ ಕಾದಂಬರಿ' ಗಳ್ ।
ಮೊದಲಾಗಿ ನೆಗಟ್ದುವಿದಱೊಳ್
ಸದಳಂಕಾರಂಗಳಖಿಳ(ವಿ)ವಿದಿತಂಗಳ್ ॥ ೨೬ ॥

ಕನ್ನಡಕಾವ್ಯಭೇದ ವಿಚಾರಂ.

ಮಿಗೆ ಕನ್ನಡಗಬ್ಬಂಗಳೊ
ಳಗಣಿತಗುಣಗದ್ಯಪದ್ಯ ಸಮ್ಮಿಶ್ರಿತಮಂ ।
ನಿಗದಿಸುವರ್ ಗದ್ಯಕಥಾ
ಪ್ರಗೀತಿಯಿಂ ತಚ್ಚಿರಂತನಾಚಾರ್ಯರ್ಕಳ್ ॥ ೨೭ ॥

ಕವಿಲಕ್ಷಣಂ.

ಕಂ॥ ಸಕಳಕಳಾಭಾಷಾಲೌ
ಕಿಕಸಾಮಯಿಕಾದಿವರ್ಣನಾನಿರ್ಣಿಕ್ತ ।
ಪ್ರಕಟಿತರವಸ್ತುವಿಸ್ತರ
ವಿಕಲ್ಪ(ವಿ)ದನಲ್ಲದಾಗದಾಗದು ಪೇಚಿಲ್ ॥ ೨೮ ॥

ಕನ್ನಡ ಗದ್ಯ ಕವಿಗಳ್.

ವಿಮಳೋದಯ, ನಾಗಾರ್ಜುನ
ಸಮೇತ ಜಯಬಂಧು, ದುರ್ವಿನೀತಾದಿಗಳೀ ।
ಕ್ರಮದೊಳ್ ನೆಗಱ್ಚಿ ಗದ್ಯಾ
ಶ್ರಮಪದಗುರುತಾಪ್ರತೀತಿಯಂ ಕೆಯ್ಕೊಂಡರ್ ॥ ೨೯ ॥

ಪದ್ಯಕಾವ್ಯ ಲಕ್ಷಣಂ.

ಪದ್ಯಂ ಸಮಸ್ತಜನತಾ
ಹೃದ್ಯಂ ಪದವಿದಿತಪಾದನಿಯಮನಿವೇದ್ಯಂ ।
ವಿದ್ಯಾಪಾರ ಪರಾಯಣ
ಮಾದ್ಯಂ ಸದ್ವ್ಯಕ್ತಿವೃತ್ತಜಾತ್ಯಾಯತ್ತಂ ॥ ೩೦ ॥

ಸಂಸ್ಕೃತ ಪದ್ಯ ಕವಿಗಳ್.

ಪ್ರಣುತ ಗುಣಸೂರಿ, ನಾರಾ
ಯಣ, ಭಾರವಿ, ಕಾಳಿದಾಸ, ಮಾಘಾದಿಗಳೀ ।
ಗಣಿದದೊಳೆ ಮಹಾಕಾವ್ಯ
ಪ್ರಣಯಮನಾಗಿಸಿದರಮಳಕವಿವೃಷಭರ್ಕಳ್ ॥ ೩೧ ॥

ದೇಶೀಯಗಬ್ಬಂಗಳ ಪೆಸರ್.

*ನುಡಿಗೆಲ್ಲಂ ಸಲ್ಲದ ಕ
ನ್ನಡದೊಳ್ ಚತ್ತಾಣಮುಂ ಬೆದಂಡೆಯುಮೆಂದೀ ।
ಗಡಿನ ನೆಗಟ್ತಿಯ ಕಬ್ಬದೊ
ಳೊಡಂಬ(ಡಂಮಾ)ಡಿದರ್ ಪುರಾತನಕವಿಗಳ್ ॥ ೩೨ ॥

---

* ಇದು ಶಬ್ದಮಣಿದರ್ಪಣದಲ್ಲಿ ಉದ್ಧೃತವಾಗಿದೆ. (ಸೂ. 98, ಮಂಗಳೂರಿನ 2ನೆಯ ಮುದ್ರಣದ ಪ್ರತಿ, ಪು. 127) ಇಲ್ಲಿ ಇದು "ಪರಮ..." (I. 33) ಎಂಬ ಕಂದದ ಮುಂದಿಡಬೇಕು.

ಕನ್ನಡ ಪದ್ಯ ಗ್ರಂಥಕರ್ತೃಗಳ್.

ಕಂ॥ ಪರಮ ಶ್ರೀವಿಜಯ, ಕವೀ
ಶ್ವರ, ಪಂಡಿತ, ಚಂದ್ರ, ಲೋಕಪಾಲಾದಿಗಳಾ ।
ನಿರತಿಶಯ ವಸ್ತುವಿಸ್ತರ
ವಿರಚನೆ ಲಕ್ಷ್ಯಂ ತದಾದ್ಯಕಾವ್ಯಕ್ಕೆಂದುಂ ॥ ೩೩ ॥

ಬೆದಂಡೆಗಬ್ಬದ ಲಕ್ಷಣಂ.

ಕಂದಮುಮಮಳಿನವೃತ್ತಮು
ನೊಂದೊಂದೆಡೆಗೊಂದು ಜಾತಿ ಜಾ(ಣೆಸೆ)ಯೆ ಬೆಡಂ ।
ಗೊಂದಿವಱೊಳವುರೆ ಪೇೞಲ್
ಸುಂದರರೂಪಿಂ ಬೆದಂಡೆಗಬ್ಬಮದಕ್ಕುಂ ॥ ೩೪ ॥

ಚತ್ತಾಣಗಬ್ಬದ ಲಕ್ಷಣಂ.

ಕಂದಂಗಳ್ ಪಲವಾಗಿರೆ
ಸುಂದರವೃತ್ತಂಗಳಕ್ಕರಂ ಚೌಪದಿ ಮ ।
ತ್ತಂ ದಲ್ ಗೀತಿಗೆ ತಿವಿದಿಗ
ಳಂದಂಬೆತ್ತೆಸೆಯೆ ಪೇೞ್ದೊಡದು ಚತ್ತಾಣಂ ॥ ೩೫ ॥

ಕನ್ನಡನಾಡಿನ ಸೀಮೆ.

ಕಾವೇರಿಯಿಂದಮಾ ಗೋ
ದಾವರಿ (ವರ) ಮಿರ್ದ್ದ ನಾಡದಾ ಕನ್ನಡದೊಳ್ ।
ಭಾವಿಸಿದ ಜನಪದಂ ವಸು
ಧಾವಲಯವಿಲೀನವಿಶದವಿಷಯವಿಶೇಷಂ ॥ ೩೬ ॥

ತಿರುಳ್ಗನ್ನಡದ ನಾಡು.

ಅದಱೊಳಗಂ "ಕಿಸುವೊಳ"ಲಾ
ವಿದಿತಮಹಾ "ಕೊಪಣ" ನಗರದಾ "ಪುಲಿಗೆಱೆ" ಯಾ ।
ಸದಭಿಸ್ತುತಮ "ಪ್ಪೊಂಕುಂ
ದ"ದ ನಡುವಣ ನಾಡೆ ನಾಡೆ ಕನ್ನಡದ ತಿರುಳ್ ॥ ೩೭ ॥

ಕನ್ನಡನಾಡವರ ಪೆರ್ಮೆ.

ಪದನಱಿದು ನುಡಿಯಲುಂ ನುಡಿ
ದುದನಱಿದಾರಯಲುಮಾರ್ಪರಾ ನಾಡವರ್ಗಳ್ ।
ಚದುರರ್ ನಿಜದಿಂ ಕುಱಿತೋ
ದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್ ॥ ೩೮ ॥

ಕಂ॥ ಕುಱಿತವ(ರ)ಲ್ಲದೆ ಮತ್ತಂ
ಪೆಱರುಂ ತಂತಮ್ಮ ನುಡಿಯೊಳೆ(ಲ್ಲರ್) ಜಾಣರ್ ।
ಕಿಱುವಕ್ಕಳ್ ಮೂಮೂಗರು
ಮಱಿಪಲ್ಕಱಿವರ್ ವಿವೇಕಮಂ ಮಾತುಗಳಂ ॥ ೩೯ ॥

ಜಾಣರ್ಕಳಲ್ಲದವರುಂ
ಪೂ(ಣೆ)ಗರಱಿಯದೆಯುಮಱಿ(ದ)ವೋಲವಗುಣದಾ ।
ಕಾಣಮ(ದಿ)ನಿ(ಸೆ)ಡೆವೊತ್ತೊಡೆ
ಮಾಣದೆ (ಜ)ಡಿದದನೆ ಕೃತಿಗಳಂ ಕೆಡೆ ನುಡಿವರ್ ॥ ೪೦ ॥

ಸಕ್ಕದಮುಂ ಪಾಗದಮುಮ
ದಕ್ಕುಂ ಬಗೆದಂತೆ ಸಮಱಿ ಪೇೞಲ್ ಮುನ್ನಂ ।
ನಿಕ್ಕುವನೊಳವಪ್ಪುದಱಿಂ
ತಕ್ಕಂತವಱವಱ ಲಕ್ಷ್ಯಮುಂ ಲಕ್ಷಣಮುಂ ॥ ೪೧ ॥

ಅರಿದಾದಂ ಕನ್ನಡದೊಳ್
ಕಿರಿಕೊಱೆ (ಗೊಂ)ಡಱಿ(ಯೆ) ಪೇೞ್ವೆನೆಂಬುದಿ(ದಾ)ಗ್ಗಂ ।
ಪರಮಾಚಾರ್ಯರವೋಲ್ ಸೈ
ತಿರಲಱಿಯರ್ ಕನ್ನಡಕ್ಕೆ ನಾಡವ (ರೊವಜರ್) ॥ ೪೨ ॥

ಕಾವ್ಯದೋಷನಿಂದೆ.

ಅವಗುಣ(ಮಿ)ನಿತಾದೊಡಮಾ
ಕವಿತಾಬಂಧಮನಶೇಷಮುಂ ದೂಷಿಸುಗುಂ ।
ಸವಿಲಾಸಲೋಲಲೋಚನ
ವಿವರಮನೆಡೆವೆತ್ತ ಕಸದವೋಲನವರತಂ ॥ ೪೩ ॥

ಅದಱಿಂದಲಸದೆ ಪೀನಂ
ಪದೆಯದೆ ಪಾಂಗಱಿದು ದೋಷಮಂ ಪಿಂಗಿಸಿ ತ ।
ಪ್ಪದೆ ಬಗೆದು ಪೇೞ್ವುದಾಗಮ
ಮುದಾರನೃಪತುಂಗದೇವ ವಿದಿತಕ್ರಮದಿಂ ॥ ೪೪ ॥

ಪುರಾಣ ಕವಿಮಾರ್ಗ ದೋಷಂಗಳ್.

* ಗೀತಿಕೆ॥ (ಕಾಣನೇ) ಗೆಯ್ದುಂ ತನ್ನದೋಷಮಮಂ
ಕಾಣದಂತೆಂದುಂ ಕಣ್ಗಳ್ ತಮ್ಮ ಕಾಡಿಗೆಯಂ।
ಪೂಣಿಗನಾದುದಱಿಂ ಪೆಱರಿಂ
ಜಾಣ(ರಿನೋದಿಸಿ) ಪೇೞ್ವುದು ಕಬ್ಬಮಂ ॥ ೪೫ ॥

ಕನ್ನಡದೇಶಿಯ ಅನಂತತೆ.

ಕಂ॥ ದೋ(ಷ)ಮಿನಿತೆಂದು ಬಗೆದು
ದ್ಭಾಷಿಸಿ ತಱಿಸಂದು ಕನ್ನಡಂಗಳೊಳೆಂದುಂ।
ವಾಸುಗಿಯುಮಱಿಯಲಾಱದೆ
ಬೇಸಱುಗುಂ ದೇಶಿ ಬೇಱೆ(ವೇ)ಱಪ್ಪುದಱಿಂ ॥ ೪೬ ॥

(ಇಂ)ತುಂ ಪುರಾಣಕವಿಗಳ
ಸಂತ(ತ) ಗತಮಾರ್ಗ್ಗಗದಿತದೋಷಂಗಳುಮಂ।
ಚಿಂತಿಸಿ ಮತ್ತೆನ್ನಱಿವುದು
ಮಂ ತಱಿಸ(ಲೆ) ಬುಧಜನಕ್ಕೆ ಕೆಲವಂ ಪೇೞ್ವೆಂ ॥ ೪೭ ॥

ನೆಲಸಿದ ಕಾವ್ಯಂ ಕಾವ್ಯ
ಕ್ಕೆ ಲಕ್ಷಣಂ ಸತತಮೆಂದೆ ಪೞಗನ್ನಡಮಂ।
ಪೊಲ(ಗಿ)ಡಿಸಿ ನುಡಿವರಾಗಮ
ಬಲಹೀನರ್ ದೇಸಿಯಲ್ಲದೆಂದಱಿದಿರ್ದುಂ ॥ ೪೮ ॥

ಪೞಗನ್ನಡದ ಸ್ವರೂಪಂ.

ಪೊಡವಿಪತಿ ಗೊ(ರವ)ನೆನೆ (ಪೇ)
ೞ್ಪಡೆಯದು ವದೆಕರಿಸಿ ಕಬ್ಬಿಗದ್ರೂಹ(ಱ)ನೆಯುಂ।
(ಹಡವ ಸಮರೆನಿಟ್ಟ) ಸುಗೆಂ?
ಮುಡಿಯೊ(ಳ)ಮಾರ್ಗೆಂದು ನುಡಿವ ಪೞಗನ್ನಡಮಂ ॥ ೪೯ ॥

---

* ಈ ಗೀತಿಕೆಯ ಲಕ್ಷಣವು ಛಂದೋಂಬುಧಿಯಲ್ಲಿ ಹೇಳಿರುವ ಗೀತಿಕೆಯ ಲಕ್ಷಣಕ್ಕೆ ಹೋಲುವುದಿಲ್ಲ. ಛಂ. ಪದ್ಯ ೨೫೬ (ಕ. ಕಾ. ಕ. ಮುದ್ರಣ)

ಪಳಗನ್ನಡದ ನಿಂದೆ.

ಕಂ॥ ದೊರೆಕೊಂಡಿರೆ ಸೊಗಯಿಸುಗುಂ
ಪುರಾಣ ಕಾವ್ಯಪ್ರಯೋಗದೊಳ್ ತತ್ಕಾಲಂ।
ವಿರ(ಸಂ) ಕರಮವು ದೇಸಿಗೆ
ಜರದ್ವಧೂವಿಷಯಸುರತರಸರಸಿಕತೆವೋಲ್ ॥ ೫೦ ॥

ಸಮಸಂಸ್ಕೃತ ಮಿಶ್ರಣಾಭ್ಯುಪಗಮ.

ಸಮಸಂಸ್ಕೃತಂಗಳೊ(ಳ್ ತ)
(ಳ್ತ)ಮರ್ದಿರೆ ಕನ್ನಡಮನಱಿದು ಪೇ(ೞ್ಗಿಂ)ಬುದಿದಾ।
ಗಮಕೋವಿದನಿಗದಿತಮಾ
ರ್ಗ್ಗಮಿದಂ ಬೆರಸಲ್ಕಮಾಗದೀ ಸಕ್ಕದದೊಳ್ ॥ ೫೧ ॥

ವಾಕ್ಯದಲ್ಲಿ ಬೆರಸಲಾಗದ ಸಂಸ್ಕೃತಾವ್ಯಯಂಗಳ್.

ಅಹರಹರುಚ್ಚೈರ್ನೀಚೈ
ರ್ಮುಹುರ್ಮುಹುರಿತಸ್ತತಃ ಪುನ[ಃ]ಪುನರಂತ।
ರ್ಬಹಿರಾದಿಹ *ಪ್ರಾದುರಹೋ
[ಸಹ]ಸಾದಿಗಳವ್ಯಯಂಗಳಸಹಾಯಂಗಳ್ ॥ ೫೨ ॥

ಬೆರಸಿರೆ ಕನ್ನಡದೊಳೆ ಬಂ
ಧುರಮಾಗದು ಕಾವ್ಯರಚನೆ ಪೇ(ೞ್ದೊ)ಡೆ ಪೀನಂ।
ಪರುಷತರಮಕ್ಕುಮೊತ್ತುಂ।
ಗರಡೆಯ ಮದ್ದಳೆಯ ಜರ್ಝರಧ್ವನಿಗಳವೋಲ್ ॥ ೫೩ ॥

ಕೇವಲಾವ್ಯಯಪ್ರಯೋಗ ದೋಷಕ್ಕೆ ಲಕ್ಷ್ಯಂ.

ಬಹಿರಂತರುಪವನಂಗಳೊ
ಳಹರಹಮಾ ಪರಭೃತಂಗಳುಲಿವ ರವಂಗಳ್।
ಸಹಸಾ ತಳಮಳ(ಗೊ)ಳಿಸಿದು
ವಹೋ ಮನಂಗಳ ನಿತಸ್ತತಂ ವಿರಹಿಗಳಾ ॥ ೫೪ ॥

* ಇಲ್ಲಿ ಪ್ರಾ ಎಂಬಕ್ಷರಕ್ಕೆ ಶೈಥಿಲ್ಯವನ್ನು ಹೇಳಬೇಕು. (ಇದಕ್ಕೆ ಕನ್ನಡದಲ್ಲಿ ಆಧಾರವಿದೆ. ಪ್ರಾಕೃತದಲ್ಲಿ ಮಾತ್ರ ಪ್ರ. ಹ್ರ. ಇವೆರಡಕ್ಕೆ ಶೈಥಿಲ್ಯವನ್ನು ಹೇಳಿದೆ).

ಸಂಸ್ಕೃತಾನ್ವಯಪ್ರಯೋಗ ದೋಷರಾಹಿತ್ಯ ಪ್ರಕಾರಂ.

ಕಂ॥ ವಿದಿತ ಸಮಸಂಸ್ಕೃತೋದಿತ
ಪದಂಗಳೊಳ್ ಪುದಿದು ಬೆರಸಿ ಬರೆ ಕನ್ನಡದೊಳ್ ।
ಮುದಮನವು ತ(ರ್ಕು)ಮತಿಶಯ
ಮೃದಂಗಸಂಗೀತಕಾದಿಮಧುರರವಂಬೋಲ್ ॥ ೫೫ ॥

ನಿರ್ದೋಷಕ್ಕೆ ಲಕ್ಷ್ಯಂ.

ಬಹಿರುದ್ಯಾನಾಂತರದೊಳ್
ಸಹಸೋದಿತ ಮತ್ತಕೋಕಿಲೋಚ್ಚೈರ್ಧ್ವಾನಂ ।
ಮುಹುರಾಕರ್ಣಿಸೆ ಪಡೆದ
ತ್ತಹರ್ನಿಶಂ ಪೆರ್ಚನಂತರಂಗಕ್ಕೆಸ್ನಾ ॥ ೫೬ ॥

ಸಮಸಂಸ್ಕೃತ ಪ್ರಯೋಗಾಭ್ಯುಪಗಮಂ.

ನೆಗಟ್ದಿರ್ದ ಕನ್ನಡಂಗಳೊ
ಳಗಣಿತಗುಣವಿದಿತಸಂಸ್ಕೃತೋಕ್ತಕ್ರಮಮಂ ।
ಬಗೆದೊಂದುಮಾಡಿ ಪೇಟ್ದೊಡೆ
ಸೊಗಯಿಸುಗುಂ ಕಾವ್ಯಬಂಧಮೆಂದುಮನಿಂದ್ಯಂ ॥ ೫೭ ॥

ಅರಿಸಮಾಸ ದೋಷಪ್ರಕಾರಂ.

ತಱಿಸಂದಾ ಸಕ್ಕದಮುಮ
ನಱಿಯದೆ ಕನ್ನಡಮುಮಂ ಸಮಾಸೋಕ್ತಿಗಳೊಳ್ ।
ಕುಱಿತು ಬೆರಸಿದೊಡೆ ವಿರಸಂ
ಮಱುಗುವ ಪಾಲ್ಗಳಿಯ ಪನಿಗಳಂ ಬೆರಸಿದವೋಲ್ ॥ ೫೮ ॥

ಅರಿಸಮಾಸ ದೋಷಲಕ್ಷ್ಯಂ.

*ಅರಸುಕುಮಾರನನಾಯತ
ತರಕಡೆಗಣ್ಣಿಂ(ದೆ ನೋಡಿ) ಕೆಳದಿಸಮೇತಂ ।
ಪರಿಗತನಗೆಯಿಂದಿರ್ದ್ದಂ
ಗುರುನಾಣ್ಬರದಿಂದಮೆಱಗಿ ಮುಖ(ದಾ)ವರೆಯಂ ॥ ೫೯ ॥

* ಇದು ಶಬ್ದಮಣಿದರ್ಪಣದಲ್ಲಿ ಉದ್ಧೃತವಾಗಿದೆ.

ಸಮಾಸನಿದರ್ಶನ ಲಕ್ಷ್ಯಂ.

ಕಂ॥ ನರಪತಿತನಯನನಾಯತ
ತರಳಾಪಾಂಗದೊಳೆ ನೋಡಿ ಕೆಳದಿಯರೊಡನಾಂ।
ಪರಿಗತಹಾಸ್ಯದೊಳಿರ್ದೆಂ
ಗುರುಲಜ್ಜಾಭರದಿನೆಱಗಿ ಮುಖಸರಸಿಜಮಂ ॥ ೬೦ ॥

ಎಂದಿಂತು ಸಮಾಸೋಕ್ತಿಯೊ
ಳೊಂದಾಗಿರೆ ಸಕ್ಕದಂಗಳುಂ ಕನ್ನಡಮುಂ।
ಸುಂದರಮಕ್ಕುಂ ಕವಿಪದ
ಮೊಂದಿದವೋಲ್ ಕನಕರಚನೆಯೊಳ್ ಮಣಿನಿಕರಂ ॥ ೬೧ ॥

(ಕ) ಕಾವ್ಯದೋಷಂಗಳ್.

ಶ್ರುತದುಷ್ಟಮರ್ಥದು(ಷ್ಟಂ)
ಶ್ರುತಿಕಷ್ಟಂ ಕಲ್ಪನೋಕ್ತಿ ಕಷ್ಟ(ಮು)ಮೆಂದೀ।
ಕೃತಕೃತ್ಯಮಲ್ಲ ವಲ್ಲಭ
ಮತದಿಂ ನಾಲ್ಕಕ್ಕುಮಿಲ್ಲಿ ಕೃತಿದೋಷಂಗಳ್ ॥ ೬೨ ॥

ಶ್ರುತದುಷ್ಟ ಲಕ್ಷ್ಯಂ.

ನಿಲೆ ತೋಳಂ ಬ(ರ್ಪು)ದು ಸೈ
ತಲೆ ತೂ(ರಂ)ದೂಡ(ಂ)ರಮೆಡೆತು(ನೆ)(ಗ)ಪ್ಪೂರ್ವರಂ ?।
ಕಲು ತಲ್ಲಿಂದೋಡುವಮೆಂ
ಬಲು ತಣ್ಣಿಂ ತಂದ ಕೂಟನೂಸಂಗಮದೊಳ್ ॥ ೬೩ ॥

ಅರ್ಥದುಷ್ಟ ಲಕ್ಷ್ಯಂ.

ನೆ(ರೆ)ದೂರ್ಧ್ವರೇತನೊಳ್ ಪು(ರು)
ಹಿರಣ್ಯರೇ(ತೋ)ತಿತೀವ್ರನೊಳ್ ಮುನಿವರನೊಳ್।
ಪರಮಭಗಸಹಿತೆ ಮುದದಿರೆ
ಪರಿಶ್ರಮಕ್ಕೆನ್ನ ನಿರ್ವಿಶೇಷನೊಳಾಗಳ್ ॥ ೬೪ ॥

ಕ) ಇವು ಭಾಮಹನಿಂದ ಆದಿಯಲ್ಲಿ ಉಕ್ತವಾಗಿರುವ ಕಾವ್ಯದೋಷಂಗಳ್.

ಶ್ರುತಿಕಷ್ಟಂ.

ಕಂ॥ ಪರದರ್ಗ್ಗಾ ಪಾರ್ವ್ವರ್ಗ್ಗಾ
(ಯತ್ರ)ಸರ್ಗ್ಗಾ ಕುಡಿಯರಪ್ಪ ನಾಲ್ವರ್ಗ್ಗಾಗಳ್ ।
ಸ್ಥಿರ (ಗೋ)ಪಾಧ್ಯಾಯಕ್ಷ್ಮ
ಪರಿಪಾಲ್ಯಕ್ಷೇ(ತ್ರ) ಕರ್ಷಣಂಗಳ್ ಕ್ರಿಯೆಗಳ್ ॥ ೬೫ ॥

ಕಲ್ಪನೋಕ್ತಿ ಕಷ್ಟಂ.

ಮಸಗಿ ಬೆ(ಸೆದಿರ್ದು) ವಿವರಮ
ನಸಿಯದೞಡೆವೊತ್ತಿ ಪೊಕ್ಕು ಕೆಲನಂ ಕೊರ್ಬು ।
ತ್ತಿಸೆದು ಬಿದಿರ್ದಾರ್ದು ವೋೞ್ಗೇ
ೞ್ಗ ಸಮಂಜಸನಿಕ್ಕಿ ಮಿಕ್ಕನರಿವಾಹಿನಿಯಂ ॥ ೬೬ ॥

ಕುಱತಂತೆ ಪೇೞ್ದ ಪಾಲ್ಕುಂ
ಕುಱಪುಗಳಿಂದಱದು ಪರರ ದೋಷಂಗಳುಮಂ ।
ಪೆಱವುಮನೀವಾೞ್ಕೆಯೊಳಂ
ತೊೞವುದು ತೊೞವಂತಸಾಧುಜನಸಂಗತಿಯಂ ॥ ೬೭ ॥

ಶ್ರುತಿಕಷ್ಟ ದೋಷಾನಿಂದ್ಯತೆ.

ಮಿಗೆ ದುಷ್ಕರಕಾವ್ಯಂಗಳೊ
ಳಗರ್ಹಿತಪ್ರಾಯಮಕ್ಕುಮಾಶ್ರುತಿಕಷ್ಟಂ ।
ಪಗರಣದೊಳುೞದ ಮೂಱುಂ
ನಗಿಸುಗುಮಪ್ಪುದಱನಲ್ಲಿಗಂತವದೋಷಂ ॥ ೬೮ ॥

(ಖ) ಕಾವ್ಯದೋಷಂಗಳ್.

ಯತಿಭಂಗ, ಮರ್ಥಶೂನ್ಯಂ,
ಸತತ ವಿರುದ್ಧಾರ್ಥ, ಮುಕ್ತ ಪುನರುಕ್ತಾರ್ಥಂ, ।
ಚ್ಯುತಯಾಥಾಸಂಖ್ಯಂ, ವ್ಯವ
ಹಿತ, ವಚ್ಛಂದಂ, ವಿಸಂಧಿಕಂ, ನೇಯಾರ್ಥಂ ॥ ೬೯ ॥

(ಖ) ದಂಡಿಯಿಂದುಕ್ತವಾದ ಕಾವ್ಯದೋಷಂಗಳ್.

ಕಂ॥ ಆಗಮ ಸಮಯ ನ್ಯಾಯವಿ
ಭಾಗ ಕಳಾ ಕಾಲ ಲೋಕ ದೇಶ ವಿರುದ್ಧಂ ।
ಭೋಗಿವಿಷಂಬೋಲ್ ಪ್ರಾಣ
ತ್ಯಾಗಮನಾಗಿಸುಗುಮುಮುಳಕೃತಿವಧುಗಿನಿತುಂ ॥ ೭೦ ॥

ಯತಿಲಕ್ಷಣಂ.

ಯತಿ ಯೆಂಬುದುಸಿರ್ವ ತಾಣಂ
ಕೃತಾಸ್ಪದಂ ವೃತ್ತಜಾತಿಪದಪದ್ಧತಿಯೊಳ್ ।
ಸತತಂ ಛಂದೋವಿದಿತ
ಪ್ರತೀತ ಶಾಸ್ತ್ರೋಕ್ತಮಾರ್ಗದಿಂದಱಿವುದಿದಂ ॥ ೭೧ ॥

ಯತಿಭಂಗ ಲಕ್ಷ್ಯಂ.

ಕೇಡಡಸಿದಂದು ಬಗೆಯಂ
ಮಾಡದು ಕೂಡಿದುದು ಮಱಿದು ವಿಪರೀತ (ಮುಮಂ) ।
ಮಾಡುಗುಮದಱಿಂ ಕರ್ಮು
ಕ್ಕೋಡಿ ಬರ್ದುಂಕಲ್ಕಮಱಿದರಾರ್ ಭೂತಳದೊಳ್ ॥ ೭೨ ॥

(೧) ಯತಿಭಂಗ ಲಕ್ಷಣಂ.

ತಡತಡಿಸಿ ಯತಿಯನಿಂತಿರೆ
ತೊಡರ್ಚೆ ಕೆಡೆ ಪೇೞ್ದೊಡಕ್ಕುಮದು ಯತಿಭಂಗಂ ।
ಸಡಿಲಿಸದಲಸದರಂ ಪೇ
ೞ್ದೆಡೆಯೊಳ್ ನಿಲೆ ಪೇೞಲಾರ್ಪೊಡಂತದು ದೋಷಂ ॥ ೭೩ ॥

ಯತಿಗೆ ಲಕ್ಷ್ಯಂ.

ಕೇಡಡಸಿದೊಡಂ ಬಗೆಯುಂ
ಕೂಡದು ಕೂಡಿದುದು ಮಱಿದು ವಿಪರೀತಮುಮಂ ।
ಮಾಡುಗುಮದಱಿಂ ಕರ್ಮು
ಕ್ಕೋಡಿ ಬರ್ದುಂಕಲ್ಕೆ ಕಲ್ತರಾರ್ ಬಿನ್ನಣಮಂ ॥ ೭೪ ॥

ಕನ್ನಡದೊಳ್ ಯತಿವಿಲಂಘನಾಭ್ಯುಪಗಮಂ.

ಕಂ॥ ದೋಸಮನೆ ಗುಣದವೋಲು
ದ್ಭಾಸಿಸಿ ಕನ್ನಡದೊಳೊಲ್ದು ಪೂರ್ವಾಚಾರ್ಯರ್ ।
ದೇಸಿಯೆನೆ ನಿಱಿಸಿ ಖಂಡ
ಪ್ರಾಸಮನತಿಶಯಮಿದೆಂದು ಯತಿಯಂ ಮಿಕ್ಕರ್ ॥ ೭೫ ॥

ಯತಿವಿಲಂಘನದ ಸುಂದರತೆ.

ಕಂ॥ ನಿರತಿಶಯಮಕ್ಕುಮದು ಬಂ
ಧುರಕವಿಜನತಾಪ್ರಯೋಗಸಂಬಂಧನದಿಂ ।
ಗುರುಜಘನಸ್ತನಭರಮಂ
ಥರಲೀಲಾಲಸವಿಳಾಸಿನೀಚರಿತಂಬೋಲ್ ॥ ೭೬ ॥

ಯತಿನಿಯುತ ಸ್ಥಳಂಗಳ್.

ಅಂತುಂ ಯತಿಯಂ ಪೇೞ್ಗಾ
ರ್ಪಂತಾದ್ಯದೊಳಲಸದಾರ್ಯೆಯೊಳ್ ಕಂದದೊಳಂ ।
ಸಂತಂ ದ್ವಿತೀಯಪಾದಗ
ತಾಂತದೊಳಕ್ಕದು ಚತುಷ್ಪದೀಪದವಿಗಳೊಳ್ ॥ ೭೭ ॥

(೨) ಅರ್ಥಶೂನ್ಯ ದೋಷಲಕ್ಷಣಂ.

ಸಮುದಾಯಾರ್ಥಮನಾರಯೆ
ಸಮನಿಸುವರ್ಥಪ್ರತೀತಿ ತೋಱದೊಡೆಲ್ಲಂ ।
ಕ್ರಮಮಕ್ಕುಮರ್ಥಶೂನ್ಯಂ
ಸಮಸ್ತಕವಿವೃಷಭದೂರದೂಷಿತಮಾರ್ಗಂ ॥ ೭೮ ॥

ಲಕ್ಷ್ಯಂ.

ಮುನಿ ವೀತರಾಗನೆಂದುಂ
ಬನಮಂ ಸಾರ್ತಕ್ಕುಮಾವ ತೆಱದಿಂ ಪೋಪಂ ।
ಮನಮಂಜುಗುಮಱಿಯದವಂ
ಮುನಿಗುಂ ಪಗೆವಂಗೆ ಪಾಪಕರ್ಮಂ ಪೊಲ್ಲಂ ॥ ೭೯ ॥

ಸ್ಥಿರಮರ್ಥಶೂನ್ಯಮೆಂಬುದು
ದುರುಕ್ತಮಿದನಿಂತು ಪೇೞ್ದೊಡೆಲ್ಲಂ ಪೀನಂ ।
ಮರುಳುಂ ಮದಿರಾಪರವಶ
ಶರೀರನುಂ ಪೇೞ್ಗುಮಾವನಱಿವಂ ಪೇೞ್ಗುಂ ॥ ೮೦ ॥

(೩) ವಿರುದ್ಧಾರ್ಥ ದೋಷಲಕ್ಷಣಂ.

ಪರಿಗೀತಾರ್ಥಂ ಪೂರ್ವಾ
ಪರದೊಳ್ ಬಗೆವಾಗಳೆಂದುಮೊಂದಱೊಳೊಂದುಂ ।
ದೊರೆಕೊಂಡೊಂದದೊಡದು ದು ।
ಸ್ತರಮೆ ವಿರುದ್ಧಾರ್ಥಮೆಂಬುದಾದಂ ದೋಷಂ ॥ ೮೧ ॥

ಲಕ್ಷ್ಯಂ.

ಕಂ॥ ಅರಿನೃಪಬಲಮಂ ಗೆಲ್ದುರು
ಪರಾಕ್ರಮಕ್ರಮದೆ ಶೌರ್ಯಮಂ ಪ್ರಕಟಿಸು ನೀಂ।
ನರಮಹಿ(ತಾ) ನಿನಗೇನಹಿ
ತರುಮೊಳರೇ ಸತತಪರಹಿತಾಚಾರಪರಾ ॥ ೮೨ ॥

ಉಪಸಂಹೃತಿ.

ಇದು ವಿದಿತವಿರುದ್ಧಾರ್ಥ
ಕ್ಕುದಾಹೃತಂ ಹರಣಮಾತ್ರಮಿನ್ನುಳ್ಳುವನುಂ।
ಸದಭಿಮತಕಾವ್ಯಪದವಿಧಿ
ವಿದೂರಗತಮಾಗೆ ಪರಿಹರಿಕ್ಕೆ ಬುಧರ್ಕಳ್ ॥ ೮೩ ॥

(೪) ಪುನರುಕ್ತದೋಷ ಲಕ್ಷಣಂ.

ಪುನರುಕ್ತಮೆಂಬುದಕ್ಕುಂ
ನೆನೆಯದೆ ಪೂರ್ವೋದಿತಾರ್ಥಪದಪದ್ಧತಿಗೊಂ।
ದಿನಿಸುಂ ವಿಶೇಷಮಿಲ್ಲದೆ
ಜನಿಯಿಸಿದ ಪದಾರ್ಥಮದಱದೀದೃಷ್ಟಾಂತಂ ॥ ೮೪ ॥

ಲಕ್ಷ್ಯಂ.

ತ್ರಿದಶಸುರಲೋಕವಾಸಾ
ಸ್ಪದಮಂ ಪೆಱುಗುಂ ಮನುಷ್ಯಮನುಜಂ ನಿಂನಾ।
ಪದಚರಣಯುಗದ್ವಯಮಂ
ಮುದದಟ್ಟಿಯೆ ಬಗೆದು ನೆನೆವ ನನುದಿನ ಮೆಂದುಂ ॥ ೮೫ ॥

(೫) ಯಾಥಾಸಂಖ್ಯಚ್ಯುತ ಯಾಥಾಸಂಖ್ಯ ಲಕ್ಷಣಂ.

ನಿಯತೋದ್ದೇಶಿಯುಮನುದೇ
ಶಿಯುಮನನು(ವಿನಂ)ತು ಪೇೞ್ದೆ ಯಾಥಾಸಂಖ್ಯಾ।
ಹ್ವಯಮುಕ್ಕುಮಾಗಮೋಕ್ತಾ
ಶ್ರಯದಿಂ ವ್ಯತಿರೇಕಮಕ್ಕುಮಲ್ಲದುವೆಲ್ಲಂ ॥ ೮೬ ॥

ಚ್ಯುತಯಾಥಾಸಂಖ್ಯ ದೋಷಲಕ್ಷಣಂ.

ಚ್ಯುತಯಾಥಾ ಸಂಖ್ಯಾ(ರ್ಥಂ)
ಪ್ರತೀತದೋಷಾನುವಸಥಮೆಂದಱಗೆ ಬುಧರ್।
ಸತತಮದಱಯೆ ನಿದರ್ಶನ
ಗತಮಿಂತಕ್ಕುಂ ಪ್ರಮೋದದಿಂ ಕವಿಜನದೊಳ್ ॥ ೮೭ ॥

ಚ್ಯುತಯಾಥಾಸಂಖ್ಯ ಲಕ್ಷ್ಯಂ.

ಕಂ॥ ಅಳಿನಳಿನೋತ್ಪಳರುಚಿಗಳ
ನಳಕಾನನನಯನಯುಗಳದಿಂ ಗೆಲ್ದಿರ್ದುಂ
ಕೊಳದೊಳಗೆ(ನಂ) ನೋಟಿಪ್ಪಿಗ
ವಿಳಾಸಿನೀ ನಿನ್ನವೋಲದೇನತಿಶಯವೋ ॥ ೮೮ ॥

ಯಾಥಾಸಂಖ್ಯ ಲಕ್ಷ್ಯಂ.

ಅಳಕಾನನನಯನಂಗಳೊ
ಳಳಿನಳಿನೋತ್ಪಳವಿಲಾಸಮಂ ಗೆಲ್ದುದಱಿಂ।
ಕಿಳಿಗೊಳನಂ ಪೊಲ್ತಿರ್ದುಂ
ತಿಳಿಯದಿದೇನೆಂಬುದುಂ ತದನ್ವಯಮುದಱಿಂ * ॥ ೮೯ ॥

(೬) ವ್ಯವಹಿತ ದೋಷಲಕ್ಷಣಂ.

ಸವಿಶೇಷಾಲಂಕಾರೋ
ದ್ಭವವಮಾಗಿಯುವೊಂದುವರ್ಥದೊಳ್ ಸಂಬಂಧ।
ವ್ಯವಧಾನಮಾದೊಡಕ್ಕುಂ
ವ್ಯವಹಿತದೋಷಂ ಪ್ರಯೋಗವಿೂ ತೆಱನದಱಾ ॥ ೯೦ ॥

ಲಕ್ಷ್ಯಂ.

ಮನದೆ ನೆನೆವವರ ಕಿಡುಗುಂ
ಜಿನಾಧಿಪಾ ನಿನ್ನ ಪಾಪನಿಚಯಂ ಗುಣಮಂ।
ಮುನಿಗಳುಮದಱಿಂ ತತ್ಸೇ
ವನೆಯಿಂ ಕಿಡಿಸಲ್ಕೆ ಪತ್ತಿದರ್ ಸಂ(ಸೃ)ತಿಯಂ ॥ ೯೧ ॥

(೭) ಛಂದೋಭಂಗ ಲಕ್ಷಣಂ.

ಗುರುಲಘುವಿನ್ಯಾಸಕ್ರಮ
ವಿರಚನೆಯೂನಾತಿರಿಕ್ತಮಾದೊಡೆ ಕೃತಿಯೊಳ್।
ನಿರುತಂ ಛಂದೋಭಂಗಂ
ದುರುಕ್ತತರದೋಷಮದಱಿ ಪಾಂಗಿಂತಕ್ಕುಂ ॥ ೯೨ ॥

* ಈ ಲಕ್ಷ್ಯಪದ್ಯಗಳು ಲಕ್ಷಣದಲ್ಲಿ ಹೇಳಿರುವ ಕ್ರಮದಲ್ಲಿಲ್ಲದೆ ಹಿಂದುಮುಂದಾಗಿವೆ — ಅಳಕಾನನ — ಎಂಬ ಕಂದದ ಮುಂದೆ ಅಳಿನಳಿನೋತ್ಪಳ — ಎಂಬ ಕಂದವಿರಬೇಕು.

ಕಂ॥ ಮೊದಲ ಪ(ದಂ) ನ್ಯೂನಾಕ್ಷರ
ಮದಱಿಂದೆ ಬೞಿಕ್ಕಮರ್ಧಮಧಿಕಾಕ್ಷರಮಿಂ।
ತಿದಱಿಂ ಛಂದೋಭಂಗಂ
ಪದನಱಿದದನಿಂತು ಸಮಱಿ ಪೇೞ್ವೊಡೆ ಚೆಲ್ವಂ ॥ ೯೩ ॥

ಲಕ್ಷ್ಯಂ.

ವನರುಹದಳನಯನೇ ನಿ
ನ್ನನೆ ನೆನೆ ನೆನೆದಿರು[ಳೊಳಗೊ]ಱಗದಿರೆ ಕಡೆಗಣ್ಗಳ್।
ಮುನಿಸನಭಿನಯಿಪ ವೋಲ್ ಕೆ
ಮ್ಮನೆ ರಕ್ತಾಂಭೋಜರುಚಿಯನೀೞ್ಕುಳಿಗೊಳ್ಗುಂ ॥ ೯೪ ॥

(೮) ವಿಸಂಧಿ ದೋಷಲಕ್ಷಣಂ.

ಛಂದಕ್ಕೆ ಬಾರದೆಂದಱ
ದೊಂದೊಂದಱೊಳೊಂದಿ ಬಂದು ನಿಂದಕ್ಕರವಂ।
ಸಂಧಿಸದೆ ಪೇೞ್ದೊಡದು ಕೃತಿ
ನಿಂದಿತವೆಂದುಂ ವಿಸಂಧಿ ಯೆಂಬುದು ದೋಷಂ ॥ ೯೫ ॥

(೯) ಲಕ್ಷ್ಯಂ.

ಜನಪತಿಗೆ(ಯೊ)ಸಗೆಯಂ ಪುರ
ಜನಮೆಲ್ಲಂ ಬೀಱುತಿರ್ಪರಾಗಳ್ ತಾಮುಂ।
ಮನದುತ್ಸವದಿಂ ಕುಣಿವಂ
ತನಿಲಾಹತ [ಕೇತ]ನಾಳಿ ಸೊಗಯಿ(ಸುತಿರ್ಕುಂ) ॥ ೯೬ ॥

ಮುನ್ನಂ ಪೇೞ್ದಿರ್ದರ್ಥಂ
ಭಿನ್ನಪ್ರಸ್ತಾರಭಿತ್ತಿದೋಷಾನುಗತಂ।
ಸನ್ನುತಮಪರಾರ್ಧಂ ಸಂ
ಪನ್ನಂ ಶ್ಲಿಷ್ಟಾಕ್ಷರೋಪರಚಿತಮದೋಷಂ ॥ ೯೭ ॥

ವಿರೂಪ ಸಂಧಿ.

ಸಂಧಿಗಳುಂ ಕೆಲವೆಡೆಯೊಳ್
ಬಂದು ವಿರೂಪಂಗಳಾಗಿ ಸಮನಿಸಿ ಕವಿತಾ।
ಬಂಧನದೊಳಾಗೆ ದೋಷಾ
ಬಂಧುಗೆ ಶಶಲಕ್ಷ್ಮದಂತೆ ಕೞೆಯಂ ತರ್ಕ್ಕುಂ ॥ ೯೮ ॥

---

(೯) ಲಕ್ಷ್ಯಸಮನ್ವಯವಿಲ್ಲ.

ಲಕ್ಷ್ಯಂ.

ಕಂ॥ ಅರಮರಸಂ ಕೃತಕಾದ್ರಿಯೊ
ಳರಮರಮನೆಯೊಳಗೆ ಕಂದುಕ ಕ್ರೀಡೆಗಳೊಳ್ ।
ಅರಮುದ್ಯಾನವನಂಗಳೊ
ಳರಮಂತಃಪುರದೊಳರಮದೆಂದುಂ ನಿಲ್ತಂ ॥ ೯೯ ॥

ಉಪಸಂಹೃತಿ.

ದೋಷಂಗಳಿಂತು ಮಿಗೆ ಸಂ
ಶ್ಲೇಷದೊಳಾದಂದು ಸಕಲವಿದ್ವತ್ಸಭೆಯೊಳ್ ।
ದೂಷಿಸುಗುಂ ಕೃತಿವಧುವಂ
ಭಾಷಾವಿದರದಱ ದೆಸೆಯನುೞಿಗೀ ತೆಱದಿಂ ॥ ೧೦೦ ॥

(೯) ನೇಯಾರ್ಥ ದೋಷಲಕ್ಷಣಂ.

ಕುಱಿತಂತೆ ಪೇೞ್ದ ಪದದೊಳ್
ಮೆಱೆಯದೊಡೆಲ್ಲಂ ವಿವಕ್ಷಿತಾರ್ಥಮಶೇಷಂ ।
ಪೆಱತೊಂದಲ್ಲಿಲ್ಲದುಮುಮ
ನಱಿವವರಂಟ್ವೆಱೆಯೆ ಪೇೞ್ವೊಡದು ನೇಯಾರ್ಥಂ ॥ ೧೦೧ ॥

ಲಕ್ಷ್ಯಂ.

ಪರೆದಿರೆ ರಾಗಂ ತನ್ನೊಳ್
ನಿರಂತರಂ ಗಗನವಿವರವೊಪ್ಪಿತ್ತಾದಂ ।
ವರಪಾರಿಜಾತಕುಸುಮೋ
ತ್ಕರಸಾಂದ್ರಪರಾಗವಿಸರಪಿಂಜರಿತಂಬೋಲ್ ॥ ೧೦೨ ॥

ನೇಯಾಭಾವಕ್ಕೆ ಲಕ್ಷ್ಯಂ.

ಪರೆದಿರೆ ಸಂಧ್ಯಾರಾಗಂ
ನಿರಂತರಂ ಗಗನವಿವರವೊಪ್ಪಿತ್ತೆಂದಾ ।
ದರದಿಂ ಪೇೞಲ್ ಬಗೆದಂ
ತಿರೆ ಸಂಧ್ಯಾಪದಮನಿಡದೆ ಪೇೞ್ವುದು ದೋಷಂ ॥ ೧೦೩ ॥

* (೧೦) (ಕ) ಆಗಮವಿರುದ್ಧ ದೋಷಲಕ್ಷಣಂ.

ಕಂ॥ ರಾಗಾದಿದೋಷವಿರಹಿತ
ವಾಗತಿಶಯವಖಿಳವಸ್ತು (ವಿಸ್ತರ) ವಿಷಯಂ ।
ಯೋಗಿಗುಣಾನುಗತಂ ಮ
ತ್ತಾಗಮವೇತದ್ವಿರುದ್ಧ ವಚನಂ ದೋಷಂ ॥ ೧೦೪ ॥

(ಖ) ಸಮಯವಿರುದ್ಧ ಲಕ್ಷಣಂ.

ಆಕಪಿಲ ಸುಗತ ಕಣಚರ
ಲೋಕಾಯತಿಕಾದಿಮಾರ್ಗ್ಗಭೇದಂ ಸಮಯಂ ।
ಪ್ರಾಕಟಮದಂ ವಿರುದ್ಧವಿ
ವೇಕದಿನಱಿವುವೊಡೆ ಸಾಡೆ ಸಮಯವಿರುದ್ಧಂ ॥ ೧೦೫ ॥

(ಗ) ನ್ಯಾಯವಿರುದ್ಧ ದೋಷಲಕ್ಷಣಂ.

ಉಕ್ತಿವಿಚಾರಂ ನ್ಯಾಯ ನಿ
ಯುಕ್ತಕ್ರಮವಿನ್ನದಕ್ಕೆ ಬಾರದುವೆಲ್ಲಂ ।
ವ್ಯಕ್ತಂ ನ್ಯಾಯ ವಿರುದ್ಧಂ
ಪ್ರೋಕ್ತಮಹಾದೋಷಮಂತು ಪೇಟಲ್ಕೆಂತುಂ ॥ ೧೦೬ ॥

(ಘ) ಕಲಾವಿರುದ್ಧ ದೋಷಲಕ್ಷಣಂ.

ನಿರುಪಮಗಂಧರ್ವಗತಿ
ಸ್ವರಾದಿಕ ಕಳಾಗುಣಂ ಚತುಃಷಷ್ಟಿವಿಧಂ ।
ದೊರೆಕೊಳ್ಳದುದೆಲ್ಲಿ ಕಲಾ
ವಿರುದ್ಧದೋಷಂ ವಿಶಿಷ್ಟಜನತಾದೂಷ್ಯಂ ॥ ೧೦೭ ॥

(ಙ) ಕಾಲವಿರುದ್ಧ ದೋಷಲಕ್ಷಣಂ .

ಕಾಲಮಹೋರಾತ್ರಾದಿಕ
ಮಾಲಕ್ಷಿತಭೇದಮದಱೊಳೊಂದದೊಡಕ್ಕುಂ ।
ಕಾಲವಿರುದ್ಧಂ ದೋಷ
ಕ್ಕಾಲಯಮದನಱಿದು ಕೃತಿಯೊಳಿಡದಿರ್ಕೆ ಬುಧರ್ ॥ ೧೦೮ ॥

* ಈ ಆಗಮಾದಿವಿರುದ್ಧಕ್ಕೆ ಲಕ್ಷ್ಯಗಳು ಇಲ್ಲಿ ಉಕ್ತವಾಗಿಲ್ಲ. ದಂಡಿ ಮತ್ತು ಭಾಮಹ ಇವರ ಗ್ರಂಥಗಳಲ್ಲಿ ಉಕ್ತವಾಗಿವೆ. ಅಲ್ಲದೆ ಇಲ್ಲಿ ಹೇಳಿರುವ ಕಾರಕಾದಿದೋಷಗಳ ಲಕ್ಷ್ಯಲಕ್ಷಣಗಳು ಅವರ ಗ್ರಂಥಗಳಲ್ಲಿಲ್ಲ.

(ಚ) ಲೋಕವಿರುದ್ಧ ಲಕ್ಷಣಂ.

ಕಂ॥ ಲೋಕಮದೂರ್ಧ್ವಾರ್ಧೋಮ
ಧ್ಯಾಕಾಂಕ್ಷಿತಭೇದರೂಪದಿಂ ಮೂಱಕ್ಕುಂ ।
ಲೋಕವಿರುದ್ಧಂ ತದ್ವ್ಯತಿ
ರೇಕೋಕ್ತಿ ವಿವೇಕಿಲೋಕಗರ್ಹಿತಮಾರ್ಗಂ ॥ ೧೦೯ ॥

(ಛ) ದೇಶವಿರುದ್ಧ ಲಕ್ಷಣಂ.

ದೇಶಂ ವರರಾಷ್ಟ್ರಾದಿ ನಿ
ವೇಶಾಂತಂ ತದ್ವಿರುದ್ಧವಚನಂ ಮಿಗೆ ಸಂ ।
ಕ್ಲೇಶಕರಂ ಕೃತಿಕರ್ತೃಗೆ
ಕೌಶಲಮಂ ಪಡೆಯದುಕ್ತದೇಶವಿರುದ್ಧಂ ॥ ೧೧೦ ॥

ಉಪಸಂಹೃತಿ.

ಇಂತಿಂತೆ ಪೇೞ್ವೊಡೆಲ್ಲಮ
ನಂತಾತ್ಮಕಮಕ್ಕುಮಾವಿರುದ್ಧದ ಭೇದಂ ।
ಸಂತಯಿಸಿ ಬಲಿದು ಮನಮನ
ದಂ ತೞಸಲೆ ಪೇೞಲಾರ್ಪೆನೆಂಬವನೊಳನೇ ॥ ೧೧೧ ॥

ಗೀತಿಕೆ॥ ದೋಸಮೇನಾನುಂ ಸ್ವಲ್ಪಮಾದೊಡಂ
ಮಾಸಿಸಿಕ್ಕುರ್ಗುಮಣಂ ಕೃತಿವಧುವಂ ।
ಪೇಸದೆ ದುರ್ಜನ (ರೊ)ಳಾದ ಪರಿಚಯಂ
ಮಾಸಿಸಿ ಕಿಡಿಸುವವೊಲೊಪ್ಪುವ ಕುಲವಧುವಂ ॥ ೧೧೨ ॥

ಕಾರಕಾದಿತರ ದೋಷಂಗಳ್.

ಉ॥ ಕಾರಕದೋಷಮುಂ ವಚನದೋಷಮುಮಾ ಗುರುದೋಷಮುಂ ಲಘೂ
ಚ್ಚಾರಿತ ಶಬ್ದದೋಷಮುಮದಂತೆ ಸಮುಚ್ಚಯಜಾತದೋಷಮುಂ ।
ಭೂರಿವಿಕಲ್ಪದೋಷಮುಮದಿನ್ನವಧಾರಣದೋಷಮುಂ ವಿಶಂ
ಕಾರಚಿತೋರುದೋಷಮುಮನೀ ತೆಱದಿಂ ತೞಸಲ್ಗೆ ಪಂಡಿತರ್ ॥ ೧೧೩ ॥

ಕಾರಕಂಗಳ್.

ಉ॥ ಕಾರಕಮಾಱು ಕರ್ಮ ಕರಣಾದಿಕದಿಂ ಪ್ರಥಮಾದಿಭೇದನಿ
ರ್ಧಾರಣದಿಂದದಂ ಪಿಡಿದು ನಿಲ್ವ ವಿಭಕ್ತಿಗ*ಳೇೞುಂನಿಕ್ಕುಮಾ ।
ಚಾರುಗುಣೋದಯಂ ವಚನಮೇಕಬಹುಕ್ರಮದಿಂದೆರಟ್ಟಿಱ
ಕ್ಕಾರಯೆ ಪೇೞ್ವಿನಿಂತಿವಱ ಜಾತಿವಿಭಾಗಗುಣಾಗುಣಂಗಳಂ ॥ ೧೧೪ ॥

ಕಾರಕಂಗಳ್ಗೆ ಲಕ್ಷ್ಯಂ.

ಚಂ॥ ನರಪತಿ ಬಂದನಾ ನೃಪನನಟ್ಟಿಯೆ ಕಾಣ್ಬುದು ತನ್ನರೇಂದ್ರನಿಂ
ಧರಣಿ ಸನಾ(ಥೆ) ಭೂಪತಿಗೆ ಕಪ್ಪವ(ನೀಗ)ವನೀಶನತ್ತಣಿಂ ।
ಪಂಭವಮಂ ಕಟಿಲ್ಚುವುದಧೀಶ್ವರನಾ ದಯೆ ಸಾಲ್ಗುಮಾಮಹೀ
ಶ್ವರನೊಳಿದಪ್ಪುದೆಂಬುದಿದು ಕಾರಕಯುಕ್ತವಿಭಕ್ತ್ಯನುಕ್ರಮಂ ॥ ೧೧೫ ॥

ಕಾರಕದೋಷಂ.

ಚಂ॥ ಬರವೆಮಗೀಗೆ ದೇವತೆಗಳಾದರದಿಂ ಕರುಣಿಪ್ಪುದಕ್ಕೆ ಬಂ
ಧುರಗುಣಬಂಧುಸಂತತಿಯನೆಂಬುದು ಕಾರಕದೋಷಮಾಗಳುಂ ।
ಬರವನವೋಘಮಿಗೆಮಗೆ ದೇವತೆಗಳ್ ಕರುಣಿಪ್ಪು(ದ)ಕ್ಕೆ ಬಂ
ಧುರಗುಣಬಂಧುಸಂತತಿಗೆ ನಿಕ್ಕುವಮೆಂ(ಬು)ದದುಷ್ಟಕಾರಣಂ ॥ ೧೧೬ ॥

ಲಕ್ಷ್ಯಸಮನ್ವಯಂ.

ಉ॥ ನಿಕ್ಕುವ ಮಿಂತುಮಲ್ಲದದ(ಱಾ) ಕ್ರಿಯೆ ಸಾರ್ದಿರೆ ಪತ್ತಿಮುಂದೆ ಸ್ಥೈ
ತಕ್ಕುಮನುಕ್ರಮಾನುಗತರಿಂ ಬರವಿಗೆಮಗೆಂಬ ಕಾರಕಂ ।
ಸಕ್ಕದವೇನೊ ಕಾರಕವಿಭಕ್ತಿಯೊಳೊಂದೆ ಸಮಾಸಯುಕ್ತಿ ಲೇ
ಸಕ್ಕುಮಭೇದರೂಪಗುಣಮಾಗಿ ತಗುಳ್ದಿರೆ ಮೇಣ್ ಕ್ರಿಯಾಪದಂ ॥ ೧೧೭ ॥

ವಚನ ದೋಷಾದೋಷ ಲಕ್ಷ್ಯಂಗಳ್.

ಉ॥ ಬಂದುವು ಪಾವುಡಂ ನೃಪತಿಗೆಂಬುದುಮಾನೆಗಳೀಪ್ರದೇಶದೊಳ್
ನಿಂದುದಿದೆಂಬುದುಂ ವಚನದೋಷವಿಶೇಷಮನೈಪುಣೋಕ್ತಿಯಿಂ ।
ಬಂದುದು ಪಾವುಡಂ ನೃಪತಿಗೆಂಬುದುವಾನೆಗಳೀಪ್ರದೇಶದೊಳ್
ನಿಂದುವಿವೆಂಬುದುಂ ಬಗೆದು ನೋಡೆ ಗುಣಂ ವಚನಕ್ಕೆ ನಿಕ್ಕುವಂ ॥ ೧೧೮ ॥

* ಷಷ್ಠಿಗೆ ಕಾರಕತ್ವವಿಲ್ಲವಾಗಿ ಕಾರಕಗಳು ಆಱಾದುದರಿಂದ ಇಲ್ಲಿ 'ವಿಭಕ್ತಿಗಳಾಱುಂನಿಕ್ಕುಂ' ಎಂದಿರಬಹುದೆಂದು ತೋರುವುದು. ಆದರೆ ಲಕ್ಷ್ಯದಲ್ಲಿ ಷಷ್ಠಿಯ ವಿಭಕ್ತಿಯನ್ನೂ ಕಾರಕಕ್ಕೆ ಉದಾಹರಣೆಯಾಗಿ, ಕವಿಯು ಕೊಟ್ಟಿರುವನು :— ಅಧೀಶ್ವರನಾ ದಯೆ — ಈ ಕವಿಗೆ ಕಾರಕವೆಂದರೆ ನಾಮವಿಭಕ್ತಿಪ್ರತ್ಯಯವೆಂಬ ಅಭಿಪ್ರಾಯವಿದ್ದಂತೆ ಕಾಣುವುದು.

ವಚನ ದೋಷಾಪವಾದಂ.

ಉ॥ ಜಾತಿವಿಭಾಗಮಂ ಬಗೆದು ಪೇೞ್ ಬಹುತ್ವಮನೇಕವಾಕ್ಯಸಂ
ಜಾತಗುಣಂ ತದೇಕವಚನಂಗಳೊಳಂ ದೊರೆವೆತ್ತು ಕೂಡುಗುಂ ।
ಮಾತಿನೊಳೇನೊ ಸಂಖ್ಯೆಗಳೊಳೇಕಬಹುತ್ವವಿಪರ್ಯಯಕ್ಕಸಂ
ಖ್ಯಾತಗುಣಂ ವಿಕಲ್ಪಮದು ಕನ್ನಡದೊಳ್ ಗುಣಮಂ ತಗುಳ್ಚುಗುಂ ॥ ೧೧೯ ॥

ಲಕ್ಷ್ಯಂ.

ಚಂ॥ ಕುದುರೆ ತಗುಳ್ದುವಾದೆಸೆಯ ಬಿಲ್ಲವರಂ ಸುೞಿದಾನೆ ಮೆ
ಟ್ಟಿದುವೆಲೆನೋಡಿಮೆಂಬುದಿದು ಜಾತಿಕೃತೈಕಬಹುತ್ವಮೊಂದುಗುಂ ।
ಕುದಿಕುದಿದತ್ತಣಿಂ ಕುದುರೆ ನೂಱಱೊಳಾ ಬಲದಾನೆ ಪತ್ತುತಾ
ಗಿದುವೆನೆ ದೋಷಮಾ ಕಿಱಿದುಸಂಖ್ಯೆಯೊಳೇಕಬಹುತ್ವಸಂಗದಿಂ ॥ ೧೨೦ ॥

ಬೆರಸಿರೆ ಮುಂ ಸಮುಚ್ಚಯಪದದ್ವಿತಯೋಕ್ತಿ(ವಿಭಕ್ತಿ)ಕೂಡೆ ಬಂ
ದಿರದೆಯುಮೇಕ(ವಾಕ್ಯ)ದೊಳೆ ಕಾರಕಸಂಪದಮಂ ತಗುಳ್ಚುಗುಂ ।
ನರಪತಿಯುಂ ನೃಪಾಂಗನೆಯರುಂ ನೆರೆದೞ್ತಿಯಿನಾಡಿ ಪೋದರಾ
ಪರಿಜನಮುಂ ಮಹೋತ್ಸವದೊಳೊಂದಿದುದೆಂಬುದಿದಲ್ಪದೂಷಿತಂ ॥ ೧೨೧ ॥

ಗಣಿದದೊಳೊಂದಿ ಬರ್ಪ ಪದಮೊಂದೆಡೆಗೊಂಡು ವಿಶೇಷ್ಯಮುಂ ವಿಶೇ
ಷಣಮುಮನೊಂದಲೀಯದಿರೆಯುಂ ಮಿಗೆ ಕಾರಕದೋಷಕಲ್ತದಂ ।
ಪ್ರಣುತಪದಾಂತರೀಕರಣಮಂತದೆ ತಾಣದೊಳಾದೊಡಂ ಮಹಾ
ಗುಣಮನೆ ತರ್ಕುಮೇಕಬಹುಭೇದವಿಕಲ್ಪಮನಲ್ಲಿ ನೋಡಲಿಂ ॥ ೧೨೨ ॥

ಗುಣಯುತನಪ್ಪನಂ ಸುಭಟನಪ್ಪನನಾಯುಧಯುಕ್ತನಪ್ಪನಂ
ಪ್ರಣುತಸಮಸ್ತವೈರಿಗಣನಪ್ಪನನುಜ್ಜ್ವಲಕೀರ್ತಿಯಪ್ಪನಂ ।
ಗಣಿದಮನೇನುಮಂ ಬಗೆಯದಾಗದುಮಂತೆ ಪರೋಪಕಾರಕಾ
ರಣಪರನಪ್ಪನಂ ಮನದೆ ಮೆಚ್ಚದರಾರಭಿಮಾನಿಯಪ್ಪನಂ ॥ ೧೨೩ ॥

ನೆಗೆದ ಮುಗಿಲ್ಗಳುಂ ಸುರಿವ ಪೆರ್ಮೞೆಯುಂ ಮಿಗೆ ನುಣ್ಣನಪ್ಪ ಕೇ
ಕಿಗಳ ಸರಂಗಳುಂ ಪೊಳೆವ ಮಿಂಚುಗಳುಂ ಕರಮುಚ್ಚಮಪ್ಪ ಬೆ ।
ಟ್ಟುಗಳ ತಟಂಗಳಿಂ ಸುರಿವ ನಿರ್ಝರಮುಂ ಪೊಸಕಾರೊಳಿಂತು ಬೆ
ಳ್ಪಗೆ ಪಥಿಕಾಂಗನಾಜನಮನಂಜಿಸುವಂತಿರೆ ತೋಱಿ ಸುತ್ತಲುಂ ॥ ೧೨೪ ॥

ಉಪಸಂಹೃತಿ.

* ಗೀತಿಕೆ॥ ಇಂತು ಕಾರಕಂಗಳೊ
ಳ್ಸಂತಮಱಿಯೆ ಪೇಳ್ದ ಗುಣಮಂ ದೋಷಮುಮಂ ।
ಚಿಂತಿಸಿ ಸೆಱವುಮಿನ್ನುಪ್ಪುವಂ
ಭ್ರಾಂತಿಲ್ಲದಱಿದು ಕೊಳ್ಗೆ ಕವಿಗಳ್ ಕೃತಿಗಳೊಳ್ ॥ ೧೨೫ ॥

(ಗುರುಲಘು ದೋಷಂಗಳ್.)

ಮಣಿ ಭೂಷಣವೃತ್ತಂ॥ ಆರುಮೀಗುರುಲಘೂದಿತದೋಷವಿಶೇಷಮಂ
ಧೀರಸತ್ವರಱಿದುಂ ಕುಱಿಗೊಂಡು ವಿಭಾಗಿಸಲ್ ।
ಕಾರಣಾಂತರಮನಂತದಱಿೞ್ ತಱಿಸಂದು ನಿ
ರ್ಧಾರಿತಕ್ರಮದೆ ಪೇೞ್ವೆನುದಾಹರಣಂಗಳಂ ॥ ೧೨೬ ॥

ಗುರುದೋಷ ಲಕ್ಷಣಂ.

ಮಣಿ ಭೂಷಣವೃತ್ತಂ॥ ಆಗಳುಂ ಗುರುಗಳಲ್ಲದ ತಾಣದೊಳಂ ಗುರೂ
ದ್ಯೋಗದಿಂ ಬಗೆಗೆ ಗೌರವದೋಷಮಿದೆಂಬುದಂ ।
ಬೇಗಮಾಲಘುಗಳಲ್ಲದ ತಾಣದೊಳಂ ಲಘೂ
ಪಾಗಮಕ್ರಮದೆ ನಂಬುಗೆ ಲಾಘವದೋಷಮಂ ॥ ೧೨೭ ॥

ಲಕ್ಷ್ಯಂ.

ಸಾದುಗೆತ್ತು ಬಗೆಯಾದವನಾನೊಡನಟ್ಟಿದೆ
ನಾದಮಾನುಮಱಿಮಾನಿಸನಾಗದೆ ಮಾಳದೊಳ್ ।
ನೋದದಿಂನುಡುವ ಸೀರೆಗಮನ್ನನದಿರ್ಪಿ(ಬಾ)ರದೆ)
ಪೋದೆ(ನಾಯೆ)ಡೆಯೊಳ(ಂ) ತಡೆದಾನವನಂದಮಂ ॥ ೧೨೮ ॥

ಉಪಸಂಹೃತಿಯುಂ, ಲಘುದೋಷಮುಂ.

ಇಂತು ಪೇೞ್ದೊಡಿದು ಗೌರವದೋಷದ ಮಾೞ್ಕೆ ನಿ
ಶ್ಚಿಂತಮೀತೆಱದವಂ ಕಳೆಗಾಕೃತಿಯತ್ತಣಿಂ ।
ಮುಂತೆ ಪೇೞ್ವ ಕುಱಿಪಂ ಕುಱಿಗೊಂಡು ಕವೀಶರಾ
ರ್ಪಂತು ಪಿಂಗಿಸುಗೆ ಕಾವ್ಯದಿನಾ ಲಘುದೋಷಮಂ ॥ ೧೨೯ ॥

* ಛಂದೋಭಂಗವುಂಟು.

ಲಕ್ಷ್ಯಂ.

* ವೃ॥ ನೆರೆದು ಬಂದಪರವರ್ ಸಯಲಾಬಲವೆಲ್ಲಮೆ
ಟ್ತಿರದೆ ಕೊಂದಪನಿವಂದಿರನೀಗಳೆ ನಿಕ್ಕುವಂ ।
ಸರಿದು ಬೀಟ್ವಿವೊಲಿವಂದಿರ ಪಾಡಱಿವಂದಮಂ
ತಿರವೆಳೊಡ್ಡಱಿಯದಂತಿರೆ ನಮ್ಮವರೆಲ್ಲರಂ ॥ ೧೩೦ ॥

ಮಣಿಭೂಷಣ ವೃತ್ತಂ॥ ಬೇಱಿಬೇಱಿರೆ ವಿಕಲ್ಪಸಮುಚ್ಚಯಯುಗ್ಮದೊಳ್
ತೋಱುವೆಂ ಕ್ರಮವಿಕಲ್ಪನೆಯಂ ಗುಣದೋಷಮಂ ।
ಕೇಱಿಕೊಂಡು ಗುಣಮಂ ಕಳೆಗಲ್ಲಿಯ ದೋಷಮಂ
ತೋಱಿ ಪಿಂಗಿಸುವವೋಲ್ ಪೊಸನೆಲ್ಲಿರೆ ಪೇಟ್ಟಳಂ ॥ ೧೩೧ ॥

ಸಮುಚ್ಚಯ ದೋಷಲಕ್ಷಣಂ.

ದೇವರು ಗೊರವರುಂ ಗುಣವೃದ್ಧರಸಾರತಂ
ಕಾವರಕ್ಕರಸನಂ ಪ್ರಜೆಯಂ ಪರಿವಾರಮಂ ।
ಏವಮಂ ಬಗೆಯದಂತಿರೆ ಪೇಟ್ದ ಸಮುಚ್ಚಯೋ
ದ್ಭಾವಕಕ್ರಮವಿಚಾರದೆ ದೋಷಮಿದಗ್ಗಳಂ ॥ ೧೩೨ ॥

ಲಕ್ಷ್ಯಂ.

ನೃಪನುಮಂ ಪ್ರಜೆಯುಮಂ ಪರಿವಾರಮುಮಂ ಮಹಾ
ಕೃಪೆಯಿನಾ ಗೊರವರುಂ ಸುರರುಂ ಗುಣವೃದ್ಧರುಂ ।
ವಿಪುಳರಾಗಪರರಾಗಿಸುಗೆಂದು ಸಮುಚ್ಚಯ
ಕ್ಕುಪಚಿತೋರುಗುಣಮಂ ಮಿಗೆ ಪೇಟ್ಗೆ ಕವೀಶ್ವರರ್ ॥ ೧೩೩ ॥

ಮಣಿಭೂಷಣ ವೃತ್ತಂ॥ ಬೇಱಿವೇಱಿ ನಿಲೆ ಕಾರಕದೊಳ್ ಕ್ರಿಯೆ ತಳ್ತುಮುಂ
ತೋಱಿ ಪೇಟ್ದವಗುಣಂ ಗುಣರೂಪದೆ ಪೊರ್ದುಗುಂ ।
ಸಾಱುಗಾನೆಯವರೆಲ್ಲರುಮಂ ನೃಪತಾನೆ ಮ
ತ್ತೇಱುವೆಂ ಪಣೆದೊಡಾನೆಯನೆಂಬುದು ದೂಷಿತಂ ॥ ೧೩೪ ॥

* ಈ ವೃತ್ತದ ಹೆಸರು ಯಾವ ಛಂದಶ್ಶಾಸ್ತ್ರದಲ್ಲಿಯೂ ಉಕ್ತವಾಗಿಲ್ಲ.

* ವೃ॥ ಒಸೆಗೆ ಮೇಣ್ ಮುನಿಗೆ ಮೇಣವರೆಲ್ಲರುಮಂತೆ ಬ
ಗ್ಗಿ(ಸುಗೆ) ಮತ್ತುಱಿಯಲಾಗದು ನೆಟ್ಟನೆ ಪೂಣ್ದುದಂ
ಪುಶಿವರಾಗಿರೆ ಮಾನಸರೆಂಬುದನಿಂತೆ ಶಂ
ಕಿಸದೆ ನಂಬುವುದು ಮಿಕ್ಕ ವಿಕಲ್ಪದೋಷಮಂ ॥ ೧೩೫ ॥

* ವೃ॥ ಪೞಿಗೆ ಮೇಣ್ ಪೊಗೞ್ಗೆ ಮೇಣ್ ನೆವಮಿಲ್ಲದೊಡಿಂತು ಕೈ
ಗೞಿಯೆ ಬಗ್ಗಿಸುಗೆ ಮೇಣವರೆಲ್ಲರುಮಂತು ಮಾ।
ನುಱಿವೆನಲ್ಲೆನೆನಿತಾದೊ(ಡ)ಮೆಂಬುದು ಜೆಲ್ವ ಪಾಂ
ಗಱಿಯದಿಂತಿ(ಳಿ)ದನಿಂತಿರೆ ಪೇೞ್ಗೆ ವಿಕಲ್ಪಮಂ ॥ ೧೩೬ ॥

ಉಪಸಂಹೃತಿ.

ಗೀತಿಕೆ॥ ಕುಱಿತು ಸಮುಚ್ಚಯದಾ ಬೞಿ ವಿಕಲ್ಪದಾ
ತೆಱದೊಳೆ ದೋಷಮುಮನಂತೆ ಗುಣಮುಮಂ।
ಕಿಱಿದಱೊಳ್ ನೆಱೆಯೆ ಪೇೞ್ದೆನಿಂತೆ ಪೆಱವುಮ ನೀ
ಕುಱಿಪನೆ ಕುಱಿ ಮಾಡಿ ಪೇೞ್ಗೆ ಕಬ್ಬಮಂ ॥ ೧೩೭ ॥

ಅವಧಾರಣ ವಿಶಂಕಾಲಕ್ಷಣಂ.

ದ್ರುತವಿಳಂಬಿತಂ॥ ನಿಯಮಿತಾನ್ವಯ ಜಾತಿಗುಣಕ್ರಿಯಾ
ಶ್ರಯಮಿದಾ(ಯ)ವಧಾರಣ ಲಕ್ಷಣಂ।
ನಯನಿಯೋಗವಿಕಲ್ಪನೆಯೊಳ್ ವಿಶಂ
ಕೆ(ಯೆ) ವಿಶೇಷಗುಣಕ್ಕುಪಲಕ್ಷಣಂ ॥ ೧೩೮ ॥

ಅವಧಾರಣ ದೋಷಲಕ್ಷ್ಯಂ.

ಕುಲಜನೀತನೆ ಪಂಡಿತ ನೀತನು
ಜ್ಜ್ವಳ ಯಶೋಧಿಕನೀತನೆ ಶಿಬ್ಬನೆಂ।
ದಲಸಿ ಪೇೞ್ವವಧಾರಣ ದೋಷಮಂ
ನೆಲ(ಸ)ಲೀಯದಿರಿಂ ಕೃತಿನಾರಿಯೊಳ್ ॥ ೧೩೯ ॥

---

* ಈ ವೃತ್ತಗಳ ಹೆಸರು ಸಂಸ್ಕೃತ ಪ್ರಾಕೃತ ಕರ್ಣಾಟಕ ಛಂದೋ ಗ್ರಂಥಗಳಲ್ಲಿ ಉಕ್ತವಾಗಿಲ್ಲ. (ವೃತ್ತರತ್ನಾಕರ. ಪ್ರಾಕೃತ ಪಿಂಗಳ ಛಂದಸ್ಸೂತ್ರ. ಕರ್ಣಾಟಕ ಛಂದೋಂಬುಧಿ).

ಗುಣಕ್ಕೆ ಲಕ್ಷ್ಯಂ.

*ವೃ॥ ಶೂರನೀತನೆ ಪಂಡಿತನೀತನೇ
ಕ್ಷೀರಗೌರಯಶೋಧಿಕನೀತನೇ ।
ಧಾರಿಣೀತಳದೊಳ್ ಧ್ರುವನೆಂಬುದಾ
ಧಾರಮಿಂತವಧಾರಣದೊಳ್ ಗುಣಂ ॥ ೧೪೦ ॥

ವಿಶಂಕಾದೋಷಕ್ಕೆ ಲಕ್ಷ್ಯಂ.

ದ್ರುತವಿಳಂಬಿತಂ॥ ದಿವಿಜನೋ ಫಣಿನಾಯಕನೋ ಮನೋ
ಭವನಿವಂ ಕರವೊಪ್ಪಿದನೆಂಬುದಂ ।
ಕವಿಗಳಟ್ಟಿ ವಿಶಂಕೆಯ ಪಾಱಿಯಂ
ತವಿಸಿ ನಿಲ್ಕೆ ಮನೋಹರ ಕಾವ್ಯದೊಳ್ ॥ ೧೪೧ ॥

ಗುಣಕ್ಕೆ ಲಕ್ಷ್ಯಂ.

ದ್ರುತ॥ ಸುರಗಣಾಧಿಪನೋ ಫಣಿನಾಥನೋ
ನಿರುತಮಾಸ್ಮರನೋ ಸೊಗಯಿಪ್ಪರೀ ।
ದೊರೆಯರಿಲ್ಲ ನರರ್ ಪೆಱರೆಂಬುದಾ
ದರದಿನಕ್ಕೆ ಗುಣೋದಯಕಾರಣಂ ॥ ೧೪೨ ॥

ಅಭ್ಯುಪ(ಗ)ಮೋಕ್ತಿ ಗುಣಾವಗುಣಂ.

ಅಪರಿಮೇಯಮೆ ದೋಷಗುಣೌಘಮಿಂ
ತುಪಚಿತಕ್ರಮದಾರಯೆ ಕಾವ್ಯದೊಳ್ ।
ವಿಪುಳವೃತ್ತಿಯೊಳೊಂದಿರೆ ಪೇೞ್ವಿನ
ಭ್ಯುಪಗಮೋಕ್ತಿ ಗುಣಾವಗುಣಂಗಳಂ ॥ ೧೪೩ ॥

ಪೊಳೆವ ಮಿಂಚುಗಳಂತಿರೆ ಕೇತುಗಳ್
ಜಳದ ವೃಂದದವೋಲಿರೆ ಹಸ್ತಿಗಳ್ ।
ಗಳಿತಧಾರೆಗಳಂತಿರೆ ಪತ್ತಿಗಳ್
ಬಳಸಿ ಕಾರ್ಗೆ(ಣೆ)ಯಾಯ್ತು ಮಹಾಹವಂ ॥ ೧೪೪ ॥

---

* ಈ ವೃತ್ತದ ಹೆಸರು ಯಾವ ಛಂದಶ್ಶಾಸ್ತ್ರದಲ್ಲಿಯೂ ಉಕ್ತವಾಗಿಲ್ಲ.

ದ್ರುತ॥ ನಿಯಮಿತಾಕ್ಷರದಿಂದುಪಮಾಪ್ರತಿ
ಜ್ಞೆಯನೆ ಕಿರ್ದುವುದಟ್ಟಿಯಿನಿರ್ದುಮಾ।
ಬಯಕೆ ಕೀರದ ಕಾರಣದಿಂ ವಿಪ
* ರ್ಯಯಮಿದಭ್ಯುಪ(ಗ)ಮೋಕ್ತ್ಯುಪದೂಷಣಂ ॥ ೧೪೫ ॥

ಉಪಮಿತಾಕ್ಷರಮೆಲ್ಲಿಯುಮೇಕರೂ
ಪಪರಿವೃತ್ತಿಯೊಳೊಂದಿದ ಮಾಟ್ಕೆಯಿಂ।
ದುಪಚಿತಕ್ರಮಮಕ್ಕುಮಿದೆಂದುಮ
(1) ಭ್ಯುಪಗಮಕ್ಕೆ ಗುಣೋದಯಕಾರಣಂ ॥ ೧೪೬ ॥

ಸಮುಚಿತ ನೃಪತುಂಗದೇವಮಾರ್ಗ
ಕ್ರಮ(ನ)ಮುಮನಭೀಮುಖರ್ಕಳಪ್ಪರ್।
ಕ್ರಮಸಹಿತಮುಗಮ್ಯರೂಪಕಾವ್ಯ
ಶ್ರಮಪದಮಂ ನಿರಪಾಯಕೆಯ್ದಲಾರ್ಪರ್ ॥ ೧೪೭ ॥

ಪರಿಚ್ಛೇದದ ಉಪಸಂಹೃತಿ.

ಅತಿಶಯಧವಳೋರ್ವಿಪೋದಿತಾಳಂ
† ಕೃತಿ ಮತಿನಿ(ರತಿ)ನಿರಂತರಪ್ರತೀತಂ।
ಶ್ರುತಯುವತಿಕೃತೋಪಚಾರಸಾರ
(2) ಸ್ವತಗುಣಗಣದಿಂದೆ ಕೃತ್ಯಮಕ್ಕುಂ ॥ ೧೪೮ ॥

---

* ಈ ಪಾದದಲ್ಲಿ ಗ ಎಂಬಕ್ಷರವು ಛಂದಸ್ಸಿಗೆ ಹೆಚ್ಚುವುದರಿಂದ ಅಭ್ಯುಪಮೋಕ್ತಿ ಎಂಬ ಶಬ್ದವಿರಬೇಕಾಗುವುದು. ಇಲ್ಲಿ ಹೇಳುವ ವಿಷಯುವು ಉಪಮೆಗೆ ಸೇರಿದುದು. ಆದುದರಿಂದ ಅಭ್ಯುಪಮೋಕ್ತಿ ಎಂಬ ಶಬ್ದವೇ ಇಲ್ಲಿರಬೇಕೆಂದು ತೋರುವುದು. ಹೀಗೆಯೇ ೧೪೩ ನೆಯ ಪದ್ಯದಲ್ಲಿಯೂ ಇರುವ ಈ ಶಬ್ದವನ್ನು ಅರ್ಥಾನುಗುಣವಾಗಿ – ಅಭ್ಯುಪಗಮೋಕ್ತಿ = ಅಭ್ಯುಪಮಿತೋಕ್ತಿ ಎಂದು ತಿದ್ದಿಕೊಳ್ಳಬಹುದು.

1. ಅಭ್ಯುಪಮಿತಕ್ಕೆ.

† ಈ ಪಾದದಲ್ಲಿ ಛಂದೋಭಂಗವುಂಟು. ಆವರಣದಲ್ಲಿರುವ ಅಕ್ಷರವು ಹೆಚ್ಚಾಗಿರುವುದು.

2. ಗುಣಕೃತಕೃತ್ಯಮಲ್ಲನಕ್ಕುಂ ಎಂದಿರಬಹುದು.

ಚಂ॥ ನುಡಿಗಳೊಡಂಬಡಲ್‌ಬಗೆ(ದ)ವೋಲ್ ಬಗೆಯಂ ಮಿಗಲೀಯದೊಂದೆ ನಾ
ಣ್ನುಡಿಯ ಬೆಡಂಗೆ ಕನ್ನಡದ ಮಾತಿನೊಳಾ ವಿಕಟಾಕ್ಷರಂಗಳೊಳ್ ।
ತೊಡರದೆ ಸಕ್ಕದಂಗಳ ಪದಂ ಪವಣಾಗಿರೆ ಮೆಲ್ಪುವೆತ್ತು ದಾಂ
ಗುಡಿವಿಡಿಪಂತೆ ನೀಳ್ಪನಿತುವೇಳ್ಪುದು ನೀತಿನಿರಂತರಕ್ರಮಂ　　॥ ೧೪೯ ॥

ಪ್ರಶಸ್ತಿ.

ಮ॥ ಸಕಳಾಳಾಪಕಳಾಕಳಾಪಕಥಿತವ್ಯಾವೃತ್ತಿಯೊಳ್ ಕೂಡಿ ಚಿ
ತ್ರಕರಂಬೋಲ್ ಪರಭಾಗಭಾವವಿಲಸದ್ವರ್ಣಕ್ರಮಾವೃತ್ತಿಯಂ ।
ಪ್ರಕಟಂಮಾಡಿರೆ ಪೇಳ್ದ ಚಿತ್ರಕೃತಿಯಂ ವ್ಯಾವರ್ಣಿಸುತ್ತುಂ ಕವಿ
ಪ್ರಕರಂ ಶ್ರೀವಿಜಯಪ್ರಭೂತಮನಿದಂ ಕೆಯ್ಕೊಳ್ವುದೀಮಾಟ್ಕೆಯಿಂ ॥ ೧೫೦ ॥

ಗದ್ಯ

ಇದು

ಶ್ರೀ ಪರಮ ಶ್ರೀ ನೃಪತುಂಗ ದೇವಾನುಮತ

ಮಪ್ಪ

॥ ಕ ವಿ ರಾ ಜ ಮಾ ರ್ಗ ದೊ ಳ್ ॥

ದೋಷಾದೋಷಾನುವರ್ಣನನಿರ್ಣಯಂ.

॥ ಪ್ರಥಮ ಪರಿಚ್ಛೇದಂ ॥

॥ ಶ್ರೀ ॥

ದ್ವಿತೀಯ ಪರಿಚ್ಛೇದಂ

ಶಬ್ದಾಲಂಕಾರ ಪ್ರಕರಣಂ

ಅಲಂಕಾರ ಲಕ್ಷಣಂ.

ಕಂ॥ ಪರಮಶ್ರೀಕೃತಿವಧುವಾ
ಶರೀರಶೋಭಾಕರಂಗಳಪ್ಪ ಗುಣಂಗಳ್ ।
ನಿರತಿಶಯಾಲಂಕಾರ
ಪ್ರರೂಪಿತಂಗಳ್ ಪುರಾಣಕವಿವಿದಿತಂಗಳ್ ॥ ೧ ॥

ಅಲಂಕಾರ ವಿಭೇದಂ.

ಸಾರಶ್ರೀನೃಪತುಂಗ ವಿ
ಚಾರಕ್ರಮಮಾರ್ಗಗಣನೆಯೊಳ್ ಪರಮಾಲಂ ।
ಕಾರವಿಭಾಗಂ ವಿವಿಧಾ
ಕಾರಂ ಶಬ್ದಾರ್ಥಭೇದದಿಂದೆರಡಕ್ಕುಂ ॥ ೨ ॥

ಅನ್ನೆಗಮದಱೊಳಗೆ ಸಮು
ತ್ಪನ್ನಪ್ರಾಧಾನ್ಯಮನ್ಯಮರ್ಥಾಧಾರಂ ।
ಮುನ್ನಂ ಶಬ್ದಾಲಂಕಾ
ರನ್ನಿಶ್ಚಿತಮಕ್ಕೆ ಪೇೞ್ವ ಮಾೞ್ಕೆಯೊಳೆನ್ನಾ ॥ ೩ ॥

ಶಬ್ದಸಾರೂಪ್ಯಂ.

ಇಲ್ಲಿಗಿದು ತಕ್ಕುದಿಲ್ಲಿಗೆ
ಪೊಲ್ಲದಿದೆಂದಱಿದು ಸಮಱಿ ಬಲ್ಲಂತೆಲ್ಲಂ ।
ನೆಲ್ಲುಂ ಮೊಸರುಂಗುಡಿದಂ
ತಲ್ಲದೆ ತಲ್ಲಣಿಸದಲಸದಿಡು ಮೃದುಪದಮಂ ॥ ೪ ॥

ಅರ್ಥಸಾರೂಪ್ಯಂ.

ಕಂ॥ ಗಱಯಿಸಿದರ್ಥಂ ಸಲೆ ಪಾಂ
ಗಱಯದೆಯುಂ ಶಬ್ದವೊಂದದಿರ್ದೊಡೆ ಮುತ್ತುಂ ।
ಮೆಱಸುಂ ಕೋದಂತಕ್ಕುಂ
ಕಱಲ್ಚಿ ಕಳೆಗೊಂದಿ ಮುಂದೆ ಬಾರದ ಪದಮಂ ॥ ೫ ॥

ಲಘ್ವಕ್ಷರಾಂತಪದ ಪ್ರಯೋಗನಿಯಮಂ.

ನಿಲಿಸಿ ಲಘುಪದಮನದನ
ಗ್ಗಲಿಸಿರೆ ಮತ್ತೊತ್ತಿ ಬರ್ಪ ಪದಮಂ ತುದಿಯೊಳ್ ।
ನಿಲೆ ಪೇೞ್ದಾಗಳ್ ಕೂಸಿನ
ತಲೆಯೊಳ್ ಬೆಣ್ಣೆಯಱಯನಿಟ್ಟವೋಲಸುಖಕರಂ ॥ ೬ ॥

ಆದರ್ಶ ಲಕ್ಷ್ಯಂ.

*ಬಱಸಿ ಕ್ಷಿತಿಪತಿಯಂ ಸ
ಯ್ತಱಸಿ ಪ್ರಿಯಕುಶಲವಾರ್ತೆಯಂ ಬೆಸಗೊಂಡು ।
ಸ್ಥಿರಮಿರ್ದು ಪ್ರಭು ನುಡಿಯೆ
ಪ್ರರೂಢಮುದನಾದನಾತನೆಂಬುದು ದೂಷ್ಯಂ ॥ ೭ ॥

ದೋಷಾಭಾವ ಲಕ್ಷ್ಯಂ.

ಕ್ಷಿತಿಪತಿಯಂ ಬಱಸಿ ಜಗ
ನ್ನುತನಂ ಸಂತೈಸಿ ಕುಶಲವಾರ್ತಾಂತರಮಂ ।
ಮಿತವಚನಂ ಬೆಸಗೊಂಡತಿ
ವಿತೀರ್ಣಮುದನಾದನಾತನೆಂಬುದು ಮಾರ್ಗಂ ॥ ೮ ॥

ಕ್ರಿಯಾವಿಶೇಷಣ ಪ್ರಯೋಗದೂಷ್ಯತಾಪ್ರಕಾರಂ.

ಒಂದಂ ಕ್ರಿಯಾವಿಶೇಷಣ
ಮಂ ದೊರೆಕೊಳೆ ಸೈತು ಪೇ(ೞ್ದು ಮ)ದಱೊಳೆ ಪೆಱತಂ ।
ಸಂಧಿಸಿ ಪೇೞ್ದೊಡೆ ಕೃತಿಯೊಳ
ಗೊಂದಿರದೆರಡಕ್ಕೆ ಬಿಟ್ಟ ಕಱುವಂ ಪೋಲ್ಗುಂ ॥ ೯ ॥

* ಇದು ಶಬ್ದಮಣಿದರ್ಪಣದಲ್ಲಿ ಉದ್ಧೃತವಾಗಿದೆ (ಸೂತ್ರ ೫೯).

ಲಕ್ಷ್ಯಂ.

ಕಂ॥ ಪರಿವಾರವಾರವನಿತಾ
ಪರಿವೃತನರಮನೆಯೊಳರಸನಂಬರತಳದೊಳ್ ।
ವರತಾರಾಪರಿಗತಶಶ
ಧರನಂತೊಪ್ಪಿರೆ ವಿನೋದದಿಂದುರುಮುದದಿಂ ॥ ೧೦ ॥

ಕ್ರಿಯಾವಿಶೇಷಣ ಪ್ರಯೋಗಾದೂಷ್ಯತೆ.

ಪದನಱಿದೊಂದಂ ಕ್ರಿಯೆಯೊಳ್
ಪುದಿದುಱುದುದನೊಂದಿ ಬರೆ ವಿಶೇಷ್ಯದೊಳೊಂದಂ ।
ಸದಭಿಮತಮಾಗಿ ನಿಲೆ ಪೇ
ೞ್ವುದು ಮಾರ್ಗಂ ನಿತ್ಯಮಲ್ಲವಲ್ಲಭಮತದಿಂ ॥ ೧೧ ॥

ಲಕ್ಷ್ಯಂ.

ಪರಿವಾರವಾರವನಿತಾ
ಪರಿವೃತನರಮನೆಯೊಳರಸನಂಬರತಳದೊಳ್ ।
ವರತಾರಾಪರಿಗತಶಶ
ಧರನಂತೊಪ್ಪಿರೆ ವಿನೋದದಿಂ ಜನಿತಮುದಂ ॥೧೨ ॥

ನಿರರ್ಥಕನಿಪಾತಾವ್ಯಯ ಪ್ರಯೋಗದೂಷ್ಯಂ.

ಇಂನಂತೆ ಮತ್ತೆ ಬೞಿ ಮಿಗೆ
ಮುಂ ನಿಲೆ ತಾಂ ಮೇಣ್ ವೆಱಂ ಗಡಂ ಗಳಮಾದಂ ।
ಕೆಂನಂ ನಿಲ್ಲೆಂದಿವನೆಂ
ದುಂ ನಿಱಿಸಲ್ಕಿಲ್ಲದೆಡೆಗಳೊಳ್ ಕಲ್ಲದಿರಿಂ ॥ ೧೩ ॥

ಲಕ್ಷ್ಯಂ.

ನೃಪಕನ್ಯಕಾಸ್ವಯಂವರ
ವಿಪುಳಮಹೋತ್ಸವವಿವಾಹದೊಳ್ಬಂದಿರ್ ಮು ।
ನ್ನಪವಾದವಾದುದೆನಗೇಂ
ಚಪಲಧ್ವಜನೋಕ್ತಿಯಿಂದಮಿಂ ಬಾರದಿರಿಂ ॥ ೧೪ ॥

ದ್ವಿತೀಯಾಷಷ್ಠೀವಿಭಕ್ತ್ಯಕಾರ ದೀರ್ಘವಿಚಾರಂ.

ಕಂ॥ ಘನಮೆರಡನೆಯದಱೊಳಮಾ
ಱನೆಯ ವಿಭಕ್ತಿಯೊಳಮೊಳವು ಗುರುಲಘುಭೇದಂ।
ಅನಿಯತವೃತ್ತಿಯನಱಿದದ
ನನುಮಾರ್ಗಕ್ರಮದೆ ಸಯ್ತು ಮಾಡುಗೆ ನಿಪುಣರ್ ॥ ೧೫ ॥

ಸ್ವರಪರಕದ್ವಿತೀಯಾವಿಭಕ್ತ್ಯಕಾರ ದೀರ್ಘವಿಚಾರಂ.

ಆದಿಸ್ವರಪದಮಂತ್ಯದೊ
ಳಾದೆಡೆಯೊಳ್ ದೀರ್ಘಮಕ್ಕುಮೆರಡನೆಯ ವಿಭ।
ಕ್ತ್ಯಾದಾನಪದಂ ದೀರ್ಘಂ
ಪಾದಾಂತದೊಳುಱಿದ ತಾಣದೊಳ್ ಸ್ವಚ್ಛಂದಂ ॥ ೧೬ ॥

ಪದಾಂತದ್ವಿತೀಯಾವಿಭಕ್ತ್ಯಕಾರ ದೀರ್ಘನಿಯಮಕ್ಕೆ ಲಕ್ಷ್ಯಂ.

ನೃಪನನಭಿಮಾನಧನನನ
ನುಪಮನನತಿಶಯ ವಿಶಾಲಕೀರ್ತಿಧ್ವಜನಾ।
ನು(ಪ)ಚಿತಗುಣನಾನುಚಿತನ
ನಪೇತದೋಷನನುದಾರಚರಿತೋದಯನಂ ॥ ೧೭ ॥

ಉಱಿದೆಡೆಯ ಸ್ವಚ್ಛಂದಕ್ಕೆ ಲಕ್ಷ್ಯಂ.

ನೃಪನಾನಭಿನುತಮನನಾ
ನುಪಮೇತರನಾನಪಾರಕೀರ್ತಿಧ್ವಜನಂ।
ವಿಪುಲಗುಣಜ್ಞನನುಚಿತನ
ನಪಗತದೋಷನನುದಾರಚರಿತೋದಯನಂ ॥ ೧೮ ॥

ಉಪಸಂಹೃತಿ.

ಎಂದಿಂತು ಪೇಟ್ದ ಮಾಟ್ಕೆಯೊ
ಳೊಂದುವುದುಮನೊಂದಿ ಬಾರದುದುಮಂ ಪೀನಂ।
ಸಂದೆಯಮಿಲ್ಲದೆ ಸಲೆ ತಱ
ಸಂದೋಸಱಿಸುವುದು ಕಾವ್ಯರಚನಾಕ್ರಮದೊಳ್ ॥ ೧೯ ॥

ಷಷ್ಠೀವಿಭಕ್ತ್ಯಯಕಾರದೀರ್ಘವಿಚಾರಂ.

ಕಂ॥ ಪಲವುಮನೊಡಗೂಡಿರೆ ಸೈ
ತಲಸದೆ ಪೇಟ್ವೆಡೆಯೊಳಂ ಸ್ವಪಾದಾಂತದೊಳಂ।
ಪಲವಾಱನೆಯ ವಿಭಕ್ತ್ಯೊ
ಳಲಘೂಚ್ಚಾರಣೆ ಯಥೇಷ್ಟಮುೞಿದೆಡೆಗಳೊಳಂ ॥ ೨೦ ॥

ಷಷ್ಠೀವಿಭಕ್ತ್ಯಕಾರ ದೀರ್ಘನಿಯಮಕ್ಕೆ ಲಕ್ಷ್ಯಂ.

ನೃಪನಾ ನೃಪನಂದನನಾ
ನೃಪವಧುವರ್ ನೆರೆದು ಸುಖದೊಳಿರೆ ಕೈಕೊಂಡ।
ತ್ರಪರಿಮಿತರಾಗವೆರ್ದೆಯಂ
ನೃಪಬಾಂಧವರಾ ಸುಮಿತ್ರರಾ ಪರಿಜನ(ದಾ) ॥ ೨೧ ॥

ಉೞಿದೆಡೆಯ ಯಥೇಷ್ಟಕ್ಕೆ ಲಕ್ಷ್ಯಂ.

ನೃಪನ ನರಪಾಲತನಯನ
ನೃಪವಧುವರ್ ನೆರೆದು ಸುಖದಿನಿರೆ ಕೈಕೊಂಡ।
ತ್ರಪರಿಮಿತರಾಗವೆರ್ದೆಯಂ
ನೃಪತಿಸನಾಭಿಗಳ ಬಂಧುಜನದಾ ಕೆಳೆಯಾ ॥ ೨೨ ॥

ಸಂಬೋಧನಾ ದೀರ್ಘನಿಯಮಂ.

ಸಂಬೋಧನೆ ದೀರ್ಘೋಕ್ತಿಯೊ
ಳಿಂಬಾಗಿರೆ ಬರ್ಕುಮದನೆ ಪಲವೆಡೆಗಳೊಳಂ।
ದುಂ ಬಲ್ಲವರಿಡದಿರ್ಕಾ
ದಂ ಬಾಯೞಿದೂಳ್ಪವೋಲ್ ಕರಂ ವಿರಸತರಂ ॥ ೨೩ ॥

ನೃಪತೀ ಪರೋಪಕಾರೀ
ವಿಪುಳಗುಣೀ ವಿಶದಶಶಧರಾಯತಕೀರ್ತೀ।
ವ್ಯಪಗತಭಯಾ ದಯಾಲೂ
ರಿಪುವರ್ಗಮನಲೆದು ಗೆಲ್ವೆಯಾಗಾಹವದೊಳ್ ॥ ೨೪ ॥

* ಪುನರುಕ್ತಗುಣಪ್ರಕಾರಂ.

ಕಂ॥ ಅಱಿಪಿದರುಂ ವಿಭೀತರು
ಮಱಲ್ವರುಂ ಸಲೆ ವಿಯೋಗದಿಂ ನಿಜಜನದಿಂ ।
ಕಱಿಯೆ ಪರಾರ್ತಿಗಳುಂ ಬಾ
ಯಱಿದೊಳ್ದಿಂತಿದನೆ ಯುಕ್ತಪುನರುಕ್ತಿಕಮಂ ॥ ೨೫ ॥

ಲಕ್ಷ್ಯಂ.

ಪುಲಿಪುಲಿ ಪರಿಪರಿ ಪೋಪೋ
ಗೆಲೆಎಲೆ ಪೆಱಪಿಂಗು ಪಿಂಗು ನಿಲ್‌ನಿಲ್ ಬಾಬಾ ।
ಪುಲಿ ಮನಮನಂಜದಂಜದೆ
ತೊಲತೊಲಗೀ ಮೆಳೆಗೆ ಪುಲಿ ಯದೆಂಬುದು ಮಾರ್ಗಂ ॥ ೨೬ ॥

ಬಹುವಿಶೇಷಣ ಪ್ರಯೋಗನಿಯಮಂ.

ರೂಪಕದೊಳಂ ವಿಶೇಷಾ
ಳಾಪೋದ್ದೇಶದೊಳಮಲ್ಲದುಱಿದೆಡೆಗಳೊಳಂ ।
ಚಾಪಲಮತಿಗಳ್ ವಿರಸಸ
ಮೀಪಮನಿಡದಿರ್ಕೆ ಬಹುವಿಶೇಷಣಗಣಮಂ ॥ ೨೭ ॥

ಲಕ್ಷ್ಯಂ.

ಸುಭಟರ್ಕಳ್ ಕವಿಗಳ್ ಸು
ಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್ ಗುಣಿಗಳ್ ।
ಅಭಿಮಾನಿಗಳತ್ಯುಗ್ರರ್
ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್ ॥ ೨೮ ॥

ಉಪಸಂಹೃತಿ.

ಅಂತಧಿಕವಿಶೇಷಣಗಣ
ಮಂ ತಡೆಯದೆ ಪೇೞ್ವೊಡಂಕಚಾರಣೆಗ(ಳೊ)ಳಂ ।
ಸಂತಂ ಪೇೞ್ಗುಱಿದಾವೆಡೆ
ಯಂತರದೊಳಮಾಗದೆಂದನತಿಶಯಧವಳಂ ॥ ೨೯ ॥

* ಇದು ಈ ಪ್ರಕರಣದಲ್ಲಿ ಉಕ್ತವಾಗಿರುವುದು ಅನುಗುಣವಾಗಿಲ್ಲ.

ಪ್ರಾಸ ವಿಚಾರಂ.

ಕಂ॥ ನುತಶಬ್ದಾಲಂಕಾರದೊ
ಳತಿಶಯಮೀ ಕನ್ನಡಕ್ಕೆ ಸತತಂ ಪ್ರಾಸಂ।
ಕೃತಕೃತ್ಯಮಲ್ಲವಲ್ಲಭ
ಮತದಿಂದದ(ಱಾ) ಪ್ರಪಂಚಮೀತೆಱನಕ್ಕುಂ ॥ ೩೦ ॥

ಪ್ರಾಸ ಭೇದಂಗಳ್.

ವಿನುತಪ್ರಾಸಂ ಶಾಂತೋ
ಪನತಂ ವರ್ಗೋದಿತಂ ಸಮೀಪಗತಂ ಮ
ತ್ತನುಗತ ಮತ್ಯಂತಗತಂ
ಜನಿತವಿಭೇದೋಕ್ತಿಯಿಂದಮಿಂತಾಱುತೆಱಂ ॥ ೩೧ ॥

(ವಿನುತ) ಪ್ರಾಸಲಕ್ಷಣಂ.

ಪಾದದೊಳೆರಡನೆಯಕ್ಕರ
ಮಾದರದಿಂದಾದುದಾವುದದನಱಿದನಿತಂ।
ಪಾದದೊಳಿಡುವುದದಕ್ಕುಂ
ಭೇದೋಕ್ತಕ್ರಮವಿಚಾರಿತೋರುಪ್ರಾಸಂ ॥ ೩೨ ॥

ಲಕ್ಷ್ಯಂ.

ಮನೆಗಿಂದು ಬರ್ಕುವೆಂದಾ
ನನೇಕತ(ರ)ವಸ್ತ್ರವಾಹನಾದಿಯನೊಸೆದಿಂ।
ಬೆನೆ ಪಸರಿಸಿ ಕುಡಲಿರ್ದೆಂ
ಜನೇಶನಿಂದೇಕೆ ಕಳೆದು ಪೋದನೊ ಪೇೞಿಂ ॥ ೩೩ ॥

ಉಪಸಂಹೃತಿ.

ಎಂಬುದು ವಿನುತಪ್ರಾಸಂ
ಸಂಬಂಧಾಕ್ಷರದೊಳೆಲ್ಲಮಾತ್ರೆಗಳುಂ ತ।
ಱ್ತಿಂಬಾಗಿ ಬೆರಸೆ ಶೋಭಾ
ಡಂಬರಮಂ ಪಡೆಗುಮುಚಿತಕಾವ್ಯೋಕ್ತಿಗಳೊಳ್ ॥ ೩೪ ॥

ಶಾಂತಪ್ರಾಸ ಲಕ್ಷಣಂ.

ಕಂ॥ ಬೆರಸಿರೆ ಮುಂ ಸಂಯೋಗಾ
ಕ್ಷರಂಗಳೇಕಸ್ವರಂಗಳಿಂ ಸುಪ್ರಾಸಂ।
ನೆರೆದು ವಿಪರ್ಯಾಸಕ್ರಮ
ಮಿರೆ ಸತತಂ ಶಾಂತಪೂರ್ವಮಕ್ಕುಂ ಪ್ರಾಸಂ ॥ ೩೫ ॥

ಲಕ್ಷ್ಯಂ.

*ಪತ್ತಿ ಪ್ರಮಾದಫಲಕಮ
ನತ್ಯುಗ್ರಗ್ರಾಹನಿವಹಸಂಕ್ಷೋಭಿತದೊಳ್।
ಮತ್ತೀ ರತ್ನಾಕರದೊಳ್
ಪುತ್ರಿಕೆಯೆನೆ ಬಟ್ದಿಳಿಂತು ಬಾಟ್ವುದೆ ಚೋದ್ಯಂ ॥ ೩೬ ॥

ಉಪಸಂಹೃತಿ — ವರ್ಗಪ್ರಾಸಲಕ್ಷಣಂ.

ಶಾಂತಪ್ರಾಸದ ಭೇದಮ
ದಿಂತಕ್ಕುಂ ವರ್ಗದಕ್ಕರಂಗಳ್ ನಾಲ್ಕುಂ।
ಸಂತಮಿರೆ ಪೇೞ್ವ ತಾಣದೊ
ಳಂತಕ್ಕುಂ ಪ್ರಾಕ್ತನೋಕ್ತವರ್ಗಪ್ರಾಸಂ ॥ ೩೭ ॥

ಲಕ್ಷ್ಯಂ.

ಸಕಲಜನವಿನುತನಂ ಶತ
ಮಖಸದೃಶವಿಶಾಲವಿವಿಧವಿಭವೋದಯನಂ।
ಪ್ರಗತಗುಣಗಣನನರಿಬಲ
ವಿಘಟನನಂ ಕಂಡನಱುವನಾ ರಾಘವನಂ ॥ ೩೮ ॥

ಉಪಸಂಹೃತಿ — ಸಮೀಪಪ್ರಾಸಲಕ್ಷಣಂ.

ಇದು ದಲ್ ವರ್ಗಪ್ರಾಸ
ಕ್ಕುದಾಹೃತಂ ಕುಱಿತು ಶಷಸವರ್ಣತ್ರಯಮುಂ।
ವಿದಿತಪ್ರಾಸವಿವಿಕ್ತಾ
ಸ್ಪದದೊಳ್ ನಿಲೆ ಪೇೞ್ವೊಡದು ಸಮೀಪಪ್ರಾಸಂ ॥ ೩೯ ॥

* ಭಿನ್ನಸಂಯುಕ್ತ ವ್ಯಂಜನಾಕ್ಷರ ಪ್ರಾಸಬದ್ಧವಾದ ಈ ಪದ್ಯವು ಈ ಗ್ರಂಥಕರ್ತನಿಂದುದಾಹೃತವಾಗಿರಬಹುದೇ, ಎಂಬ ಸಂದೇಹಕ್ಕೆ ಅವಕಾಶವುಂಟು.

ಲಕ್ಷ್ಯಂ.

ಕಂ॥ ಶಶಧರಬಿಂಬಾನನೆಯಂ
ಝಷಕೇತನಕೇತನಾಭತನುತನುವಂ ತಾಂ ।
ಬಿಸವಿಶದವರ್ಣೆಯಂ ಕಂ
ಡೊಸೆದಂ ಬನದೊಳಗೆ ಜನಕತನಯಳನಱುವಂ ॥ ೪೦ ॥

ಉಪಸಂಹೃತಿ — ಅನುಗತ ಪ್ರಾಸಲಕ್ಷಣಂ.

ಎಂದಿಂತು ಸವಿಾಪಪ್ರಾ
ಸಂ ದರ್ಶಿತಭೇದಮಾಯ್ತನುಪ್ರಾಸವುಮಂ ।
ಸಂಧಿಸಿದೆಣೆಯಕ್ಕರವೊಂ
ದೊಂದಱೊಳಳವಡಿಸಿ ಬಂದೊಡನುಗತಮಕ್ಕುಂ ॥ ೪೧ ॥

ಲಕ್ಷ್ಯಂ.

ಜನವಿನುತನನಘನನುಪಮ
ನನುನಯಪರನರಸನಿನಿಸು ನೆನೆನೆನೆದು ಮನೋ ।
ಜನಿತಮುದನನಿಲತನಯನ
ನನನೃತವಚನಪ್ರಪಂಚನಂತಿರೆ ನುಡಿದಂ ॥ ೪೨ ॥

ಉಪಸಂಹೃತಿ — ಅಂತಪ್ರಾಸಲಕ್ಷಣಂ.

ಇಂತಿದನುಪ್ರಾಸಂ ಪಾ
ದಾಂತದೊಳೊಂದಾವುದಾನುಮಿಟ್ಟಕ್ಕರಮಂ ।
ಮುಂತಣ ಪಾದಾಂತಂಗಳೊ
ಳುಂ ತಡೆಯದೆ ಪೇೞ್ವೊಡಂತದಂತ್ಯಪ್ರಾಸಂ ॥ ೪೩ ॥

ಲಕ್ಷ್ಯಂ.

ಅತಿವಿಶದ ಯಶೋವೃತ್ತಂ
ನತಸಕಳಾರಾತಿಜನವಿತಾನಂ ಮತ್ತಂ
ವಿತತ ಶ್ರೀಸಂಪತ್ತಂ
ಶತಮುಖಸದೃಶಾನುಭಾವಪದಮಂ ಪೆತ್ತಂ ॥ ೪೪ ॥

ಕಂ॥ ಪ್ರಾಸಾನು ಪ್ರಾಸಾಂತ
ಪ್ರಾಸಂಗಳ್ ಮೂಱುಮತಿಶಯಂಗಳ್ ಪ್ರಾಸಾ ।
ಭಾಸಂಗಳುಱಿದ ಮೂಱುಂ
ಭಾಸುರನೃಪತುಂಗದೇವವಿದಿತಕ್ರಮದಿಂ ॥ ೪೫ ॥

ಮಾರ್ಗವಿಚಾರಂ.

ಗೀತಿಕೆ॥ ಅಱಿದು ಪೀನಂ ಮಾರ್ಗಗತಿಯಂ
ತಱಿಸಲಾಗದಾರ್ಗಂ ಬಹುವಿಕಲ್ಪದೊಳ್ ।
ಕುಱಿತು ಪೂರ್ವಶಾಸ್ತ್ರ ಪದವಿಧಿಯಂ
ತೆಱೆದಿರೆ ಪೇೞ್ವೆನಿನಿಸಂ ಕನ್ನಡದೊಳ್ ॥ ೪೬ ॥

ಕರಚರಣಶರೀರಶಿರೋ
ದರವದನಾದ್ಯವಯವಂಗಳಿವು ತಂತಮ್ಮೊಳ್ ।
ದೊರೆಕೊಂಡೆಡೆಗಳೊಳೊಳವಾ
ಗಿರೆಯುಂ ನರರೊರ್ವರೊರ್ವರಂ ಪೋಲದವೋಲ್ ॥ ೪೭ ॥

ವರಶಬ್ದಾಲಂಕಾರದ
ವಿರಚನೆಗಳ್ ನೋೞ್ಪೊಡೊಂದೆ ತೋರ್ಕೆಗಳಿಂತುಂ ।
ಪೊರೆದಿರಲೊಂದೊಂದಱೊಳಾ
ಪರಮಕವೀಶಪ್ರಯೋಗಗತಮಾರ್ಗಂಗಳ್ ॥ ೪೮ ॥

ಕವಿಗಳುಮನಾದಿಲೋಕೋ
ದ್ಭವರಪ್ಪುದಱಿಂದನಂತಗಣನಾನುಗತಂ ।
ಸವಿಶೇಷೋಕ್ತಿಗಳುಮನಂ
ತವಿಧಂಗಳನಂತಭೇದವದಱಿಂ ಮಾತುಂ ॥ ೪೯ ॥

ಜನಿತವಿಭಾಗಂಗಳ್ ವಾ
ಙ್ಮನಸಾತೀತಂಗಳಿಂತು ಮಾರ್ಗೋಕ್ತಿಗಳೊಳ್ ।
ನೆನೆದಱಪಲಾರ್ಪರಾದ
ನನಿಶ್ಚಿತಕ್ರಮವಿಶೇಷಗುಣಯುಕ್ತಕಮಂ ॥ ೫೦ ॥

ದಕ್ಷಿಣೋತ್ತರಮಾರ್ಗಂಗಳ್.

ಕಂ॥ ಅಂತುಂ ಭೇದಮನಿನಿಸಾ
ರ್ಗಂತುತ್ತರದಕ್ಷಿಣೋರುಮಾರ್ಗದ್ವಯದಾ।
ಚಿಂತಿತಪುರಾಣಕವಿವಿದಿ
ತಾಂತರಮಂ ಪೇೞ್ವೆನಱಿವ ಮಾೞ್ಕೆಯೊಳೆನ್ನಾ ॥ ೫೧ ॥

ನಿಗದಿತಕಾವ್ಯೋಕ್ತಿಗಳೊಳ್
ನೆಗೞ್ವುವು ಮಾರ್ಗಂಗಳಿಂತುಮೆರಡುಕ್ತಿಗಳುಂ।
ಬಗೆವಾಗಳೆರಡುಮಾೞ್ಕೆಯೊ
ಳೊಗೆದುವು ವಕ್ರಸ್ವಭಾವನಿಯತಿಕ್ರಮದಿಂ ॥ ೫೨ ॥

ಸತತಂ ದಕ್ಷಿಣಮಾರ್ಗೋ
ದಿತೋಕ್ತಿ ಭೇದಕಗುಣಂ ಸ್ವಭಾವಾಖ್ಯಾನಂ।
*ವಿದಿತೋತ್ತರಮಾರ್ಗಗತಂ
ಪ್ರತೀತವಕ್ರೋಕ್ತಿಕೃತವಿಕಲ್ಪಮನಲ್ಪಂ ॥ ೫೩ ॥

ಸಮ, ಮಧುರ, ನಿಬಿಡ, ಕಾಂತ, ಸು
ಕುಮಾರ, ಸುಸಮಾಹಿತ, ಪ್ರಸನ್ನೋ, ದಾರ,।
ಪ್ರಮಿತಾಗ್ರಾಮ್ಯೋ, ಜಸ್ವಿ,
ಕ್ರಮದಿಂ ದಶಭೇದಮಲ್ಲಿ ದಕ್ಷಿಣಮಾರ್ಗಂ ॥ ೫೪ ॥

ಅವಱ ವಿಪರ್ಯಯವೃತ್ತಿ
ಪ್ರವಿಭಕ್ತವಿಕಲ್ಪಮಕ್ಕುಮುತ್ತರಮಾರ್ಗಂ।
ಸವಿಶೇಷಗುಣಮನತಿಶಯ
ಧವಳೋಕ್ತಿಕ್ರಮದಿನಱಿಪುವೆಂ ತದ್ಭವದೊಳ್ ॥ ೫೫ ॥

---

* ಇಲ್ಲಿ ತಕಾರ ಪ್ರಾಸಿನಲ್ಲಿ, ದಕಾರವು ಬಂದಿದೆ. ಇಂತಹ ಪ್ರಾಸಗಳು ಪ್ರಾಚೀನಕನ್ನಡ ಕಾವ್ಯಗಳಲ್ಲಿಲ್ಲವೇ ಇಲ್ಲ. ಆದರೆ ಈ ಶಾಸ್ತ್ರಕಾರನು ಹೇಳಿರುವಂತೆ ವರ್ಗಪ್ರಾಸವೆಂದು ಸಾಧುತ್ವವನ್ನು ಹೇಳಬಹುದು. ಅಥವಾ ವಿತತ ಎಂದೂ ತಿದ್ದಬಹುದು.

ಸಮಬಂಧ ಗುಣಲಕ್ಷಣಂ.

ಕಂ॥ ಸಮಬಂಧವೆಂಬುದಕ್ಕುಂ
ಸಮನಿಸಿ ಕಿವಿಗೆದರಿ ಬಾರದಾನಂ ಮುಟ್ಟುಂ।
ಸಮೆದ ಪದದಾವಿಭೇದ
ಕ್ರಮಮೆರಡಕ್ಕುಂ ಮೃದುಸ್ಫುಟೋಕ್ತಿಯಿನದಱಿಂ ॥ ೫೬ ॥

ಸಮಬಂಧ ಗುಣಭೇದಂಗಳ್.

ಮೃದುತರವರ್ಣಾನುಗಮಾ
ಪದವಿರಚನೆಯೊಳಗೆ ತೋರ್ಪುದದು ಮೃದುಬಂಧಂ।
ವಿದಿತಸ್ಫುಟಾಕ್ಷರಾಧಿಕ
ಪದವಿರಚಿತಮಪ್ಪುದಕ್ಕುಮಾಸ್ಫುಟ ಬಂಧಂ ॥ ೫೭ ॥

ಲಕ್ಷ್ಯಂ.

ದೊರೆಕೊಳೆ ನೋಡಿದನಾಯತ
ಕರುಣಾಪಾಂಗದೊಳೆ ಲೋಲಲೋಚನಯುಗೆಯಂ।
ಗುರುಪೀನಪಯೋಧರಯುಗ
ಭರವಿಧುರೆಯನಾ ಧರಾಧಿಪತಿ ವಿಧುಮುಖಿಯಂ ॥ ೫೮ ॥

ಉಪಸಂಹೃತಿ — ವಿಷಮಬಂಧಲಕ್ಷ್ಯಂ.

ಇಂತಿದು ಸಮಬಂಧದ್ವಿತ
ಯಾಂತರಮಾ ವಿಷಮಬಂಧಮಿನ್ನಿಂತಕ್ಕುಂ।
ಚಿಂತ್ಯೈಕಸುಖಾಕ್ರಾಂತರ್
ಸಂತುಷ್ಟೈಕಾಗ್ರಚಿತ್ತರಾದರ್ ತವೊಳ್ ॥ ೫೯ ॥

ಮಧುರ ಗುಣಲಕ್ಷಣಂ.

ಸವಿವೊಡೆ ಮಧುರರಸಂಬೋಲ್
ಕಿವಿಗಿನಿದಾಗಿರ್ಪ ವಚನವಿರಚನೆ ಮಧುರಂ।
ಸವಿಳಾಸಾಲಾಪದಿ ನವ
ಐ ವಿಶೇಷವಿಶೇಷ್ಯಮಿಂತು ಮಾರ್ಗದ್ವಯದೊಳ್ ॥ ೬೦ ॥

ಲಕ್ಷ್ಯಂ.

ಕಂ॥ ದೆಸೆಗಳ್ ವಿಳಾಸಮಾದುವು
ಕೆಸಱುಂ ಪಿಂಗಿತ್ತು ಧರಣಿ ತಿಳಿದುವು ಕೊಳಗಳ್ ।
ಶ್ವಸನಪಥಮಮಳಮಾಯಿತ್ತಂ
ದೊಸಗೆಗಳಂ ಬೀಱುವಂತೆ ಶರದಾಗಮದೊಳ್ ॥ ೬೧ ॥

ಉಪಸಂಹೃತಿ.

ಇದು ದಕ್ಷಿಣಮಾರ್ಗವಿಭೇ
ದದ ಮಧುರರಸಪ್ರಯೋಗಮಾಚಾರ್ಯಮನೋ ।
ಮುದಿತವಿತಾನಂ ವಿದಿತಾ
ಸ್ಪದಮುತ್ತರಮಾರ್ಗವರ್ಗಮಧುರಾಳಾಪಂ ॥ ೬೨ ॥

ಉತ್ತರಮಾರ್ಗ ಮಧುರಗುಣಲಕ್ಷ್ಯಂ.

ಧವಳ ಜಳಧರಕುಳಾಕುಳ
ಮವಿಕಳಮಂಬರತಳಂ ವಿನೀಳಚ್ಛಾಯಂ ।
ಕುವಳಯಕೀರ್ತಿಗೆ ಶಾರದ
ಮವಧಾರಿತಮಾಯ್ತದೆಂಬುದುತ್ತರಮಾರ್ಗಂ ॥ ೬೩ ॥

ನಿಬಿಡಬಂಧಗುಣಲಕ್ಷಣಂ — ಶಿಥಿಲಬಂಧಲಕ್ಷಣಂ.

ಮಿಗೆ ನಿಬಿಡಬಂಧಮೆಂಬುದು
ತಗುಳ್ವುವು ವರ್ಣಂಗಳಗಲದಿರೆ ಮತ್ತಕ್ಕುಂ ।
ನೆಗಳ್ವಲ್ಪಪ್ರಾಣಾಕ್ಷರ
ನಿಗದಿತಮೇತದ್ವಿಪರ್ಯಯೋಕ್ತಂ ಶಿಥಿಲಂ ॥ ೬೪ ॥

ನಿಬಿಡಶಿಥಿಲ ಲಕ್ಷ್ಯಂಗಳ್.

ಅರವಿಂದೋತ್ಪಲಪುಷ್ಪೋ
ತ್ಕರಂಗಳೊಳ್ ಪಾಯ್ದುಮುದ್ಭ್ರಮದ್ಭ್ರಮರಂಗಳ್ ।
ವಿರತಮುದವಾದುವುರುಮದ
ವಿರಾಮವನಕರಿಕಪೋಲಫಲಕದೊಳಾಗಳ್ ॥ ೬೫ ॥

ಉಪಸಂಹೃತಿ — ಕಾಂತಗುಣಲಕ್ಷಣಂ.

ಕಂ॥ ಇದು ನಿಬಿಡಶಿಥಿಲಬಂಧಾ
ಸ್ಪದಮಾರ್ಗದ್ವಿತಯಗದಿತಲಕ್ಷ್ಯವಿಭಾಗಂ ।
ಸದಭಿಕಮನೀಯಗುಣಮ
ಪ್ಪುದು ನಿಯತಂ ಕಾಂತಮೆಂಬುದಭಿಗೀತಾರ್ಥಂ ॥ ೬೬ ॥

ದಕ್ಷಿಣಮಾರ್ಗ ಕಾಂತಗುಣಲಕ್ಷ್ಯಂ.

ದಿನಕರಕರ ನಿಕರಂಗಳ್
ಘನವಿವರಪ್ರಸರಮಾಗಿಯುಂ ತಮ್ಮಿಂ ಕಂ ।
ಡನಿತಱೊಳೆ ತೆರಳ್ದೆನ್ನಾ
ಮನೋಗತಧ್ವಾಂತಬಂಧಮಳಱುತ್ತೆಲ್ಲಂ ॥ ೬೭ ॥

ಉಪಸಂಹೃತಿ — ಉತ್ತರಮಾರ್ಗ ಕಾಂತಗುಣಂ.

ಇಂತಿದು ದಕ್ಷಿಣಮಾರ್ಗದ
ಕಾಂತಮಸಂಭಾವಿತಾರ್ಥಮುದ್ಧಾಮೋಕ್ತಂ ।
ಸಂತತಮುತ್ತರಮಾರ್ಗಗ
ತಾಂತರಮದನಿಂತು ಕುಱಿತು ತಱಿಸಲ್ಗೆ ಬುಧರ್ ॥ ೬೮ ॥

ಲಕ್ಷ್ಯಂ.

ವಿಲಸಿತಭವದಭ್ಯಾಗಮ
ಜಲಧಾರೆಗಳೇನುಮುಱಿಯದಂತು ಮದಂತ ।
ರ್ಮಲಮಂ ಕರ್ಚಿದೊಡಾನೀ
ನೆಲಕೆಲ್ಲಂ ಪಾವನೀಯಚರಿತನೆನಾದೆಂ ॥ ೬೯ ॥

ಸುಕುಮಾರಗುಣಲಕ್ಷಣಂ.

ಸುಕುಮಾರತರಾಕ್ಷರಪದ
ನಿಕರವಿಶಿಷ್ಟಪ್ರಯೋಗಗತಮಪ್ಪುದದಾ ।
ಸುಕುಮಾರಮೆಂಬುದಕ್ಕುಂ
ಪ್ರಕಟಿತಮುದಱಾ ಪ್ರಯೋಗವಿಶೂತೆಱನಕ್ಕುಂ ॥ ೭೦ ॥

ದಕ್ಷಿಣಮಾರ್ಗ ಸುಕುಮಾರಲಕ್ಷ್ಯಂ.

ಕಂ॥ ತೊಳಪೆಳವೆಱೆಯುಂ ಮೊರೆವಳಿ
ಕುಳಂಗಳುಂ ಮೆಲ್ಲನೆಸೆವ ಮಳಯಾನಿಳನುಂ ।
ಮುಳಿಸಂ ಕಲಿಲ್ಚಿ ಕಳೆದುವು
ಕಳಿಕಾಂಕುರಚೂತತತಿಗಳುಂ ಕಾಮಿಗಳಾ ॥ ೭೧ ॥

ಉತ್ತರಮಾರ್ಗ ಸುಕುಮಾರಲಕ್ಷ್ಯ ಲಕ್ಷಣಂ.

ಇದಱ ವಿಪರ್ಯಯವಿವಿಧಾ
ಸ್ಪದಾಕ್ಷರವಿಕಲ್ಪಮಿಂತಿದುತ್ತರಮಾರ್ಗಂ ।
ತ್ರಿದಶಾಧೀಶ್ವರಭೂತ್ಯ
ತ್ಯುದಾರವಿವಿಧಾರ್ಥವಿಭವನೀ ಭೂಪೇಂದ್ರಂ ॥ ೭೨ ॥

ಸಮಾಹಿತ ಗುಣಲಕ್ಷಣಂ

ಒಂದಱ ಮಾತುಗಳಂ ಪೆಱ
ತೊಂದಱೊಳೞದಿಟ್ಟು ಕೂಡೆ ಪೇೞ್ದೊಡದಕ್ಕುಂ ।
ಸುಂದರತರಂ ಸಮಾಹಿತ
ಮೆಂದುಂ ಮತ್ತದಱ ಲಕ್ಷ್ಯಮೊತೆಱನಕ್ಕುಂ ॥ ೭೩ ॥

ಲಕ್ಷ್ಯಂ.

ವಿನಿಮೀಳಿತಕುಮುದವನಂ
ಜನಿತೋನ್ಮೀಲಾರವಿಂದವನಲಕ್ಷ್ಮೀಶಂ ।
ದಿನಕರನುದಯಂಗೆಯ್ದಂ
ವಿನಿಹತತಿಮಿರಂ ವಿಶಿಷ್ಟಸಂಧ್ಯಾಶ್ಲೇಷಂ ॥ ೭೪ ॥

ಲಕ್ಷಣ ಸಮನ್ವಯಂ.

ವಿನಿಮೀಳಾದಿಗಳಿವು ಲೋ
ಚನಾದಿಧರ್ಮಂಗಳಿವನೆ ಕುಮುದಾದಿಗಳೊಳ್ ।
ನೆನೆದಿಂತು ಪೇೞ್ದೊಡಕ್ಕುಂ
ವಿನಿಶ್ಚಿತಕ್ರಮಸಮಾಹಿತಾಲಂಕಾರಂ ॥ ೭೫ ॥

ವಿನಿಮೀಲಾದಿಗಳ [illegible] ಪ್ರಯೋಗಲಕ್ಷ್ಯಂ.

ಕಂ॥ ವಿನಿಹತಸಮಸ್ತರಿಪುಕುಳ
ನನಿಮಿಷಲೋಚನದೆ ನೋಡಿ ನೀಡುಂ ಪ್ರಿಯೆಯಂ ।
ವಿನಿಮೀಳಿತಲೋಚನೆಯಂ
ಜನಪತಿ ನಿಜಬಾಹುಯುಗದಿನಾಶ್ಲೇಷಿಸಿದಂ ॥ ೭೬ ॥

ಉಪಸಂಹೃತಿ — ಪ್ರಸನ್ನಗುಣಲಕ್ಷಣಂ.

ಈ ಕುಱುಪುಗಳಿಂದಱಿವುದ
ನೇಕಸಮಾಹಿತ ಪದಪ್ರಯೋಗಾಂತರಮಂ ।
ಲೋಕಪ್ರತೀತಸುಭಗವಿ
ವೇಕಾಲಾಪಂ ಪ್ರಸನ್ನಮದುಮಿಂತಕ್ಕುಂ ॥ ೭೭ ॥

ಲಕ್ಷ್ಯಂ.

ಶರದಮಲಾಂಬರದೊಳ್ ಹಿಮ
ಕರನೆಸೆದತ್ತಿಂಬುದಾಪ್ರಸನ್ನಮಿದಕ್ಕುಂ ।
ಕರಮೊಪ್ಪಿತ್ತುಷ್ಣೇತರ
ಕಿರಣಂ ವರ್ಷಾಂತಸಮಯಜಳಧರಪಥದೊಳ್ ॥ ೭೮ ॥

ಉದಾರ ಗುಣಲಕ್ಷಣಂ.

ಮಿಗೆ ವಸ್ತುಗತಸ್ಥಿತಿಯಂ
ಬಗೆದಗ್ಗಳಮಾಗಿ ಪೇೞ್ದೊಡಕ್ಕುಮುದಾರಂ ।
ಬಗೆವೊಡೆ ಕಾವ್ಯದ ಪದವಿಯ
ನೆಗೞ್ತೆಗದು ಮೂಲಮದಱ ಪಾಂಗಿಂತಕ್ಕುಂ ॥ ೭೯ ॥

ಲಕ್ಷ್ಯಂ.

ಕಂ॥ ಪುರುಷೋತ್ತಮರಾರ್ ನಿನ್ನ
ನ್ನರುದಾರಾರಾತಿಸಮಿತಿಯಂ ಕೊಂದಿರ್ದುಂ ।
ಸುರಸುಂದರಿ ಲೀಲಾಲಸ
ಪರಿರಂಭಾರಂಭಸುರತಸುಖದೊಳ್ ನಿಲಿಪರ್ ॥ ೮೦ ॥

ಉಪಸಂಹೃತಿ — ಉತ್ತರವರ್ಗೋದಾರ ಗುಣಲಕ್ಷ್ಯಂ.

ಕಂ॥ ಇದು ದಾಕ್ಷಿಣಾತ್ಯಕವಿಮಾ
ರ್ಗದುದಾರಮುದೀಚ್ಯರುರುವಿಶೇಷಣಯುತಮ ।
ಪ್ಪುದನೊಲ್ದರಿಂತು ಹೇಮಾಂ
ಗದನೀಲಾಂಬುಜವಿಚಿತ್ರಚಿತ್ರಾಧಿಕಮಂ ॥ ೮೧ ॥

ಗ್ರಾಮ್ಯಾಳಾಪ ಲಕ್ಷಣಂ.

ಗೋಪಾಳಬಾಳಲಲನಾ
ಚಾಪಳವಾಚಾಳಕಿತವಬಾಹ್ಲೀಕಾದಿ ।
ವ್ಯಾಪಾರಂಗಳ್ ಗ್ರಾಮ್ಯಾ
ಳಾಪಂಗಳ್ ಮಾರ್ಗಯುಗಳಪರಿಹಾರ್ಯಂಗಳ್ ॥ ೮೨ ॥

ಲಕ್ಷ್ಯಂ.

ನೆನೆದಿರುಳುಂ ಪಗಲುಂ ನಿ
ನ್ನನೆ ಪೀನವೊಱಲ್ದು ಮಱುಗಿ ಕಾತರಿಸುತ್ತುಂ ।
ಮನದೊಳ್ ಸೈರಿಸಲಾಱೆಂ
ನಿನಗಿನಿಸುಂ ಕರುಣಮಿಲ್ಲ ಮರವಾನಿಸನೈ ॥ ೮೩ ॥

ಅಗ್ರಾಮ್ಯ ಗುಣಲಕ್ಷಣ ಲಕ್ಷ್ಯಂಗಳ್.

ಎಂದಿಂತೀ ಗ್ರಾಮ್ಯೋಕ್ತಿಯೊ
ಳೊಂದಾಗಿಸದದನೆ ಪೇೞ್ವುದಿಂತೀಸ್ಥಿತಿಯೊಳ್ ।
ಕಂದರ್ಪಂ ಚಲದೆನ್ನೊಳ್
ನಿಂದಂ ಮುನಿಸಿಲ್ಲ ನಿನ್ನೊಳಾತಂಗಿನಿಸುಂ ॥ ೮೪ ॥

ಓಜೋಗುಣಲಕ್ಷಣಂ.

ಸಮಱಿ ಸಮಾಸಪದಂಗಳ
ನಮರ್ದಿರೆ ಸಯ್ತಾಗಿ ಬಗೆದು ಪೇೞ್ದೊಡದಕ್ಕುಂ ।
ಕ್ರಮದೋಜೋಲಕ್ಷಣಮು
ತ್ತಮವಿದು ಗದ್ಯಕ್ಕಲಂಕ್ರಿಯಾ(ತ್ಕೃ)ಸಮೇತಂ ॥ ೮೫ ॥

ಕಂ॥ ಮಿಗೆ ಪದ್ಯದೊಳಂ ಗುಣಮಂ
ತಗುಳ್ಚುಗುಂ ಸಮಹಿತಪ್ರಯೋಗಾನುಗತಂ।
ಸೊಗಯಿಸುವಂತಿರೆ ಬಗೆದಿದ
ನಗಾಧಮನರಿಡುಗೆ ಕೃತಿಯೊಳೋಜೋಗುಣಮಂ ॥ ೮೬ ॥

ಕಾರಕಮಂ ಕ್ರಿಯೆಯುಮನಱ
ದೋರಂತಿರೆ ಮುಂ ತಗುಳ್ಚಿಮುಕ್ತಕಪದದೊಳ್।
ಸಾರಂ ಸಮಾಸಪದದು
ಚ್ಚಾರಣೆಯಂ ನೀಳ್ದು ನಿಲೆ ತಗುಳ್ಚುಗೆ ಕೃತಿಯೊಳ್ ॥ ೮೭ ॥

ಮೊದಲೊಳ್ ಸಮಾಸಪದಮುಮ
ನೊದವಿಸಿ ಪೇಳ್ದದಱ ತುದಿಯೊಳಸಮಾಸಪದಾ।
ಸ್ಪದಮಾಗಿ ನಿಱಿಸೆ ಕವ್ವಿನ
ತುದಿಯಂತಿರೆ ವಿರಸಮಕ್ಕುಮದು ತೊದಳುಂಟೇ ॥ ೮೮ ॥

ವಿರುದ್ಧಲಕ್ಷ್ಯಂ.

ಪರಮಾನುಭಾವಭಾಸುರ
ಸುರರಾಜೋಪಮಿತವಿವಿಧವಿಭವೋದಯನಂ।
ನರಪತಿಯಂ ಕಪಿಪ್ಪತನಾ
ಪರಿವೃತನಂ ಜಲಧಿತಟದೊಳಣುವಂ ಕಂಡಂ ॥ ೮೯ ॥

ಎಂದಿಂತು ಪೇಳ್ದ ಮಾಟಕ್ಕಿಯೊ
ಳೊಂದುವುದೋಜಸ್ವಿತಾಗುಣಂ ಕೈಕೊಳೆಯುಂ।
ಸುಂದರಮಾಗದು ಕವಿಸದ
ಮೆಂದುಂ ವ್ಯತ್ಯಯದಿನಿಡುವೊಡದು ಸುಕರತರಂ ॥ ೯೦ ॥

ಓಜೋಗುಣಲಕ್ಷ್ಯಂ.

ನರಪತಿಯಂ ಕಪಿಪೃತನಾ
ಪರಿವೃತನಂ ಜಳಧಿತಟದೊಳಣುವಂ ಕಂಡಂ।
ಪರಮಾನುಭಾವಭಾಸುರ
ಸುರರಾಜೋಪಮಿತವಿವಿಧವಿಭವೋದಯನಂ ॥ ೯೧ ॥

ವಿಶೇಷಣವಿಶೇಷ್ಯಪದಸಮಾಸವಿಚಾರಂ.

ಕಂ॥ ಬೆರಸಿರೆ ಸಮಾಸದೊಳ್ ಬಂ
ಧುರವಾಗದು ಕಾವ್ಯಬಂಧಮೆಂದುಂ ಕೃತಿಯೊಳ್ ।
ದೊರೆಕೊಳ್ವ ಪದವಿಶೇಷ್ಯಾಂ
ತರಮದಱಿಂ ವ್ಯಸ್ತಮಾಗಿ ಪೇೞ್ಗಿದನೆಂದುಂ ॥ ೯೨ ॥

ಪರಿದೆಯ್ದಿ ತಾಗಿದಂ ಭಾ
ಸುರತರರಘುಕುಲಲಲಾಮಲಕ್ಷ್ಮೀಧರನೊಳ್ ।
ಪರಿಕೋಪವಿಧೃತವಿಸ್ಫುರ
ದುರುರಕ್ತಕಠೋರನಯನಯು(ಗ)ದಶವದನಂ ॥ ೯೩ ॥

ಇಂತು ವಿಶೇಷ್ಯಂ ಕ್ರಿಯೆಯುಂ
ಸಂತಂ ನೋೞ್ಪುದಱಿನಕ್ಕುಮದು ಸಾಪೇಕ್ಷಂ ।
ಚಿಂತಿಸಿ ಸಮಾಸಮಂ ಪೇ
ೞ್ವಂತಪ್ಪ ಪದಂ ಸಮರ್ಥಮಲ್ತಪ್ಪುದಱಿಂ ॥ ೯೪ ॥

ಸಮನಿಸೆ ಸಾಪೇಕ್ಷಮುಮಾ
ಸಮಾಸಮುಂ ಪೆಱಗುಮೆಲ್ಲಿಯಾನುಂ ಗಮಕಂ ।
ಕ್ರಮಮದಱೊಳಿಲ್ಲಮೆನಲಿನಿ
ತು ಮಾರ್ಗದೊಳ್ ಸಮಱಗಿಂತು ಕವಿವೃಷಭರ್ಕಳ್ ॥ ೯೫ ॥

ಪರಿದೆಯ್ದಿ ತಾಗಿದಂ ಭಾ
ಸುರತರರಘುಕುಲಲಲಾಮನೊಳ್ ಲಕ್ಷ್ಮಣನೊಳ್ ।
ಪರಿಕೋಪವಶಭ್ರಮಣೋ
ದ್ಧುರರಕ್ತಕಠೋರಲೋಚನಂ ದಶವದನಂ ॥ ೯೬ ॥

ಉಪಸಂಹೃತಿ.

ಇಂತಿರೆ ಮಾರ್ಗದ್ವಿತಯಗ
ತಾಂತರಮಂ ಪೇೞ್ದೆನೆಲ್ಲಿಯುಂ ಕ್ಷೀರಗುಡಾ ।
ದ್ಯಂತರರಸಾಂತರಂ ಜಾ
ತ್ಯಂತರಮಪ್ಪಂತನಂತಮಂತರ್ಭೇದಂ ॥ ೯೭ ॥

ರಸಾನುರೂಪಗುಣವಿವೇಕಂ.

ಗೀತಿಗೆ॥ ಬಗೆದು ಮಾರ್ಗದ್ವಿತಯ ಗತಿಗಳಂ
ಪ್ರಗುಣಗುಣೋದಯರ್ಕಳ್ ವಿತರ್ಕದಿಂ ।
ಸೊಗಯಿಸುವಂತು ವಚನರಚನೆಯಿಂ
ನೆಗೞ್ದಿರೆ ಬೆರಸಿ ಪೇೞ್ಗೆ ರಸವಿಶೇಷದೊಳ್ ॥ ೯೮ ॥

ಉ॥ ವೀರರಸಂ ಸ್ಫುಟೋಕ್ತಿಯಿನುದಾರತಮಂ ಕರುಣಾರಸಂ ಮೃದೂ
ಚ್ಚಾರಣೆಯಿಂದಮದ್ಭುತರಸಂ ನಿಬಿಡೋಕ್ತಿಗಳಿಂದಮಲ್ತೆ ಶೃಂ ।
ಗಾರರಸಂ ಸಮಂತು ಸುಕುಮಾರತರೋಕ್ತಿಗಳಿಂ ಪ್ರಸನ್ನಗಂ
ಭೀರತರೋಕ್ತಿಯಿಂ ಪ್ರಕಟಮಕ್ಕೆ ರಸಂ ಸತತಂ ಪ್ರಶಾಂತದಿಂ ॥ ೯೯ ॥

ಉ॥ ಉತ್ಸವದಿಂದೆ ಹಾಸ್ಯರಸಮಾ ಮಧುರೋಕ್ತಿಗಳಿಂದಮಲ್ತೆ ಬೀ
ಭತ್ಸರಸಾಂತರಂ ಶಿಥಿಲಬಂಧನದಿಂ ಸತತಂ ಭಯಾನಕೋ ।
ದ್ಯತ್ಸುರಸಂ ಕರಂ ವಿಷಮಬಂಧನದಿಂ ನೃಪತುಂಗದೇವಮಾ
ರ್ಗೋತ್ಸವಮೂರ್ಜಿತೋಕ್ತಿಗಳಿನಕ್ಕುಂ ರೌದ್ರರಸಂ ರಸಾವಹಂ ॥ ೧೦೦ ॥

ಮಾತುಗಳಾವುವಾನುಮುಪವರ್ಣಿತಮಾರ್ಗಯುತಪ್ರಯೋಗಸಂ
ಜಾತವಿಭಾಗದಿಂ ನೆಗೞ್ವಿ ಕನ್ನಡದೊಳ್ ಗುಣಮಂ ತಗುಳ್ಚುಗುಂ ।
ನೀತಿನಿರಂತರಾನುಗತವೃತ್ತಿವಿಕಲ್ಪಿತಮಂ ತದೀಯನಿ
ರ್ರೀತಿಯನೀತೆಱೆತ್ತು ತೞಿಸಲ್ಗೆ ಬಂಧೋತ್ತಮರುಕ್ತಿಪೂರ್ವಕಂ ॥ ೧೦೧ ॥

ಉತ್ತರದಕ್ಷಿಣಮಾರ್ಗಾನುರೂಪಪದ ಪದಾರ್ಥವಿಚಾರಂ.

ನೋಡುವೆನಾಮಹೀಪತಿಯನರ್ಥಿಗಣಾರ್ಥಿತಕಲ್ಪವೃಕ್ಷನಂ
ಬೇಡುವೆನರ್ಥಸಂಚಯಮನೆಂಬುದಿದುತ್ತರಮಾರ್ಗವಾಚಕಂ ।
ನೀಡುಮುದಾತ್ತಚಾರುಗುಣನಂ ಮನದೊಳ್ ನೆಱೆ ನೋೞ್ಪಿನೞ್ತಿಯೊಳ್ ।
ಕೂಡಿರವೇೞ್ಪೆನೆಂಬುದಿದು ದಕ್ಷಿಣಮಾರ್ಗವಿಚಕ್ಷಣೋದಿತಂ ॥ ೧೦೨ ॥

ಸೂಡುವೆನೆಂಬುದಲ್ಲದಣಮಾಗದು ಸೂೞ್ಪಿನಮೋಘವೆಂಬುದುಂ
ಕೂಡುವೆನೆಂಬುದಲ್ಲದಿನಿಸಾವುದುಮಾಗದು ಕೂೞ್ಪೆನೆಂಬುದುಂ ।
ಕಾಡುವೆನೆಂಬುದಲ್ಲದೆ ಸುಮಾರ್ಗದೊಳಾಗದು ಕಾೞ್ಪೆನೆಂಬುದುಂ
ತೋಡುವೆನೆಂಬುದಲ್ಲದಿದಱಾಗದು ಕಿಕ್ಕುವತೋೞ್ಪೆನೆಂಬುದುಂ ॥ ೧೦೩ ॥

ಚಂ॥ ಬರಿಸುವೆನಿಂದು ನಂದನವನಾಂತರದಲ್ಲಿಗೆ ಕಾಂತನಂ ಸಮಂ
ತಿರಿಸುವೆನಂತನಂತಸುಖಸಂಗತಮಂಗಳಕಾರಣಂಗಳಂ ।
ತರಿಸುವೆನಾಂ ಮನೋನಯನವಲ್ಲಭನೊಳ್ ಮನದೊಂದಲಂಪಿನಿಂ
ನೆರವೆನವೋಘವೆಂಬುದಿದು ದಕ್ಷಿಣಮಾರ್ಗವಿಶೇಷಭಾಷಿತಂ ॥ ೧೦೪ ॥

ಚಂ॥ ಬರಿಪೆನವೋಘಮಿಂ ಸುಭವನಾಂತರದಲ್ಲಿಗೆ ನಲ್ಲನಂ ತಗು
ಳ್ದಿರಿಪೆನನಾರತಂ ಸುರತರಾಗನಿರೂಪಣಕಾರಣಂಗಳಂ ।
ತರಿಪೆನನಾಕುಳಂ ಮನದಲಂಪಿನೊಳಾ ಮದನೋಪಮಾನನೊಳ್
ನೆರವೆನಭಂಗದೆಂಬ ವಚನಂಗಳಿವುತ್ತರಮಾರ್ಗವರ್ತಿಗಳ್ ॥ ೧೦೫ ॥

ಅನುಪಮನಂ ಬರಿಪ್ಪೆನನುರಾಗದೆ ನಲ್ಲನನಿಂದು ಮಿಕ್ಕ ನಂ
ದನವನದಲ್ಲಿ [ಗಲ್ಲಿ]ಗೆ ತರಿಪ್ಪೆನನಂಗಸುಖೋಚಿತಂಗಳಾ ।
ನನುನಯದಿಂದಿರಿಪ್ಪೆನಿನಿತುಂ ಸುರತಾಸವಸೇವನಾಸನಾ
ತನಸುಖದಿಂದಿರಿಪ್ಪೆನನುರಾಗದಿನೆಂಬುದಿದುತ್ತರೋತ್ತರಂ ॥ ೧೦೬ ॥

ಪರಸುವೆನೆನ್ನದಾಂ ಪರಪೆನೆಂಬುದಿದಾಗದು ಚಿತ್ತನಾಥನೊಳ್
ಬೆರಸುವೆನೆನ್ನದಾಂ ಬೆರಪೆನೆಂಬುದಿದಾಗದು ಮಾರ್ಗಯುಗ್ಮದೊಳ್ ।
ನಿರತಿಶಯಾನುಭಾವಭವನಪ್ಪ ಮಹಾನೃಪತುಂಗದೇವನಾ
ದರದೊಳಿ ಪೇಳ್ದ ಮಾರ್ಗಗತಿಯಿಂ ತಱಿಸಲ್ಗಿದನಿಂತೆ ಕಬ್ಬಿಗರ್ ॥ ೧೦೭ ॥

ಮನದೊಳಗಾಗಳುಂ ನಿಱಿಸದಾಮುಳಿಸಂ ಗತರಾಗಮೋಹನೊ
ಯ್ಯನೆ ಮುನಿನಾಥನೆಂಬವಚನಾಂತರಮಿಂತಿದು ದಾಕ್ಷಿಣಾತ್ಯಕಂ ।
ಮನದೊಳಗಾಗಳುಂ ನಿಱಿಸದೊಯ್ಯನೆ ಮೋಹಮನಂತೆ ರಾಗಮಂ
ಮುನಿಸುಮನಲ್ಲದಂ ಮುನಿಪನೆಂಬುದಿದಕ್ಕುಮುದೀಚ್ಯವಾಚಕಂ ॥ ೧೦೮ ॥

ತ್ರಿದಶಗಣೇಶಮೌಳಿಮಣಿಪೀಠನಿಷೇವಿಗಳೊಳ್ ಮುನೀಂದ್ರನಾ
ಪದಯುಗಳಂಗಳೊಳ್ ಮುದದೆ ಬಾಗುವೆನೆಂಬುದು ದಕ್ಷಿಣಾಯನಂ ।
ವಿದಿತಸುರಾಧಿರಾಜಮುಗುಟಾಗ್ರಸಮರ್ಪಿತದೊಳ್ ಮುನೀಂದ್ರನಾ
ಪದಯುಗದೊಳ್ ಮನೋಮುದದೆ ಬಾಗುವೆನೆಂಬುದಿದುತ್ತರಾಯಣಂ ॥ ೧೦೯ ॥

ಉ॥ ವಿಳಸಿತಸಸ್ಯಸಂಪದಭಿರಾಮಗುಣೋದಯಿ ತಾಳ್ದಿದಳ್ ಧರಾ
ಳಳನೆ ವಿಶಾಲಲಕ್ಷ್ಮಿಯನನಾಕುಳಮೆಂಬುದು ದಕ್ಷಿಣಾಪಥಂ।
ಜಳನಿಧಿಮೇಖಳಾವಳಯಿತಾಂಗಿ ಕರಂ ಸೊಗಯಿಪ್ಪುದಾಯ್ತು ಭೂ
ಲಳನೆ ವಿಶಾಳಲಕ್ಷ್ಮಿಯಿನನಾಕುಳವೆಂಬುದಿದುತ್ತರಾಪಥಂ ॥ ೧೧೦ ॥

ಗೀತಿಗೆ॥ ನಿಕ್ಕುವ ಮಿಂತು ಮಾರ್ಗಯುಗದೊಳ್
ತಕ್ಕುದನಱಿಯೆ ಪೇೞ್ದೆನಿನಿಸೊಂದುದ್ದೇಶಮಂ।
ಮಿಕ್ಕಗುಣೋದಯರ್ ಕಳೆಯದೆಂತು ಸ
ಯ್ತುಕ್ಕುಮಂತಾಗೆ ಬಗೆದು ಪೇೞ್ಗೆ ಕಬ್ಬದೊಳ್ ॥ ೧೧೧ ॥

* [ಮಿಕ್ಕ ಶಬ್ದಾಲಂಕಾರಮಕ್ಕುಂ ದುಷ್ಕರಂ]

॥ ದುಷ್ಕರಮಪ್ಪ ಶಬ್ದಾಲಂಕಾರಂಗಳ ಪೆಸರ್ ॥

† ... ...।
... ...॥

[ಗೋಮೂತ್ರಿಕಂ ಸ] ಯಮಕಂ ಪ್ರೇಮದಿಂ ಗೋಪಿತಕ್ರಿಯಂ।
ಶ್ರೀಮದರ್ಥಭ್ರಮಂ ಚಕ್ರನಾಮಂ ಮುರಜಬಂಧಕಂ ॥ ೧೧೨ ॥

ಇವು ದುಷ್ಕರ ಕಾವ್ಯಂಗಳ್ (ಕ)ವಿಶೇಷವಿವರ್ತಿಗಳ್।
ಸುವಿಚಾರಿತಮೀತೋರ್ಪೆಮಿವ(ಱಾ) ಲಕ್ಷ್ಯಭೇದಮಂ ॥ ೧೧೩ ॥

ಗತಪ್ರತ್ಯಾಗತಲಕ್ಷಣ ಭೇದಂಗಳ್.

ಪದಪಾದ ಸಮಸ್ತಾರ್ದ್ಧ(ತದ)ಭೇದಚತುಷ್ಟಯಂ।
ವಿದಿತಾಲಂಕ್ರಿಯಾಧಾರಂ ಮೊದಲ್ ಪೇೞ್ದುದು ದುಷ್ಕರಂ ॥ ೧೧೪ ॥

* ಇದೊಂದು ಪದ್ಯಭಾಗವೆಂದು ತೋರುವುದು.

† ಇಲ್ಲಿ ಗ್ರಂಥಪಾತವಾಗಿದೆ. ಮುಂದೆ ಹೇಳಿರುವ ದುಷ್ಕರವಾದ ಶಬ್ದಾಲಂಕಾರಗಳ ಹೆಸರನ್ನು ಹೇಳುವ ಸಂದರ್ಭವಾದುದರಿಂದ:—

ಗತಪ್ರತ್ಯಾಗತಂ ಗೂಢಚತುರ್ಥಂ ದ್ವ್ಯಕ್ಷರಾದಿಕಂ।
ಅತಾಲವ್ಯಂ ನಿರೋಷ್ಠ್ಯಂ ಸರ್ವತೋಭದ್ರಂ ನಿರುತ್ತರಂ॥

ಎಂಬ ಪದ್ಯವಿರಬಹುದೆಂದು ಕಾಣುವುದು.

ಪದಗತಪ್ರತ್ಯಾಗತ.

*ಮುನ್ನಂ ತನ್ನಂ (ತಾನೆ)ತಾನೇ ಕೆನ್ನಂ ಕೆನ್ನಂ ನಿರಂತರಂ ।
ಭಿನ್ನಂ ಬಂದಿಪ್ಪನಂತಿನ್ನುಂ ತನ್ನಿಂ ತನಗವೇವಳೊ ॥ ೧೧೫ ॥

ಪಾದಗತಪ್ರತ್ಯಾಗತ.

[1] ಭಿಂನಂ ಕುಡುದಿದಕ್ಕೆಂ ಕೆಳಾದಾನಮಾನಳಿನಂ ।
ನಿಂನು ದಾತಾ ನಿಂತಳಿ ಜನಂಕನಾನದೆಸ ನೆದೇನದಾ ॥

[2] ಪೀನಂ ಕಾಡು ಮದಕ್ಕೇಂ ಕೇಳಾನವಾನಳಿನಂ ಮದಾ ।
ತಾನಿಂತಳಿಜನಂಕ...ನಾನದೇಸನೆ ದೇನನಾ ॥ ೧೧೬ ॥

ಸಮಸ್ತಗತಪ್ರತ್ಯಾಗತ.

ನಾದಭೇದನನಾ(ದಾನಾ) ನಾದಾನಾಮದನೋದನಾ ।
ನಾದನೋದಮನಾದಾನಾನಾದಾನಾನದಭೇದನಾ ॥ ೧೧೭ ॥

ಅರ್ಧಗತಪ್ರತ್ಯಾಗತ.

ನಾನಮಾನಮಸೇನಾಸೇಸೇನಾಸೇ ಮನಮಾನನಾ ।
ದೀನಮಾನಮನಾನಾದೀದೀನಾನಾಮನಮಾನದೀ ॥ ೧೧೮ ॥

ಉಪಸಂಹೃತಿ.

ಗತಪ್ರತ್ಯಾಗತೋಪಾತ್ತ ಚತುಷ್ಟಯವಿಕಲ್ಪ(ಮಿಂ) ।
ಪ್ರತೀತಿದೋರ್ಪೆನಾ ಗೂಢಚತುರ್ಥ[ಂ]ಗಳ ಲಕ್ಷ್ಯಮಂ ॥ ೧೧೯ ॥

ಗೂಢಚತುರ್ಥಂ.

ಘನಸ್ತನಿತಮುಂ ಕೇಕಿಸ್ವನಮುಂ ನೀರಧಾರೆಯುಂ ।
ಮನಂಬೆರ್ಚೆಕ್ಕು ಮಿಂತೆತ್ತಂ ಘನಮಿಂತು ಘನಸ್ತನಿ ॥ ೧೨೦ ॥

(ಇದು ಗೂಢಚತುರ್ಥಂ)

---

* ಪದಪಾದಗತಪ್ರತ್ಯಾಗತಲಕ್ಷ್ಯಪದ್ಯಗಳಲ್ಲಿ ವಿಶೇಷತಪ್ಪಿರುವಂತೆ ತೋರುವುದು.

1. ಮದ್ರಾಸ್ ಲೈಬ್ರರಿಯಲ್ಲಿಯ ಪುಸ್ತಕದ ಪಾಠ. 2. ಮುದ್ರಿತ ಪುಸ್ತಕದ ಪಾಠ. ಇವೆರಡೂ ಒಂದೇ ಪದ್ಯಗಳು. ಲೇಖಕದೋಷದಿಂದ ವಿಶೇಷವಾಗಿ ಭಿನ್ನವಾಗಿರುವಂತೆ ತೋರುವುವು.

ಏಕಾಕ್ಷರಂ.

ಗೀತಿಗೆ॥ ನಿಂನಿಂ ನಿಂನ್ನನೆನೆ[ೕ] ನಿನ್ನಾ (ನಂ)ನಾನಾನನನಂ [ನ]ನಂ।
ನಿಂನೆನಂನಂನನಾನಾನಾನಿಂನಿನೀನನನೂನನಂ ॥ ೧೨೧ ॥

ದ್ವ್ಯಕ್ಷರಂ.

ಮಾನಿನೀ ಮುಂನಮಾಂ ನೀನೆ ನೀನಾನಿಂನನುಮಾನಮೇಂ।
ಮಾನಮಾನಾನೆ ಮುಂನಂನ್ನೈ ಮಾನಮಾನನಮುಂನಿನಾ ॥ ೧೨೨ ॥
(ಇವು ಏಕಾಕ್ಷರದ್ವ್ಯಕ್ಷರಂಗಳ್)

ಅತಾಲವ್ಯಾದಿಗಳ್.

ಕಿಡಿಪಂ ಬಾರಗೇ ಮೆಯ್ಯ್ಂ ಕಿಡಿಪಂ ಕಿಡಿಸಂತೆ ಮುಂ।
ಕಿಡಿಪಂ ಪೋಕುಮೇ ತಾಮುಂ ಕಿಡಿಸಲ್ಪುಡಿಸೋಲಮೇ ॥ ೧೨೩ ॥

ಮಾರುತೀ ಪರವೋದಾರದಾರನೊಳ್ ಕೂಡು ನಲ್ಲನೊಳ್।
ಸಾರಕಾದಂಬಿನೀನಾಥನಾರೂಢಗುಣಧಾಮನೊಳ್ ॥ ೧೨೪ ॥
(ಇದು ಅತಾಲವ್ಯಂ)

ನರನಾಯಕನಂ ನಿಂದಾನಿರದೀಗಳೆ ಕಾಂತನಂ।
ನೆರದೇನದಱಿಂದಿಲ್ಲಾ ನೆರೆದಿದರ್ಗಾಗೆನಾಗೆನೇ ॥ ೧೨೫ ॥
(ಇದು ನಿರೋಷ್ಠ್ಯಂ)

ದೀನಾದೀನಾ ನಾನಿ ನಾದೀ ನಾನಿಂ ನಾನೆನೆನಾನಿನಾ
ದೀನಾದಾನಿನಿದಾನಾದೀ ನಾನೇನಿಂನ ನನಿನ್ನೆನಾ ॥ ೧೨೬ ॥
(ಇದು ಸರ್ವತೋಭದ್ರಂ)

ಪೆಱರಾವಂ ಧರಾಚಕ್ರಕ್ಕೆಱೆಯಂ ಕೆಳೆಯಪ್ಪವಂ।
ನೆಱೆಯಾರೆಸೆಯೆಂಬನ್ನಂ ಕುಱಿತಬ್ಧಿಗೆ ಬನ್ನಮಂ ॥ ೧೨೭ ॥
(ಇದು ನಿರುತ್ತರಂ)

ಜಲದಾಗಮದಿಂ ಚಿತ್ತಸ್ಖಲಿತಂ ಕೇಕಿನರ್ತನಂ।
[ಜಳದಾಗಮದಿಂ ಚಿತ್ತಸ್ಖಲಿತಂ ಕೇಕಿನರ್ತನಂ] ॥ ೧೨೮ ॥
(ಇದು ಗೋಮೂತ್ರಿಕೆ)

೩೦ ಯಮಕಚಕ್ರಂ.

ಗೀತಿಗೆ॥ ಯಮಕಂ (ಪ)ದಪಾದಾರ್ಧ ಸಮಶ್ಲೋ(ಕಾದಿ)ಗೋಚರಂ ।
ಪ್ರಮಿತಾದ್ಯಂತದೂಷ್ಯೋಪಕ್ರಮಾನೇಕಪ್ರಕಲ್ಪಿತಂ ॥ ೧೨೯ ॥

ತಾರಾ ಜಾನಕಿಯಂ ಪೋಗಿ ತಾರಾತರಳನೇತ್ರೆಯಂ ।
ತಾರಾಧಿಪತಿತೇಜಸ್ವಿ ತಾರಾದಿವಿಜಯೋದಯಾ ॥ ೧೩೦ ॥

ಕಟಿಪಂ ತಂದು ನಿಂಕಮಿಕ್ಕಟಿಪಂ ಕಳಿವಂ ಚಲ ।
ಕಟಿಪಂ ಕಂಜ ನೇತ್ರೇ ಕಟಿವಂ ಬಟಿಕಾತನಂ ॥ ೧೩೧ ॥

ದಾರುದಾರುಣನಂ ದಾನವಾರಿವಾರಿತಲೋಕನಂ ।
ಬಾರ ಬಾರಣಮಂ ನೋಡಾ ಸಾರಾಸಾರಾಂಬುದಾಭಮಂ ॥ ೧೩೨ ॥

ಸಾರಸಾರಸನಾದಾಮಸಾರಸಾರಾನಿತಂಬೆಯಂ ।
ತಾರಾತಾರಾತರಂಗಾಭಾಕಾರತಾರಮಣೀಯೆಯಂ ॥ ೧೩೩ ॥

ಅಜೇಯಂ ಪೋಲ್ಕುಮಾಮತ್ತಗಜಂ ವಾರಿಜನಾಭನಂ ।
ತ್ರಿಜಗನ್ಮಾದನಂ ಮತ್ತಂ ನಿಜನೀಳಘನಾಭನಂ ॥ ೧೩೪ ॥

ಲೋಕವೈದಿಕಸಾಮ್ಯೈಕ ಲೋಕನಾಕಾರಕಾರಕಾ ।
ನಾಕಿ ನೂತಪದವ್ಯಕ್ತಿ ಶ್ರೀಕಾಂತಾ ಕಾಮಕಾಮದಾ ॥ ೧೩೫ ॥

ವಾರಿ ವಾರಿಯೊಳಾದಾನಂ ವಾರಿವಾರಿ ವಿತರ್ಕಮಂ ।
ವಾರಿವಾರಿ ಜವೋದಾನಂ ವಾರಿವಾರಿಜನಾಭನೊಳ್ ॥ ೧೩೬ ॥

ವರವಾರನಾರಿಯೊಳ್ ನೆರೆದೆವಾನೆಲ್ಲಿ ನಿನಿದೆ
ಪರವಾರವಾರಿಯೊಳ್ ನೆರೆದೆನಾನೆಲ್ಲಿ ನೀಂ ।
ಪರದಂತರಿಪುದು ವರಿಂತರಿಯ ನೆಲ್ಲಂ
ಪುರಿದು ಮಾಱದೆ ಕಾಣದುತಿರಿಸುಂಗಡಿಯೊಳ್ ॥ ೧೩೭ ॥

(ಇದು ಸರ್ವಯಮಕಂ)

ತಿಳಿಗೊಳನಂ ಪೂಗೊಳವನದಂ ನೆಗಟಿ
ಮುಳಿದುಕೊಳ್ವ ಬಳಸೆ ನಾನದಂ ನೆ ।
ಗಳೆ ತಾನೆಡೆಮನಂಗಜನೆ ರಪ್ಪಲಾ
ಗದೆ ನಂಬವನದೊಪ್ಪುವಂ ವನೇಚರಮದಾ ॥ ೧೩೮ ॥

ನರದಾರಪರಾನೋನೇ ನರದಾರೇನರಾರಮಾ ।
ಅರಿದಯ್ತೆಂದವದಾರಿಕ್ಕುಂ ಪಱಿದಾನ ಪರಾಧಿಯೇ ॥ ೧೩೯ ॥
(ಇದು ಅರ್ಧಭ್ರಮಣಂ)

ವರದಾರಪರಾದಾನ್ಯಂ ಪರಿದಾನಪರಾದಮುಂ ।
ನೆರೆದೇವದಿರಾಜನ್ಯಂ ಪಱಿಗೋನರರಾದಮುಂ ॥ ೧೪೦ ॥
(ಇದು ಮುರಜಬಂಧಂ)

ಅರಸಿಯ ದಿವ್ಯಸೇನಾದರದಿರದೀಗಡೆ ನಿಂ ।
ನರಸಿಯನೆಯ್ದುವಿನಂ ಪಱಿಜನಮಂ ಕಳಿಪಿಂ ॥ ೧೪೧ ॥
(ಇದು ಕ್ರಿಯಾಗೋಪಕಂ)

ಸಂತಂ ಬಾೞ್ವುದು ವಿೞಿದಾನರಪನೊಳ್ ಸೌಜನ್ಯಲಕ್ಷ್ಮೀಮಧಾಂ
ಧಂ ತನ್ನಿಶ್ಚಯಮಚ್ಚಿನಿಂ ಪರಗುಣೌದಾರ್ಯಾಭಿಮಾನಂಗಳಿಂ ।
ಓಂತಂ ನೋಡದೆ ಪಾೞಿಗೆಟ್ಟೞಿಪಿನಿಂ ಬಾೞ್ವಂತೆ ಬಾೞ್ದಯ್ಯನಾ
ಸಂತಂ ತಾಂ ಪಸತಂದನೞ್ತಿ ಪೆಱುಗುಂ ದಾನಂಗಳುಂ ಭೂಪನಾ ॥ ೧೪೨ ॥
(ಇದು ಚಕ್ರಶ್ಲೋಕಂ)

ಹೇಳಿಕಾದಿಗಳ್.

ಗೀತಿಕೆ॥ ಅನುಗತಂ ಪೂರ್ವಕವಿಗಳ್
ನೆನೆದಿಂನುಂ ಪೇೞ್ದಂ ದುಷ್ಕರೋಕ್ತಿಯಂ ।
ನನುಗತಕ್ರಮದೆ ಬಗೆದು ಹೇಳಿಕೆಯೊ[ಳ್]
ಜನಿತವಿಭೇದಮುಮಂ ಪೇೞ್ವೆಂ ಕಿಱಿದಂ ॥ ೧೪೩ ॥

ಹೇಳಿಕೆಗಳ ಪೆಸರ್.

ಭಾವೆಯುಂ ನುಸುಳುಮಸ್ವಷ್ಟಾಕ್ಷರಮು
ಮಾವರ್ಣವ್ಯತ್ಯಯಮುಂ ಬಿಂದುಚ್ಯುತಿಯುಂ ।
ಭಾವಿಸಿ ದೊನ್ನ್ಯರ್ಡಿಯುಂ ವರ್ಣಚ್ಯುತಮುಂ
ಕೇವಲಮುವಱಿ ಭೇದಮುಂ ಸುಸಮಸ್ತಕಮುಂ ॥ ೧೪೪ ॥

ಸವಿಹಿತಮಪ್ಪ ಕರ್ಣಪೂರೋತ್ಪಲಮಂ
ಧವಳವಿಲೋಚನೆಯ ಗುಣಸುಂದರಮುಂ ।
ಕಿವಿವರಂ ನೀೞ್ದ ನಯನಯುಗದೊಳೊ
ಪ್ಪುವವಳಾನವಯುವದೇಕೆ ಕಳೆಯವೇೞ್ದಂ ಪ್ರಿಯೆಯಂ ॥ ೧೪೫ ॥
(ಇದು ಭಾವೆ)

ಗೀತಿಗೆ॥ ತಿರಿವುದದೊಂದು ಚಕ್ರದೊಳೆ ನಿಂದುದಿವಾ
ಕರನೆ ಮತ್ತಱಿದು ಕಳಿವೊಡಂತದ ನಾವೆಡೆಯಿಂ ।
ದರೆಯುಮೆಯೊರಿ ನೆಲಸಿ ಕೆಲಕಾಲದಿ
ಪೆರೆದಿರದೞಿದ ಬೞಿಕೆ ತಾ ನೆಲದೊಳ್ ॥ ೧೪೬ ॥

(ಇದು ನುಸುಳ್)

ನೆಟ್ಟನೆ ತಾಂ ಸವಿಯೊಳೊಂದಿರೆ ಭೋಜನಮಾ
ನಟ್ಟು ಬಡ್ಡಿಸು ನಾಮಱಿಯದೆನಸುಂ ಸವಿಯಂ ।
ಪುಟ್ಟದಾಱುಮಱಿಯದದಱ ಪೆಸರೊ
ಳುಟ್ಟುದಂ ಪೇೞಿ[3] ಕೇಳ್ದಱಿಯೆಂ ॥ ೧೪೭ ॥

(ಇದು ಅಸ್ಪಷ್ಟಾಕ್ಷರಂ)

ಆವನಾಮುಕತ್ವಕ್ಷ ಚಯಂ
ಕ್ರಾವನೊಚರಾಮಾಯ ದಷ್ಟಾಸಾಯದೆಗಳೊಳ್ ।
ಸೇವಿಸೆವಮಲಹೈವಸುಮುಕ್ತಿಮುಹಾ
ದೇವ ನಿನ್ನನ್ನನನಪ್ರೊನಸಹಾಯಗುಣಂ ॥ ೧೪೮ ॥

(ಇದು ವರ್ಣವ್ಯತ್ಯಯಂ)

ಸೊಗಯಿಸುಗು ಮಿಂದ್ರನೀಲಮಣಿಸನ್ನಿಭದೊಳ್
ಮಿಗೆ ಜಳನಿಧಿಯೊಳಗುದಿತದಿಂದಿರದವೊಲ್ ।
ನೆಗೆದತಿಧವಳಮೂರ್ತಿಗೆ ಘನವಳಯಸದಗ್ಧ
(ಗಗನ)ದೊಳುೞಿದುೞಿದು ವಿಶಾಲಿತಾಶಾವಳಯಂ ॥ ೧೪೯ ॥

(ಇದು ಬಿಂದುಚ್ಯುತಕಂ)

ಆವುದು ಬಾಗಿದುದುಮಧಿಕಂ ಬಸನಂ
ಕೇವಲಮಾಗೆ ನೆಗೆವುದುಚಿತಾವಯವಂ ।
ದೀವದಿಂ ನಿಂದು ಸಿತಗನಂ ನುಡಿದುವು
ಭಾವಿಸೆ ಬಗೆಗೊಳದಾರಕೊರ್ಣದಿಯಂ ॥ ೧೫೦ ॥

(ಇದು ವೊಳ್ನುಡಿ)

ತಳಮಳಗುತ್ತುಂ ಜನಿತನಿಜಭೀತಿ ಮನಂ
ಗೊಳೆ ಕಳವಳಿಸಿ ಚಲಿತ ನಿಲವಣ್ಮದೆಮೆ ।
ಕ್ಕಳವೊಳಗೆ ಸುೞಿದರರಸಂ ಮನ ೊಳ್
ಮುಳಿದಸಿಯುನೆ ನೋಡಿ ಪರಿವಾರದವರ್ ॥ ೧೫೧ ॥

(ಇದು ವರ್ಣಚ್ಯುತಕಂ)

ಗೀತಿಗೆ॥ ವಿಗಳಿತರಾಗನಾವೊ ನಿಂನಾ ವುದಜಿ
ಸೊಗಯಿಸುಗುಂ ಕಟಕತ್ವಮುಂ ಸಮರ್ಥಬಲಂ ।
ಬಗೆದೆನಗೊಯ್ಯನೆಸೆಗೆಯ್ದು ಒದಾ
ಲಗ (ಲ)ಲಾಟಸುಗು ಮದೆ ಪೇಟ್ದಿಂ ಬನದೊಳ್ ॥ ೧೫೨ ॥
(ಇದು ಸಮಂತಿ)

ಪುಷ್ಪಿತಾಗ್ರಾ॥ ಅತಿಶಯಧವಳೋ (ರ್ವಿಪ್ರೋಕ್ತ)ಮಾರ್ಗೋ
ಚಿತಗತಿಭಾವಿತಮಾರ್ಗಳಂಕ್ರಿಯಾರ್ಥಂ ।
ಚತುರಕವಿಜನಾನುಯಾತಸಾರ
ಸ್ವತಗುಣದೊಳ್ ಬಗೆವಂತೆ ಕೂಡಲಾರ್ಕುಂ ॥ ೧೫೩ ॥

ಮಾಲಿನೀ॥ ಬುಧಗುಣಗಣನಾತೀತಾಂತರಂ ಶಬ್ದ(ತ)ತ್ತ್ವಂ
ಬುಧಿವಿವಿಧವಿಧಾನಾಳಂಕ್ರಿಯಾವೀಥಿ ಮಾಳ ।
ವಿಧುರಗತಿ ವಿಲೋಢ್ಯಂ ತಳ್ತು ನಿಲ್ತಪ್ಪುದಾವಾ
ಗಧಿಪವಚನಮಾಲಾಪಾವನೀಯಂ ಗಭೀತಂ ॥ ೧೫೪ ॥

ಉ॥ ಭಾವಿಸಿ ಶಬ್ದತತ್ತ್ವ ಸಮಯಸ್ಥಿತಿಯಂ ಕುಱಿಕೊಂಡಶೇಷಭಾ
ಷಾವಿಷಯೋಕ್ತಿಯಂ ಬಗೆದು ನೋಡಿ ಪುರಾಣಕವಿಪ್ರಭುಪ್ರಯೋ ।
ಗಾವಿಲ ಸದ್ಗುಣೋದಯಮ ನಾಯ್ದು ವಱಿಂ ಸಮೆದೊಂದುಕಾವ್ಯದಿಂ
ಶ್ರೀವಿಜಯಪ್ರಭೂತಮುದಮಂ ತನಗಾಗಿಸಿದೊಂ ಕ[ವೀಶ್ವರಂ] ॥ ೧೫೫ ॥

ಗದ್ಯ

ಇದು

ಶ್ರೀ ಪರಮ ಶ್ರೀ ನೃಪತುಂಗ ದೇವಾನುಮತ

ಮಪ್ಪ

ಕ ವಿ ರಾ ಜ ಮಾ ರ್ಗ ದೊ ಳ್

ಶಬ್ದಾಲಂಕಾರವರ್ಣನನಿರ್ಣಯಂ.

॥ ದ್ವಿತೀಯ ಪರಿಚ್ಛೇದಂ ॥

॥ ಶ್ರೀ ॥

ತೃತೀಯ ಪರಿಚ್ಛೇದಂ

ಅರ್ಥಾಲಂಕಾರ ಪ್ರಕರಣಂ

ಕಂ॥ ಶ್ರೀವಿದಿತಾರ್ಥಾಲಂಕಾ
ರಾವಳಿಯಂ ವಿವಿಧಭೇದವಿಭವಾಸ್ಪದಮಂ ।
ಭಾವಿಸಿ ಬೆಸಸಿದನಖಿಳಧ
ರಾವಲ್ಲಭನಿಂತವೋಘವರ್ಷ ನೃಪೇಂದ್ರಂ ॥ ೧ ॥

ಅರ್ಥಾಲಂಕಾರ ನಾಮಂಗಳ್.

ವರಜಾತಿರೂಪಕಾರ್ಥಾಂ
ತರವಿನ್ಯಾಸಾತಿರೇಕಯಾಥಾಸಂಖ್ಯಾ ।
ಸ್ಥಿರದೀಪಕೋಪಮಾಬಂ
ಧುರಾತಿಶಯಸದೃಶಯೋಗಿತಾಕ್ಷೇಪಂಗಳ್ ॥ ೨ ॥

ಶ್ಲೇಷೋತ್ಪ್ರೇಕ್ಷಾಸೂಕ್ಷ್ಮವಿ
ಶೇಷಸಮಾಹಿತಸಮಾಸಪರ್ಯಾಯೋಕ್ತಾ ।
ನ್ವೇಷವಿರೋಧಾಪ್ರಸ್ತುತ
ಶೇಷನಿದರ್ಶನಸಹೋಕ್ತಿಸಂಕೀರ್ಣಂಗಳ್ ॥ ೩ ॥

ನುತಪರಿವೃತ್ತಿವ್ಯಾಜ
ಸ್ತುತಿಹೇತುವಿಭಾವನಾಲವೋದಾತ್ತಾಪ ।
ಹ್ನುತಿರಸವದೂರ್ಜಿತವ್ಯಾ
ವೃತಿಪ್ರಿಯತರಾಶಿಗಳ್ ಕ್ರಮಾದ್ಯುಕ್ತಂಗಳ್ ॥ ೪ ॥

ಕಂ॥ ವಿದಿತಾರ್ಥಾಲಂಕಾರಾ
ಸ್ಪದಭೇದಂಗಳ್ ಪುರಾಣ ಶಾಸ್ತ್ರೋಕ್ತಂಗಳ್ ।
ತದನುಮತಲಕ್ಷ್ಯಲಕ್ಷಣ
ನಿದರ್ಶನಂಗಳನನುಕ್ರಮೋಕ್ತಿಯೆ ಪೇೞ್ವೆಂ ॥ ೫ ॥

(೧) ಜಾತ್ಯಲಂಕಾರ ಲಕ್ಷಣಂ.

ಭಾವಿಸಿ ಸಮಸ್ತವಸ್ತುವಿ
ಭಾವಿತಜಾತಿಕ್ರಿಯಾಗುಣದ್ರವ್ಯಸ್ವಾ ।
ಭಾವಿಕಗುಣಮಂ ಪೇೞ್ವುದು
ಕೇವಲಮಾಜಾತಿಯೆಂಬ ಸದಳಂಕಾರಂ ॥ ೬ ॥

(ಜಾತಿ)

ಜಾತ್ಯಲಂಕಾರ ಲಕ್ಷ್ಯಂಗಳ್.

ಧವಳಾಪಾಂಗಂ ಕೇಕಾ
ರವಮುಖರಂ ಹರಿತಶಾಬಲಾಂಕಕಳಾಪಂ ।
ನವಿಲಾದಂ ಸೊಗಯಿಸುಗುಂ
ಸುವಿನೀಲಾಯತಗಳಂ ಪಯೋದಾಗಮದೊಳ್ ॥ ೭ ॥

(ಜಾತಿಸ್ವಭಾವಾಖ್ಯಾನಂ)

ಅರೆಮುಚ್ಚಿ ಕಣ್ಗಳಂ ವನ
ಕರಿ ಮೆಲ್ಲದೆ ಲಲಿತಸಲ್ಲಕೀಪಲ್ಲವಮಂ ।
ಸ್ಮರವಶದಿಂದಿರ್ದುದು ನಿಜ
ಕರೇಣುಪೇಚಕನಿರೂಪಿತಾಯತಹಸ್ತಂ ॥ ೮ ॥

(ಕ್ರಿಯಾಸ್ವಭಾವಾಖ್ಯಾನಂ)

ಆವಿಳನಮಂ ಕಣ್ಗಳೊ
ಳಾಮನದೊಳಗೊಸಗೆಯುಂ ಶರೀರದೊಳೆತ್ತಂ ।
ರೋಮಾಂಚಕಂಚುವಂ ಮದಿ
ರಾಮದವಾಗಿಸೆ ತೆಗಳ್ಪಿನಾಕೆಯ ನುಡಿಯೊಳ್ ॥ ೯ ॥

(ಗುಣಸ್ವಭಾವಾಖ್ಯಾನಂ)

ಕಂ॥ ತಳಮಿತಮಧ್ಯೆಯನಾಯತ
ವಿಳೋಳಲೋಚನೆಯನುನ್ನತಸ್ತನಯುಗೆಯಂ।
ಲಳಿತವಿಳಾಸಿನಿಯಂ ಕೋ
ಮಳಾಂಗಿಯಂ ಪೃಥುನಿತಂಬಬಿಂಬೆಯನುಱಿದಂ ॥ ೧೦ ॥

(ದ್ರವ್ಯಸ್ವಭಾವಾಖ್ಯಾನಂ)

ಉಪಸಂಹೃತಿ — ಅವತರಣಿಕೆ.

ಅತಿ(ಶಯ) ಧವಳಧರಾಧಿಪ
ಮತದಿಂ ಜಾತಿಯೆಂಬಳಂಕಾರಮನಿಂ।
ತತಿನಿಪುಣರಱಿಗೆ ತೋರ್ಪೆಂ
ಶ್ರುತಿಸುಭಗಮೆನಿಪ್ಪ ರೂಪಕಾಲಂಕೃತಿಯಂ ॥ ೧೧ ॥

(ಇಂತು ಜಾತ್ಯಲಂಕಾರಂ)

(೨) ರೂಪಕಸಾಮಾನ್ಯಲಕ್ಷಣ ಲಕ್ಷ್ಯಂಗಳ್.

ರೂಪಕಮೆಂಬುದು ಪೆಱವರ
ರೂಪಾದಿಗುಣಂಗಳಾನಭೇದೋಕ್ತಿಗಳಿಂ।
ರೂಪಿಸುವುದಿಂತು ಬಾಹುಲ
ತಾಪಾದಾಂಬುಜಮುಖೇಂದುನಯನಾಳಿಗಳಿಂ ॥ ೧೨ ॥

(ರೂಪಕಂ)

ರೂಪಕಭೇದ ಲಕ್ಷ್ಯಂಗಳ್.

ಸ್ಮಿತಕುಸುಮಮಧುರಪಲ್ಲವ
ಮತಿಶಯನಯನಾಳಿ ಬಾಹುಶಾಖಂ ಕಾಂತಾ।
ಲತೆ ಯೆಂದಿಂತು ಸಮಸ್ತಾ
ಶ್ರಿತಂ ಸಮಸ್ತಂ ಸಮಸ್ತರೂಪಕಮಕ್ಕುಂ ॥ ೧೩ ॥

(ಸಮಸ್ತರೂಪಕಂ)

ಕುಸುಮಂ ಸ್ಮಿತಮಳಿ ನಯನಂ
ಕಿಸಲಯಮಧರಂ ಭುಜದ್ವಯಂ ವಿಟಪಂ ಮ।
ತ್ತುಸುವಲ್ಲಭೆ ಲತೆಯೆಂಬುದಿ
ದಸಮಸ್ತಂ ವ್ಯಸ್ತರೂಪಕಕ್ರಮಮಖಿಲಂ ॥ ೧೪ ॥

(ವ್ಯಸ್ತರೂಪಕಂ)

ಕಂ॥ ಸ್ಫುರಿತಾಧರಪಲ್ಲವೆ ಬಂ
ಧುರಲೋಚನಕುಸುಮೆ ಲೋಲಭುಜಶಾಖೆ ಮನೋ।
ಹರೆ ಕಾಂತೆ ಯೆಂಬುದವಯವ
ನಿರೂಪಣಕ್ರಮದಿ ನವಯವಂ ರೂಪಕದೊಳ್ ॥ ೧೫ ॥
(ಸಾವಯವರೂಪಕಂ)

ತರಳತರಲೋಚನಂ ನಿ
ರ್ಭರರಾಗರಸಂ ಮುಖಾರವಿಂದಂ ನಿನ್ನಾ।
ದೊರೆಕೊಳಿಸಿದೊಸಗೆಯಂ ಬಂ
ಧುರಮೆಂಬುದಿದವಯವಿಕ್ರಮಂ ರೂಪಕದೊಳ್ ॥ ೧೬ ॥
(ಅವಯವಿರೂಪಕಂ)

ಮೃದುತರಕಪೋಲಫಲಕಂ
ವದನಾಂಬುಜಮಾಯತೋನ್ನತಭ್ರೂಚಾಪಂ।
ಮುದಮಂ ಪಡದತ್ತೆನಗೆಂ
ಬುದು ವಿಷಮಿತರೂಪವಿಷಮರೂಪಕಮಕ್ಕುಂ ॥ ೧೭ ॥
(ವಿಷಮರೂಪಕಂ)

ಜಿನಚರಣನಖಾದರ್ಶಂ
ವಿನತಾಮರರಾಜರಾಜವದನಪ್ರತಿಮಂ।
ಮನದೊಳ್ ಸಲೆ ನಿಲ್ಕೆಂಬುದು
ವಿನಿಶ್ಚಿತ ವಿಶೇಷಣೋರುರೂಪಕಮಕ್ಕುಂ ॥ ೧೮ ॥
(ವಿಶೇಷಣ ರೂಪಕಂ)

ಕಮಲಾಕರದೊಳ್ ಸಂಕೋ
ಚಮನಟಲಂ ಚಕ್ರವಾಕದೊಳ್ ಮಾಡದು ನಿ।
ನ್ನ ಮುಖೇಂದುಬಿಂಬಮಿಂದುಗೆ
ಸಮನೆಂಬುದು ಮಿಗೆ ವಿರುದ್ಧರೂಪಕಮಕ್ಕುಂ ॥ ೧೯ ॥
(ವಿರುದ್ಧರೂಪಕಂ)

ಕುಲಗಿರಿಯೈ ಗೌರವದಿಂ
ನೆಲನೈ ಸ್ಥೈರಣೆಯಿನಿಂದುವೈ ಕಾಂತಿಯಿನಾ।
ಜಲನಿಧಿಯೈ ಗುಣ್ಪಿಂದೆಂ
ದಲಸದೆ ಪೇೞ್ಗಿಂತು ಹೇತುರೂಪಕ ವಿಧಿಯಂ ॥ ೨೦ ॥
(ಹೇತುರೂಪಕಂ)

ಕಂ॥ ಕುಮುದಾನಂದನಕರವತಿ
ಕಮಲಾಕರರಾಗಹರಮುದಾರಂ ನಿನ್ನಾ ।
ವಿಮಳಯಶೋವಿಧುವೆಂಬುದು
ಕಮನೀಯಶ್ಲಿಷ್ಟರೂಪಕಾಲಂಕಾರಂ ॥ ೨೧ ॥

(ಶ್ಲಿಷ್ಟರೂಪಕಂ)

ಪರಿಚಿತಸನಾಭಿರಾಗಾಂ
ಕುರಜಲಸೇಚಂ ವಿರೋಧಿತರುದವದಹನಂ ।
ಪರವೋದಯರವಿಗಗನಂ
ಪರಾಕ್ರಮವದೆನೆ ವಿಭಿನ್ನರೂಪಕಮಕ್ಕುಂ ॥ ೨೨ ॥

(ವಿಭಿನ್ನರೂಪಕಂ)

ವದನಾಂಬುಜರಂಗದೊಳೇ
ಮುದಾಲಸಭ್ರೂಲತಾವಿಲಾಸಿನಿ ಲೀಲಾ ।
ಸ್ಪದನೃತ್ಯಮನಾಗಿಸಿದ
ಪ್ಪುದಿದೆಂಬುದು ರೂಪಕೋರುರೂಪಕಮಕ್ಕುಂ ॥ ೨೩ ॥

(ರೂಪಕರೂಪಕಂ)

ವದನಮಿದಲ್ತಂಬುರುಹಂ
ಮದಲೋಲವಿಲೋಚನಂಗಳಲ್ಲಮಿವಳಿಗಳ್ ।
ಮದಮಲ್ಲಿದು ವಿಕಸನಮೆಂ
ಬಿದನಿಂಬಿನೆ ಬಗೆಗೆ ರೂಪಕಾಪಹ್ನುತಿಯುಂ ॥ ೨೪ ॥

(ರೂಪಕಾಪಹ್ನುತಿ)

ಮೊಗಮೆಂಬಂಬುಜದಲರಾ
ನಗೆಯೆಂಬ ವಿಕಾಸವೊಪ್ಪುವದಱೊಳ್ ಸುೞಿಗುಂ ।
ಮಿಗೆ ಕಣ್ಗಳೆಂಬ ತುಂಬಿಗ
ಳೊಗೆದೊಸಗೆಯಿನೆನೆ ಸುಯುಕ್ತರೂಪಕಮಕ್ಕುಂ ॥ ೨೫ ॥

(ಯುಕ್ತರೂಪಕಂ)

ನಗೆಯೆಂಬ ನೆವದೆ ಬೆಳಗಿನ
ಮೊಗಮೆಂಬೀ ನೆವದೆ ತಿಂಗಳೊಳಗೆಸೆದಾದಂ ।
ಸೊಗಯಿಸಿ ತೋರ್ಕುಂ ಲೋಚನ
ಯುಗಮೆಂಬೀನೆವದೆ ಲಕ್ಷ್ಮಮೆನೆ ತದ್ವ್ಯಾಜಂ ॥ ೨೬ ॥

(ವ್ಯಾಜರೂಪಕಂ)

ಉಪಸಂಹೃತಿ — ಅವತರಣಿಕೆ.

ಕಂ॥ ವರರೂಪಕ ಭೇದಮನಿಂ
ತಿರೆ ಪೇಟ್ದಿಂ ಕಿಱಿದನುಱುದುದಂ ಲಕ್ಷ್ಯದೊಳಾ।
ದರದಱಿಗೆ ತೋರ್ಪೆನರ್ಥಾಂ
ತರವಿನ್ಯಾಸಕ್ಕೆ ಲಕ್ಷ್ಯಲಕ್ಷಣಯುಗಮಂ ॥ ೨೭ ॥

(ಇಂತು ರೂಪಕಂ)

(೩) ಅರ್ಥಾಂತರನ್ಯಾಸಾಲಂಕಾರಲಕ್ಷಣಂ.

ದೊರೆಕೊಳೆ ಪೇಟ್ದರ್ಥಮನಾ
ದರದಿಂ ಸಾಧಿಸಲೆ ವೇಡಿ ಪೆಱತೊಂದರ್ಥಾಂ।
ತರಮಂ ಪೇಟ್ವುದದರ್ಥಾಂ
ತರವಿನ್ಯಾಸಾಖ್ಯಮದಱಿದೀ ಭೇದಂಗಳ್ ॥ ೨೮ ॥

ಅರ್ಥಾಂತರನ್ಯಾಸಾಲಂಕಾರಭೇದಂಗಳ್.

ಸಕಲವ್ಯಾಪಿ, ವಿಶೇಷ
ಪ್ರಕಾಶಕಂ, ಯುಕ್ತಕಾರಿ, ಯುಕ್ತಾಯುಕ್ತಂ।
ಪ್ರಕಟಶ್ಲೇಷ, ವಿರುದ್ಧಾ
ತ್ಮಕಂ, ವಿರುದ್ಧಂ, ವಿಪರ್ಯಯಂ, ಯುಕ್ತಾರ್ಥಂ ॥ ೨೯ ॥

ಲಕ್ಷ್ಯಂಗಳ್.

ಸತತೋದಯನಪ್ರತಿಹತ
ಗತಿ ತೀವ್ರಂ ತದ್ದಿನಾಧಿನಾಥನುಮಸ್ತಂ।
ಗತನಾದನಂತೆ ನಿಯತ
ಪ್ರತೀತಿಯಂ ಕಳೆಯಲಕ್ಕುಮೇ ವ್ಯಾಪಕಮಂ ॥ ೩೦ ॥

(ವ್ಯಾಪಕಾರ್ಥಾಂತರನ್ಯಾಸಂ)
(ಸಕಲವ್ಯಾಪಿ)

ಸರಸಿಜಬಾಂಧವನಸ್ತಂ
ತರಗತನಾಗಿರೆ ಸರೋಜಿನೀವನಮಾದಂ।
ಕೊರಗುತ್ತೆ ಮುಗಿಗುಮೀಶ್ವರ
ವಿರಹದೆ ಶೋಕಾಕುಲಂ ವಿಶೇಷಾಪ್ತಜನಂ ॥ ೩೧ ॥

(ವಿಶೇಷಾರ್ಥಾಂತರನ್ಯಾಸಂ)
*
(ವಿಶೇಷಪ್ರಕಾಶಕಂ)

ಕಂ॥ ಮಲಯಾನಿಲನುಂ ಮಲಯಜ
ಜಲಮುಂ ಶಶಿಕಿರಣಮುಂ ವಿಯೋಗಿಗಳೆರ್ದೆಯೊಳ್ ।
ನೆಲಸಿರ್ದುವಟಲೆ ಪಾಪದ
ಫಲಮಾದುವು ಯುಕ್ತಕಾರಿ ಕಾಮುಕ ಜನದಾ ॥ ೩೨ ॥
(ಯುಕ್ತಕಾರ್ಯರ್ಥಾಂತರನ್ಯಾಸಂ)

ಹರಿಣಧರಂ ಸೊಗಯಿಸಿದಂ
ತಿರೆ ಕುಸುಮಿತಚೂತವಿತತಿ ಸೊಗಯಿಸಿತೆನಸುಂ ।
ಸುರಭಿ ಸುಮನಸ್ವಿ ದೋಷಾ
ಕರವಿಲಸಿತಮಪ್ಪುದಿಂತು ಯುಕ್ತಾಯುಕ್ತಂ ॥ ೩೩ ॥
(ಯುಕ್ತಾಯುಕ್ತಾರ್ಥಾಂತರನ್ಯಾಸಂ)

ದಿನನಾಯಕನಪರದಿಗಂ
ಗನೆಯೊಳ್ ನೆರೆದುದಿತರಾಗನಾದಂ ಪೀನಂ ।
ಜನಿಯಿಸುಗುಮಧಿಕರಾಗಮ
ನೆನಸುಮುಪಕ್ರಮದೆ ವಾರುಣೀಸಂಶ್ಲೇಷಂ ॥ ೩೪ ॥
(ಶ್ಲೇಷಾರ್ಥಾಂತರನ್ಯಾಸಂ)

ಸರಿದಧಿಪತಿಯಂ ದೋಷಾ
ಕರನಂತರ್ಮಲಿನನಾಗಿಯುಂ ಪೆರ್ಚಿಸುಗುಂ ।
ಪರಿಣತಕಲಾಕಲಾಪಂ
ಪರಿವರ್ಧಕನಕ್ಕುಮತಿವಿರುದ್ಧಾರ್ಥಕಮುಂ ॥ ೩೫ ॥
(ವಿರುದ್ಧಾರ್ಥಕಾರ್ಥಾಂತರನ್ಯಾಸಂ)

ಪರಿತಾಪಮನೆನಗೆ ನಿಶಾ
ಕರನಾಗಿಸುಗುಂ ವಸಂತಸಮಯಾನುಗತಂ ।
ಸುರಭಿಸಮಯೋದಿತಂ ಹಿಮ
ಕರನಬಲಂ ಪಡೆವನೆಂಬುದಿದು ವಿಪರೀತಂ ॥ ೩೬ ॥
(ವಿಪರೀತಾರ್ಥಾಂತರನ್ಯಾಸಂ)
[ವಿಪರ್ಯಯಾರ್ಥಾಂತರನ್ಯಾಸಂ]

ಉರಿಪಿತ್ತಶೋಕಪಲ್ಲವ
ವಿರಚಿತಶಯನೀಯಮೆನ್ನ ಮೆಯ್ಯಂ ಪೀನಂ ।
ಸ್ಫುರದನಲಪ್ರತಿನಿಧಿ ತ
ತ್ಸ್ವರೂಪಗುಣಮಕ್ಕುಮೆಂಬುದೆಂದುಂ ಯುಕ್ತಂ ॥ ೩೭ ॥
(ಯುಕ್ತಾರ್ಥಾಂತರನ್ಯಾಸಂ)
(ಇಂತು ಅರ್ಥಾಂತರನ್ಯಾಸಂ)

ಉಪಸಂಹೃತಿ — ಅವತರಣಿಕೆ.

ಕಂ॥ ಸಂತತಮಿಂತೆಸೆವಪ್ಪ
ರ್ಥಾಂತರವಿನ್ಯಾಸಭೇದಮಂ ಬಗೆಗೆ ಬುಧರ್ ।
ಮುಂತಣಲಕ್ಷಣಲಕ್ಷ್ಯಯು
ಗಾಂತರ್ಗತಭೇದಮಕ್ಕುಮಾವ್ಯತಿರೇಕಂ ॥ ೩೮ ॥

(೪) ವ್ಯತಿರೇಕಂ.

ಆದಿಪ್ರತೀತಿಯಂ ಶ
ಬ್ದಾ(ದ)ರದಿಂ ಸದೃಶಮಾದ ವಸ್ತುದ್ವಯದೊಳ್ ।
ಭೇದಮನಱಿಪುವುದುಚಿತಗು
ಣೋದಯಕೃತವಾಕ್ಯವಿಸ್ತರಂ ವ್ಯತಿರೇಕಂ ॥ ೩೯ ॥

ಲಕ್ಷ್ಯಂಗಳ್.

ಶ್ರೀವನಿತಾಪ್ರಸವದಿನಾ
ಲಾವಣ್ಯದಿನತಿಗಭೀರಭಾವದೆ ನೀನಿಂ ।
ತಾ ವಾರಿಧಿಯಂ ಪೋಲ್ತೈ
ಕೇವಲಭೇದಂ ದ್ವಿತೀಯಲಲಿತಾಕಾರಂ ॥ ೪೦ ॥

(ಏಕವ್ಯತಿರೇಕಂ)

ಪರಮೋದಯುರಿರ್ ಕಮಲಾ
ಕರಬೋಧಕರಿರ್ ದಿನೇಶನುಂ ನೀನುಂ ಭಾ ।
ಸ್ಕರನನಿಯತವೃತ್ತಕ್ರಮ
ನರಸಾ ನಿನ್ನಂತೆ ನಿಯತವೃತ್ತಸ್ಥಿತನೇ ॥ ೪೧ ॥

(ಉಭಯವ್ಯತಿರೇಕಂ)

ಪರಿಣತಗುಣರಿರ್ ಕಾಂತೋ
ತ್ಕರರಿರ್ ನಿಜಸೌಖ್ಯರಿರ್ ನಿಶಾನಾಯಕನುಂ ।
ನರಪಾ ನೀನುಂ ದೋಷಾ
ಕರನಾ ಶಶಿ ನೀನುದಾರಗುಣಸಮುದಯನೈ ॥ ೪೨ ।

ಕಂ॥ ಅಲಘುಭುಜನಾಗಿಯುಂ ನಿ
ಶ್ಚಲನಾಗಿಯುಮಖಿಳಭೂಭೃದುತ್ತುಂಗತೆಯೊಳ್ ।
ನೆಲಸಿಯುಮೆಯ್ದದು ನಿನ್ನಾ
ವಿಲಸಿತಮಂ ಮೇರು ಕಠಿನಭೋಗಾಧಾರಂ ॥ ೪೩ ॥

ಪಾರ್ಥಿವಗುಣಯುತಮಾಗಿಯು
ಮರ್ಥಿತಫಲದಾಯಿಯಾಗಿಯುಂ ನಿನ್ನೊಳ್ ತಾಂ ।
ವ್ಯರ್ಥತೆಯಂ ಪಡೆಗುಂ ಪರ
ಮಾರ್ಥವಚೇತನತೆಯಿಂದೆ ಕಲ್ಪಕುಜಾತಂ ॥ ೪೪ ॥

ಮದಮುದಿತಾಳಿಕದಂಬಂ
ಮೃದುವಿಳಸಿತಸರಸಕೇಸರಂ ಸರಸಿರುಹಂ ।
ವದನಮಿದು ಲೋಲ ಲೋಚನ
ಮುದಿತಂ ಸ್ಮಿತದಶನವಸನರಾಗೋಪಚಿತಂ ॥ ೪೫ ॥

ಶರದಂಬರಮುಂ ಮತ್ತೀ
ಸರವರಮುಂ ವಿಳಸದತನುಧವಳಚ್ಛವಿಗಳ್ ।
ಹರಿಣಾಂಕಾಲಂಕೃತಮಂ
ಬರಮಿಾಕೊಳಮುಚಿತರಾಜಹಂಸೋತ್ತಂಸಂ ॥ ೪೬ ॥

ಅಮದಾಲಸಲೋಚನಲೀ
ಲಮಪಾಸ್ತ ಭ್ರೂಲತಾವಿಲಾಸವಿಶೇಷಂ ।
ಕಮಲಮದುಪೋಲದೀ ನಿ
ನ್ನ ಮುಖಮನಿಂತೆತ್ತಮುಕ್ತಗುಣಭೂಷಣಮಂ ॥ ೪೭ ॥

ಅನಲನಸಾಧ್ಯಕಳಂಕಮು
ಮನನಿಳತಪನೀಯದೂಳಿಯಾನಜಲಕ್ಷ್ಮಾ ।
ಘನಮನನಾಕಲಶೋಷ್ಯಮ
ನನಿಯತಕರ್ದಮಮನಯಶವಮಂ ತೊಱೆಗೞ್ವಂ ॥ ೪೮ ॥

(ಇಂತು ವ್ಯತಿರೇಕಂ)

ಉಪಸಂಹೃತಿ — (೫) ಯಾಥಾಸಂಖ್ಯಾಲಂಕಾರ ಲಕ್ಷಣಂ.

ಕಂ॥ ವ್ಯತಿರೇಕ ವಿಕಲ್ಪಮನನು
ಗತಕ್ರಮವಿಶೇಷಗುಣಕೃತಾಂತಮನಱಿಗೀ ।
ಮತದಿಂ ಯಾಥಾಸಂಖ್ಯ
ಪ್ರತೀತಿಯಂ ತೋರ್ಪೆನನ್ವಿತಾನ(ನ್ವಿ)ತಮಂ ॥ ೪೯ ॥

ಲಕ್ಷ್ಯಂಗಳ್.

ಅಳಕಾನನನಯನಂಗಳಿ
ನಳಿನಳಿನೋತ್ಪಳವಿಳಾಸಮಂ ಗೆಲ್ದುದಱಿಂ ।
ಕಳಹಂಸಲೀಲಗಮನೇ
ಕೊಳನಂ ನೀಂ ಪೋಲ್ತೆಯೆಂಬುದನುಗತಮಕ್ಕುಂ ॥ ೫೦ ॥
(ಯಾಥಾಸಂಖ್ಯಾನುಗತಂ)

ನಳಿನೋತ್ಪಳಾಳಿರುಚಿಗಳ
ನಳಕವಿಳೋಚನಮುಖಂಗಳೀಟ್ಕುಳಿಗೊಳೆ ನೀಂ ।
ತಿಳಿಗೊಳನನೆ ಪೋಲ್ತುದುರ್ಗಂ
ತಿಳಿಯದುದೇಕೆಂಬುದಿಂತನನ್ವಯಮುದಱಿಕೊಳ್ ॥ ೫೧ ॥
(ಯಾಥಾಸಂಖ್ಯವ್ಯತಿರೇಕಂ)
[ಇಂತು ಯಾಥಾಸಂಖ್ಯಂ]

ಉಪಸಂಹೃತಿ — ಅವತರಣಿಕೆ.

ನಿಗದಿತ ಯಾಥಾಸಂಖ್ಯಾ
ನುಗತವ್ಯತಿರೇಕಯುಗಳಲಕ್ಷ್ಯಮಿವಕ್ಕುಂ ।
ಬಗೆದಾ ದೀಪಕದ ವಿಭಾ
ಗಗತಿಯನೀಭೇದಲಕ್ಷ್ಯಲಕ್ಷಣಯುಗದಿಂ ॥ ೫೨ ॥

(೬) ದೀಪಕಾಲಂಕಾರಲಕ್ಷಣಂ.

ಜಾತಿಕ್ರಿಯಾಗುಣದ್ರ
ವ್ಯಾತಿಶಯವಿಶೇಷಿಯಪ್ಪ ಪದಮೊರ್ಬುರ್ಳಿನಿಂ ।
ದೀತೆಱದಿನುೞಿದ ಕಾವ್ಯಸ
ಮೇತಿಗಮುಪಕಾರಯೋಗ್ಯದೀಪಕಮಕ್ಕುಂ ॥ ೫೩ ॥

ಲಕ್ಷ್ಯಂಗಳ್.

ಕಂ॥ ಮಲಯಾನಿಲನೊಯ್ಯನೆ ಪ
ಣ್ತೆಲೆಯಂ ನೆಲೆಯಿಂ ಕಳಲ್ಚುಗುಂ ವಿಟಪಿಗಳೊಳ್ ।
ವಿಲಸಿತಕಳಿಕಾಕುಳಕೋ
ಮಲಾಂಕುರಮನಂತೆ ಪಡೆಗುಮವಱಿಡೆಯಿಡೆಯೊಳ್ ॥ ೫೪ ॥
(ಜಾತ್ಯನುಗತಮಾದಿದೀಪಕಂ)

ಶಿರಿತರ್ಕರ್ಜಸುಮಳಜಳನಿಧಿ
ಪರಿಖಾವೃತಭೂಮಿಭಾಗಮಂ ಭರದೆ ಜಳಾ ।
ಕರವಿಕ್ಷೇಪಕಕಕುದಂ
ತರಮಂ ಸವಿಶೇಷರುಚಿರಸಂಭವವಿಧಿಯಂ ॥ ೫೫ ॥
(ಕ್ರಿಯಾನುಗತಮಾದಿದೀಪಕಂ)

ವಿಶದತರಮಾಯ್ತು ಗುಣಮಣಿ
ವಿಶೇಷಭೂಷಣದಿನೀ ತ್ವದೀಯಾಕಾರಂ ।
ಶಶಧರಕಿರಣಾಭಭವ
ದ್ಯಶೋವಿತಾನದಿನಶೇಷಮಾಶಾವಳಯಂ ॥ ೫೬ ॥
(ಗುಣಾನುಗತಮಾದಿದೀಪಕಂ)

ದಿವಸಕರನುದಯಗಿರಿಶಿಖ
ರವಿಶೇಷವಿಭೂಷಣಂ ತಮೋರಿಪುಬಳಮಂ ।
ಪ್ರವಿಲೀನಂಮಾಡಿದನವ
ಯವದೊಳ್ ತಾರಾವಿತಾನತೇಜಮನಱಿದಂ ॥ ೫೭ ॥
(ದ್ರವ್ಯಾನುಗತಮಾದಿದೀಪಕಂ)
[ಇಂತು ದೀಪಕಂ]

ಉಪಸಂಹೃತಿ.

ದೀಪಕಮಾಜಾತ್ಯಾದಿನಿ
ರೂಪಕಮಿಂತಕ್ಕುಮಾದಿಯೊಳ್ ಮಧ್ಯಾಂತ
ವ್ಯಾಪಕಮನದಂ ತಱಿಸ
ಲ್ಗೀಪೇಟ್ಟು ವಿಕಲ್ಪಲಕ್ಷ್ಯದೊಳ್ ಕವಿಮುಖ್ಯಂ ॥ ೫೮ ॥

(೭) ಉಪಮಾಲಂಕಾರಲಕ್ಷಣಂ.

ಕಂ॥ ನಾನಾವಸ್ತುವಿಭೇದಮ
ನೇನಾನುಂ ತೆಱದೆ ಪೋಲ್ಕೆ ಮಾಡುವುದುಪಮಾ।
ಮಾನಿತಸದಲಂಕಾರಮ
ನೂನವಿಕಲ್ಪಪ್ರಪಂಚಮೀತೆಱನದಱಾ ॥ ೫೯ ॥

ಲಕ್ಷ್ಯಂಗಳ್.

ವನರುಹದಂತೆ ಮುಖಂ ಲೋ
ಚನಮೆಸೆವುತ್ಪಳದವೋಲ್ ತಳಂ ತಳಿರಂತೆಂ।
ದನುರೂಪಮಾಗಿ ಪೇೞ್ವೊ
ಡೆನಸುಂ ವಸ್ತೂಪಮಾನ ಮೆಂಬುದು ಪೆಸರಿಂ ॥ ೬೦ ॥
(ವಸ್ತೂಪಮೆ)

ತಳಿರ್ಗಳವೋಲ್ ಮೆಲ್ಲಿದುವೀ
ತಳಂಗಳಳಿಕುಳದವೋಲ್ ವಿನೀಳಂಗಳ್ ನಿ।
ನ್ನಳಕಾಳಿಗಳೆಂಬುದನಾ
ಕುಳಮಿಲ್ಲದೆ ವಿಬುಧರಱಿಗೆ ಧರ್ಮೋಪಮೆಯಂ ॥ ೬೧ ॥
(ಧರ್ಮೋಪಮೆ)

ನಿನ್ನ ಮುಖದಂತೆ ಕಮಲಮಿ
ದುನ್ನಿದ್ರಂ ನಿನ್ನ ತಳದ ವೋಲಾರಕ್ತಂ।
ನಿನ್ನಯನೀಪಲ್ಲವಮೆನೆ
ಸನ್ನುತರೂಪಿಂ ವಿಪರ್ಯಯೋಪಮಮಕ್ಕುಂ ॥ ೬೨ ॥
(ವಿಪರ್ಯಯೋಪಮೆ)

ಕಮಳಮಿದು ನಿನ್ನ ಮುಖದಂ
ತೆ ಮುಖಮುಮೀ ಕಮಲದಂತೆ ನಿಕ್ಕುವಮೆಂದಿಂ।
ತಮರ್ದಿರೆ ಪೇೞ್ದುದನಱಿಗು
ತ್ತಮರನ್ಯೋನ್ಯೋಪಮಾನನಾಮಾಂಕಿತಮಂ ॥ ೬೩ ॥
(ಅನ್ಯೋನ್ಯೋಪಮೆ)

ಕಂ॥ ಸರಸಿಜದೊಳ್ ನಿನ್ನ ಮುಖಂ
ತರುಣೀ ಸದೃಶಂ ಸಮಂತು ಪೋಲದು ಪೆಱತಂ ।
ನಿರುತಮಿದೆಂಬುದು ನಿಯಮಾಂ
ತರಿತಂ ನಿಯಮೋಪಮಾ ವಿಕಲ್ಪಿತಭಾಗಂ ॥ ೬೪ ॥
(ನಿಯಮೋಪಮೆ)

ಕಮಳಮಿದನ್ನೆಗಮಿೞ ನಿ
ನ್ನ ಮುಖದೊಳೋರಂತೆ ಪೆಱದುಮಿದಱೊಳ್ ಸದೃಶಂ ।
ಸಮವಾಯಮುಳ್ಳೊಡೆಲ್ಲಂ
ಸಮನಿಸುಗಂತೆಂಬುದನಿಯಮೋಪಮೆಯಕ್ಕುಂ ॥ ೬೫ ॥
(ಅನಿಯಮೋಪಮೆ)

ವದನಂ ಮದೀಯಲೋಚನ
ಮುದಾವಹಂ ಕಮಲಮಳಿಕುಲೋತ್ಸವಜನಕಂ ।
ವಿದಿತವಿಭೇದಕ್ರಮಮಿಂ
ತಿದಲ್ಲದಿಲ್ಲೆಂಬುದತಿಶಯೋಪಮೆ ಸತತಂ ॥ ೬೬ ॥
(ಅತಿಶಯೋಪಮೆ)

ಈಕೆಯ ವದನಾಕಾರಮ
ನೇಕಾಂತಂ ಪೋಲ್ವೆನೆಂಬುದರ್ಕಾಗಿ ಕನ
ತ್ಕೋಕನದಕ್ಕಿಂದುಗಮುಂ
ಟಾಕಾಂಕ್ಷಣಮದಱೊಳೆಂಬುದುಪಮೋತ್ಪ್ರೇಕ್ಷಂ ॥ ೬೭ ॥
(ಉಪಮೋತ್ಪ್ರೇಕ್ಷೆ)

ಕಮಳಂ ಲಲಿತಭ್ರೂವಿ
ಭ್ರಮಮಂ ವಿಲಸಿತವಿಲೋಲಲೋಚನಯುಗಮಂ ।
ಸಮವಾಯಮುಳ್ಳೊಡದು ನಿ
ನ್ನ ಮೊಗಕ್ಕೆಣೆಯೆಂಬುದದ್ಭುತೋಪಮೆ ನಿಯತಂ ॥ ೬೮ ॥
(ಅದ್ಭುತೋಪಮೆ)

ಕಮಳಮಮೋಹದಿನೀ ನಿ
ನ್ನ ಮೊಗಕ್ಕೆಱಗುವುದು ತೊಱೆವುದಾ ಸರಸಿಜಮಂ ।
ಭ್ರಮರಂ ವದನಮಿದಲ್ತೆಂ
ದು ಮೋಹದಿಂದೆಂಬುದಿದುವೆ ಮೋಹೋಪಮಿತಂ ॥ ೬೯ ॥
(ಮೋಹೋಪಮೆ)

ಕಂ॥ ಸರಸಿಜಮೋ ಮೊಗಮೋ ಮೇಣ್
ದ್ವಿರೇಫಮೋ ಲೋಲನಯನಯುಗಮೋ ಮನದೊಳ್ ।
ಪಿರಿದುಂ ಸಂಶಯಮೆಂಬುದು
ನಿರಂತರಂ ಸಂಶಯೋಪಮಾಲಂಕಾರಂ ॥ ೭೦ ॥

(ಸಂಶಯೋಪಮೆ)

ಸರಸಿರುಹಮಿಂದುದೀಧಿತಿ
ಪರಾಜಿತಶ್ರೀವಿಲಾಸಮಿೞ ನಿನ್ನ ಮುಖಂ ।
ಹರಿಣಧರವಿಜಯಶೋಭಾ
ಕರಮೆಂಬುದಿದೂರ್ಜಿತೋಪಮಾನವಿಭಾಗಂ ॥ ೭೧ ॥

(ಊರ್ಜಿತೋಪಮೆ)

ಪರಮಶ್ರೀನಿಳಯಂ ಶಶ
ಧರಕಾಂತಿವಿರೋಧಿರೋಚಿ ವದನಂ ನಿನ್ನಾ ।
ಸರಸಿರುಹದವೋಲೆಂಬುದು
ನಿರುತಂ ಶ್ಲೇಷೋಪಮಾ ವಿಕಲ್ಪವಿಶೇಷಂ ॥ ೭೨ ॥

(ಶ್ಲೇಷೋಪಮೆ)

ಸರಜಂ ಸರಸೀಜಂ ಶಶ
ಧರಬಿಂಬಮುದತಿಕಳಂಕಿತಂ ನಿನ್ನಮೊಗಂ ।
ನಿರುಪಮಮಾಗಿಯುಮಿದರೊಳ್
ದೊರೆಯೆಂಬುದನಱುದುಕೊಳ್ಗೆ ನಿಂದೋಪಮೆಯಂ ॥ ೭೩ ॥

(ನಿಂದೋಪಮೆ)

ಅಮೃತಭವಂ ಶಿಶಿರಕರಂ
ಕಮಲಂ ಜಗದೇಕಪಾವನೀಯಶ್ರೀಕಂ ।
ಸಮನವಱೊಳ್ ನಿನ್ನ ಮುಖಂ
ಕ್ರಮದೆಂಬುದನಱುವುದಾ ಪ್ರಶಂಸೋಪಮೆಯಂ ॥ ೭೪ ॥

(ಪ್ರಶಂಸೋಪಮೆ)

ಶರದುದಿತಶಿಶಿರಕರನುಂ
ಸರಸಿರುಹಮುಮಿೞ್ತ್ವದೀಯವದನಮುಮಿನಿತುಂ ।
ದೊರೆಕೊಳಿಸುವೊಡೆ ಪರಸ್ಪರ
ವಿರೋಧಿಗಳ್ ನಿರುತಮೆನೆ ವಿರೋಧೋಪಮಿತಂ ॥ ೭೫ ॥

(ವಿರೋಧೋಪಮೆ)

ಕಂ॥ ಅಳಿಗಳಿವು ಕಣ್ಗಳಲ್ತಿವು
ನಳಿನವಿ(ದುಂ) ವದನಮಲ್ತು ನಿಜಕಾಮಿನಿಯಾ ।
ತಿಳಿದಿಂತು ಪೇಟ್ಟೊಡಿದು ನೊ
ಕ್ಕಳಮುಪಮಾಖ್ಯಾತಮಪ್ಪ ತತ್ವಾಖ್ಯಾತಂ ॥ ೭೬ ॥

(ತತ್ವಾಖ್ಯಾನೋಪಮೆ)

ಹರಿಣಧರಸರಸಿಜಂಗಳ್
ದೊರೆಯಲ್ತುವು ತನಗೆ ತಾನೆ ದೊರೆ ನಿನ್ನವೊಗಂ ।
ನಿರುಪಮವೆಂಬುದನಱಿವುದು
ನಿರುತಮಸಾಧಾರಣೋಪಮೋದಯವಿಧಿಯಂ ॥ ೭೭ ॥

(ಅಸಾಧಾರಣೋಪಮೆ)

ನುತಶಿಶಿರಕಿರಣಕಾಂತಿ
ಪ್ರತತಿಯನೊಡಗೂಡಿ ಮಾಡಿದವೊಲಾಯಿತ್ತಿಂ ।
ತತಿಶಯಮಿಾ ನಿನ್ನ ಮುಖಂ
ನಿತಾಂತವೆಂಬಾಗಳಱಿಗಭೂತೋಪಮೆಯಂ ॥ ೭೮ ॥

(ಅಭೂತೋಪಮೆ)

ಹರಿಣಧರನೊಳ್ ವಿಷಂ ಮಲ
ಯರುಹದೊಳನಲಾರ್ಚಿ ನಿನ್ನ ವದನೋದರದೊಳ್ ।
ಪರುಷತರವಚನಮುಪ್ಪುದು
ದುರವಾಪಮಿದಿಂತಸಂಭವೋಪಮಮಕ್ಕುಂ ॥ ೭೯ ॥

(ಅಸಂಭವೋಪಮೆ)

ಮಲಯರುಹಶಿಶಿರಕರಶೀ
ತಲಿಕಾಕರಕೇಂದುಕಾಂತಜಲಶೀತಲಮಿಾ ।
ಲಲನಾಲಿಂಗನ ಸುಖಕರ
ವಿಲಾಸವೆಂಬುದು ಬಹೂಪಮಾನವಿಕಲ್ಪಂ ॥ ೮೦ ॥

(ಬಹೂಪಮೆ)

ಕಂ॥ [1]ವಿನಯದೊಳಱಿವಿನ ಪೋಲಱಿ
ವಿನಬ. ನೊಳುಪಶಮದವೋಲ್ ? ಗುಣದವೊಲಾದಱಿವಂ ।
ಗುಣದೊಳ್ ಸಿರಿಯೊಳ್...
ತನಗೆನೆ ಮಾಲೋಪಮಾನ ಭೇದವಿಕಲ್ಪಂ ॥ ೮೧ ॥
(ಮಾಲೋಪಮಾಭೇದಂ)

ಜನಿತಪ್ರಗಲ್ಭದೊಳ್ ಮಾಂ
ತನದೊಳ್ ಮಾಹಾತ್ಮ್ಯದೊಳ್ ನಿಜೋದಾರತೆಯೊಳ್।
ಅನುಪಮಗುಣದೊಳ್ ಶ್ರೀಶಂ
ಘನಮೆನೆ ಮಾಲೋಪಮಾನ ಭೇದಮಿದಕ್ಕುಂ ॥ ೮೨ ॥
(ಮಾಲೋಪಮಾಭೇದಂ)

ಭವದೀಯವದನಮಾಲೋ
ಲವಿಲೋಚನಮುದಿತರಾಗಮಣಿವಿಲಸಿತಮಂ ।
ಪ್ರವಿಕಸಿತಾಂಬುಜವನಮಂ
ಸವಿಶೇಷಂ ಪೋಲ್ಗುಮೆಂಗೆ ವಾಕ್ಯೋಪಮೆಯಂ ॥ ೮೩ ॥
(ವಾಕ್ಯೋಪಮೆ)

ವಿಪರೀತಂ ತರುತತಿವೋ
ಲಪರಾಗಂ ಶುದ್ಧಭೂಮಿವೋಲ್ ಪದ್ಮಿನಿವೋ ।
ಲುಪಗತವಿಭ್ರಮರಹಿತಂ
ಕುಪಿತಾಕೃತಿಯೆಂಬುದುಪಮೆ ಸಂಧಾನಾಂಕಂ ॥ ೮೪ ॥
(ಸಂಧಾನೋಪಮೆ)

ಪ್ರತಿವಸ್ತೂಪಮಿ ತಾಲಂ
ಕೃತಮಿಂತಕ್ಕುಂ ಧರಾಧಿಪಾ ನಿನ್ನನ್ನಂ ।
ವಿತತಯಶನಿಲಯತಾರಾ
ತತಿ ದಿನಕರಸದೃಶತೇಜಮೆಂಬುದುಮುಂಟೇ ॥ ೮೫ ॥
(ಪ್ರತಿವಸ್ತೂಪಮೆ)

---

1. ಇದು ಮದ್ರಾಸ್ ಪುಸ್ತಕಭಂಡಾರದಲ್ಲಿರುವ ಪ್ರತಿಯಲ್ಲಿ ಮಾತ್ರವಿದೆ. ಛಂದಸ್ಸು ತಪ್ಪಾಗಿದೆ. [illegible]ನೆಯ ಪದ್ಯವಾದ ಮೇಲಿರಬಹುದು.

ಕಂ॥ ಸುರಗಿರಿವೋಲ್ ಧೈರ್ಯದಿನಂ
ಬರಮಣಿವೋಲ್ ತೇಜದಿಂ ಶಶಾಂಕಂಬೋಲ್ ಬಂ।
ಧುರಕಾಂತಿಗುಣದಿನೆಂದಿಂ
ತಿರೆ ಪೇೞ್ವುದನಱಿಮುಕೊಳ್ಗೆ ಹೇತೂಪಮೆಯಂ ॥ ೮೬ ॥
(ಹೇತೂಪಮೆ)

ಉಪಮಾಗುಣ ದೋಷಂಗಳ್.

ಹೀನಾಧಿಕಗುಣದೋಷ ವಿ
ತಾನಮುಮಂ ಲಿಂಗವಚನಭೇದಂಗಳುಮಂ।
ಮಾನಧನರಱಿದು ಪೇೞ್ಗನು
ಮಾನಕ್ಕವಿರುದ್ಧಮಾಗೆ ಲಕ್ಷ್ಯಗಮದೊಳ್ ॥ ೮೭ ॥

ಹೀನಾಧಿಕಪ್ರಶಂಸಾಗುಣಕ್ಕೆ ಲಕ್ಷ್ಯಂ.

ನಿನ್ನಂತೆ ಸುರೇಶ್ವರನು
ತ್ಪನ್ನಮಹೈಶ್ವರ್ಯನೆಂಬುದುಂ ಜಲನಿಧಿ ತಾಂ।
ಸನ್ನುತಗಭೀರನೆಂಬುದು
ಮಿನ್ನದು ಹೀನಾಧಿಕಪ್ರಶಂಸಾನುಗುಣಂ ॥ ೮೮ ॥
(ಹೀನಾಧಿಕಪ್ರಶಂಸಾಗುಣಂ)

ಹೀನಾಧಿಕಪ್ರಶಂಸಾದೋಷಕ್ಕೆ ಲಕ್ಷ್ಯಂ.

ಕೊಳದಂತಂಬರಮತಿನಿ
ರ್ಮಳಮಿೂತಂ ಸ್ವಾಮಿಭಕ್ತನೆಂದುಂ ನಾಯ್ವೋ।
ಲಿಳೆಯಂ ಕರಮೆಂಬುದಿದ
ಗ್ಗಳಮಾಹೀನಾಧಿಕ ಪ್ರಶಂಸಾದೋಷಂ ॥ ೮೯ ॥
(ಹೀನಾಧಿಕಪ್ರಶಂಸಾದೋಷಂ)

ಲಿಂಗವಚನಭೇದದೋಷಕ್ಕೆ.

ಪುರುಷಂಬೋಲೀಕೆ ಕರಂ
ಪುರುಷಾಕೃತಿಯೆಂಬುದಿಂತು ನಾನಾಲಿಂಗಂ।
ನಿರುತಂ ಪ್ರಾಣಂಗಳವೋಲ್
ನೆರಪಂ ಪ್ರಿಯನೆಂಬುದಿಂತು ನಾನಾವಚನಂ ॥ ೯೦ ॥
(ಇಂತುಪಮಾಲಂಕಾರಂ)

ಉಪಸಂಹೃತಿ — ಅವತರಣಿಕೆ.

ಕಂ॥ ಇಂತುಪಮಾಕ್ರಮಮನಪ
ರ್ಯಂತಂ ಗುಣಗಣಮನಱಿದು ಪೇೞ್ಗೆ ಕವೀಶರ್ ।
ಸಂತತಮಿಂತಕ್ಕುಂ ಕಾಂ
ತಾಂತಿಕಮತಿಶಯದ ಲಕ್ಷ್ಯಲಕ್ಷಣಯುಗದಿಂ ॥ ೯೧ ॥

(೮) ಅತಿಶಯೋಕ್ತ್ಯಲಂಕಾರ ಲಕ್ಷಣಂ.

ಮೇರೆಗಳೆದಿರೆ ವಿಶೇಷವಿ
ಚಾರವ ನಧಿಕೋಕ್ತಿಗಳೊಳ್ ತಗುಳ್ಚುವುದಕ್ಕುಂ ।
ಸಾರತರಮತಿಶಯಾಲಂ
ಕಾರಂ ಮತ್ತದಱ ಲಕ್ಷ್ಯವಿಶೇಷನೇದುಂ ॥ ೯೨ ॥

ಲಕ್ಷ್ಯಂಗಳ್.

ಗೈರಿಕರಸಾರ್ದ್ರಮಂ ಸಿಂ
ಧೂರದೆ ತಲೆವಱಿದುದಂ ಕರಂ ಕಂಡಾಂ ಸಂ ।
ಧ್ಯಾರಾಗದೊಳಱಿಯದೆ ಮದ
ವಾರಣಮಂ ಸೋಂಕಿ ಕೆಲದೊಳೊಯ್ಯನೆ ಪೋದೆಂ ॥ ೯೩ ॥

ಮಲಯಜಚರ್ಚಿತೆಯಂ ಕೇ
ವಲಧವಳಾಭರಣೆಯಂ ದುಕೂಲಾಂಬರೆಯಂ ।
ಕೆಲದೊಳ್ ನಿಲೆಯುಂ ಜ್ಯೋತ್ಸ್ನಾ
ವಿಲಾಸದೊಳ್ ಒಗೆದನಿಲ್ಲ ನಲ್ಲಳನಿನಿಸಂ ॥ ೯೪ ॥

ಆಶಾವಳಯಿತಲೋಕಾ
ಕಾಶಮಿದೇನತಿವಿಶಾಲಮೋ ನಿನ್ನ ಯಶೋ ।
ರಾಶಿಯುಸಿಂದುದ್ಯುತಿಯು ನಿ
ಕಾಶಮನೊಳ್ಕೊಳ್ಗುಮಳವಿಗಱಿದಿರ್ದುದುಮಂ ॥ ೯೫ ॥

[ಇಂತತಿಶಯೋಕ್ತ್ಯಲಂಕಾರಂ]

(೯) ಸದೃಶಯೋಗಿತಾಲಂಕಾರ ಲಕ್ಷಣಂ.

ಕಂ॥ ಸ್ತುತಿನಿಂದೆಗಳಿಂ ಸವಿವ
ಕ್ಷಿತಗುಣದೊಳ್ ಸದೃಶವಾಗಿ ಪೇೞ್ವುದು ಪೆಱತಂ।
ನುತಸದೃಶಯೋಗಿತಾಲಂ
ಕೃತಿಲಕ್ಷಣಮಕ್ಕುಮಿಂತು ತದುದಾಹರಣಂ ॥ ೯೬ ॥

ಲಕ್ಷ್ಯಂಗಳ್.

ಅಮರಾಧಿರಾಜಹುತವಹ
ಯಮನೈಋತವರುಣವಾಯುಯಕ್ಷೇಶಾನ।
ಕ್ರಮದಿನವರೆಣ್ಬರಂತು
ತ್ತಮನೈ ನೀಂ ನವಮಲೋಕಪಾಲನೆ ಅವರೊಳ್ ॥ ೯೭ ॥

ಜಲದದ ನೆೞಲುಂ ಪರಮುಂ
ವಿಲಾಸಮುಂ ಬೆಳಗುವುದಿತವಿದ್ಯುಲ್ಲತೆಯುಂ।
ನೆಲಸವು ಚಲಂಗಳಾದಂ
ವಿಲಾಸಿನೀಜನದ ನಲ್ಮೆಯುಂ ಸಂಗಮಮುಂ ॥ ೯೮ ॥

ಉಪಸಂಹೃತಿ.

ಉಪಮಿತಭೇದೋಕ್ತಿಕ್ರಮ
ಮುಪರಿಮಿತಾಖ್ಯಾಕೃತಿ ಪ್ರಯೋಗಾನುಗತಂ।
ನೃಪತುಂಗದೇವಮತದಿಂ
ದುಪಮಾಭೇದಂಗಳಿಂದೆ ತಱಸಲ್ಗಱಿವಂ ॥ ೯೯ ॥
(ಇವುಮುಪಮಿತಭೇದಂಗಳ್)
[ಇಂತು ಸದೃಶಯೋಗಿತಾಲಂಕಾರಂ]

(೧೦) ಆಕ್ಷೇಪಾಲಂಕಾರ ಲಕ್ಷಣಂ.

ವಿದಿತಾರ್ಥವಿಪರ್ಯಾಸಾ
ಸ್ಪದಮೆ ದಲಾಕ್ಷೇಪಮೆಂಬಲಂಕಾರಂ ಮ।
ತ್ತದಱ ವಿಶೇಷವಿಭಾಗಮ
ನುದಾಹರಣಮಾರ್ಗದಿಂ ಪ್ರಯೋಗಿಸಿ ತೋರ್ಪೆಂ ॥ ೧೦೦ ॥

ಲಕ್ಷ್ಯಂಗಳ್.

ಕಂ॥ ಮೃದುತರಮಾರ್ಗದೆ ಕೆನ್ನಂ
ಮದನಶರಾನೀಕಮೊಯ್ಕನೊಲವಂ ಪಡೆಗುಂ।
ಹೃದಯಮನಳವಳಲಿಂದುಱೆ
ವಿದಾರಿಸುವುದಿಂತು ಕುಸುಮಮಯಮಲ್ತದಱಿಂ ॥ ೧೦೧ ॥
(ವೃತ್ತಾಕ್ಷೇಪಂ)

ಧನಮಂ ನೆರಪದೆ ವಿದ್ಯಾ
ಧನಮಂ ಮಾಡದೆ ತಗುಳ್ದು ನೆಗಱದೆ ತಪದೊಳ್।
ಮನುಜತ್ವಮಫಲಮಾಯ್ತೆಂ
ತೆನಗೆಂಬುದನಱಿವುದನುಶಯಾಕ್ಷೇಪಕಮಂ ॥ ೧೦೨ ॥
(ಅನುಶಯಾಕ್ಷೇಪಂ)

ಸರಸಿಜವಿರೋಧಿ ಕಾಂತ್ಯಾ
ಕರಮಮೃತಮಯಂ ತ್ವದೀಯಮುಖಶಶಿಯುಂಟಾ।
ಗಿರೆ ಶಶಿಯದೇವುದೆಂಬುದು
ನಿರುತಂ ಶ್ಲೇಷಾನುವಿದ್ಧಮಪ್ಪಾಕ್ಷೇಪಂ ॥ ೧೦೩ ॥
(ಶ್ಲೇಷಾಕ್ಷೇಪಂ)

ವರಹಂಸಕದಂಬಕಮದು
ಶರದಂಬುದಮಲ್ತು ಮುಖರನೂಪುರಸಂವಾ।
ದಿರವಂ ನೆಗಳ್ದಿಪ್ಪುದು ಬಂ
ಧುರಮುದಱಿಂದಿದರೊಳೆಂಬುದುಪಮಾಕ್ಷೇಪಂ ॥ ೧೦೪ ॥
(ಉಪಮಾಕ್ಷೇಪಂ)

ಮದಕರಿಯೋ ಘನಸಮಯಾಂ
ಬುದಮೋ ಘನಮಲ್ತು ನೆಗಳ್ದಿದದಱೊಳ್ ಸಪ್ತ।
ಚ್ಛದಗಂಧಸುರಭಿ ಪದುಳಂ
ಮದಕರಿಯೆನೆ ನೆಗೆ ಸಂಶಯಾಕ್ಷೇಪಕಮಂ ॥ ೧೦೫ ॥
(ಸಂಶಯಾಕ್ಷೇಪಂ)

ಕಂ॥ ಮಾನಧನಾ ಪೋಗಲ್ಪಲೇಂ
ದಾನಿಯೆ ನೀನುಂತೆ ನಿನ್ನ ಕಸವರಮೆಂದುಂ।
ದೀನಾನಾಥರ ಕೆಯ್ಯದು
ದಾನಿಯುದೆಂತೆಂಬುದಿಂತು ಹೇತ್ವಾಕ್ಷೇಪಂ ॥ ೧೦೬ ॥

(ಹೇತ್ವಾಕ್ಷೇಪಂ)

ವ್ಯತಿರೇಕವಿಕಲ್ಪಮಿಂದೆಂ
ದತಿಶಯಧವಳೋಪದೇಶಮಾರ್ಗ ಕ್ರಮದಿಂ।
ದತಿನಿಪುಣರಱಿದು ಕೊಳ್ಗನು
ಮತಿಯಿಂದಾಕ್ಷೇಪಮೆಂಬಲಂಕಾರಮುಮಂ ॥ ೧೦೭ ॥

(ಇಂತಾಕ್ಷೇಪಾಲಂಕಾರಂ)
(ಇದು ವ್ಯತಿರೇಕವಿಕಲ್ಪಂ)

ಉಪಸಂಹೃತಿ.

ಗೀತಿಕೆ॥ ಪ್ರತಿಪದಾರ್ಥತತ್ವಭೇದದೊಳ್
[ಪ್ರತಿಷೇಧಮನೆಗಳ್ಗಮನಿತೆ ಮಾಟ್ಕೆಯಿಂ।
ದತಿಶಯಾಕ್ಷೇಪಗಣನಾವ್ಯತಿ
ಗತಿ ನೃಪತುಂಗದೇವಮಾರ್ಗದೊಳ್ ॥ ೧೦೮ ॥

(೧೧) ಶ್ಲೇಷಾಲಂಕಾರ ಲಕ್ಷಣಂ.

ಕಂ॥ ನಾನಾರ್ಥಮೇಕರೂಪಾ
ಧೀನವಚೋರಚಿತಮಪ್ಪೊಡಕ್ಕುಂ ಶ್ಲೇಷಂ।
ಮಾನಿತಮಳಂಕ್ರಿಯಾನುವಿ
ಧಾನಂ ಮತ್ತಿಂತು ತದುಪಲಕ್ಷ್ಯವಿಕಲ್ಪಂ ॥ ೧೦೯ ॥

ಲಕ್ಷ್ಯಂಗಳ್.

ಉದಯಾದ್ರಿರೂಢಂ ಕಾಂತ್ಯಾ
ಸ್ಪದ ನನುರಕ್ತಾತ್ಮಮಂಡಳಂ ಕುಮುದಕರಂ।
ಮೃದುತರಕರಂಗಳಿಂದತಿ
ಮುದಮಂ ಲೋಕಕ್ಕೆ ಪಡೆಗುಮಿಂತೀರಾಜಂ ॥ ೧೧೦ ॥

ಕಂ॥ ವಿಪುಳತ [ರಕಟಕನುದ್ಯ
ದ್ವಿಪಹಲೆ (ರಿ) ಮಹಿಷೀನಿಷೇವ್ಯನುನ್ನತಪಾದಂ ।
ವ್ಯಪನೀತಶ್ರೀಫಲದಂ
ವಿಪರೀತಕನಪ್ಪನಂತು ಭೂಭೃನ್ನಾಥಂ ॥ ೧೧೧ ॥

(ಅವಿರುದ್ಧ ಶ್ಲೇಷಂ)

ನೆರೆದ ವಿಸಂವಾದಂ ಪಂ
ಜರಶುಕತತಿಯೊಳ್ ಕುಲಾಲಗೇಹಂಗಳೊಳಂ ।
ಪರಚಕ್ರಭ್ರಾಂತಿಗಳ
ಧ್ವರದೊಳೆ ನೆಗಟ್ಟುಂ ಮಹಾಹವಧ್ವನಿನಿಯತಂ ॥ ೧೧೨ ॥

(ನಿಯಮಿತ ಶ್ಲೇಷಂ)

ಅರಿಗೋತ್ರಭೇದಿ ವಿಬುಧೇ
ಶ್ವರನಲ್ಲಂ ಧೃತಕಳಾಕಳಾಪಂ ದೋಷಾ ।
ಕರನಲ್ಲಂ ವಿದಿತೋಮಾ
ವರನಾತ್ಮಭುಜಂಗನಲ್ಲನೀಭೂಪಾಳಂ ॥ ೧೧೩ ॥

(ವಿರುದ್ಧ ಶ್ಲೇಷಂ)

ಉಪಸಂಹೃತಿ.

ವರರೂಪಕಾದ್ಯಳಂಕಾ
ರರಚನೆಯೊಳ್ ಮುನ್ನೆ ಪೇಟ್ದು ಬಂದೆಂ ಕೆಲವಂ ।
ದೊರೆಕೊಳೆ ಬಗೆಗೀ ತೆಱದಿಂ
ನಿರಂತರವಿರುದ್ಧನಿಯಮಿತಶ್ಲೇಷೆಗಳಂ ॥ ೧೧೪ ॥

(ಇಂತು ಶ್ಲೇಷಾಲಂಕಾರಂ)

(೧೨) ಉತ್ಪ್ರೇಕ್ಷಾಲಂಕಾರ ಲಕ್ಷಣಂ.

ತಱಸಂದು ಪಲವು ತೆಱದಿಂ
ತೆಱದಿರೆ ನೆಗಟ್ದುದೊಂದು ವಸ್ತುಸ್ಥಿತಿಯಂ ।
ಮಱಸಿ ಪೆಱತೊಂದು ಮಾಟ್ಕೆಯಿ
ನಱಪುವುದುತ್ಪ್ರೇಕ್ಷೆಯೆಂಬುದಿಂತದಱ ತೆಱಂ ॥ ೧೧೫ ॥

ಲಕ್ಷ್ಯಂಗಳ್.

ಕಂ॥ ನಡುವಗಲ ಬಿಸಿಲ್ ತನ್ನಂ
ಸುಡೆ ವನಕರಿ ಕಮಲಬಂಧುವೊಳ್ ದಿನಕರನೊಳ್ ।
ಕಡುಗಾಯ್ಪಿನೆ ಸರಸಿಜವಂ
ಕಿಡಿಸಲ್ ತಾಂ ಪೊಕ್ಕುದಾಗ ಬಗೆಗಾ ಕೊಳನಂ ॥ ೧೧೬ ॥

ನೆಲಸಿ ಕಿವಿಯೊಳ್ ಮದಾಯತ
ವಿಲೋಕದೊಳ್ ಪೊಳೆವುದೊಳ್ಪಿನೆಂದೀ ಕರ್ಣೋ ।
ತ್ಪಲಮುಮನಾಕ್ರಮಿಸುವುದಿದು
ವಿಲಾಸಿನೀ ನಿನ್ನ ಲೋಲಲೋಚನಯುಗಳಂ ॥ ೧೧೭ ॥

(ಇಂತುತ್ಪ್ರೇಕ್ಷಾಳಂಕಾರಂ)

(೩೩) ಸೂಕ್ಷ್ಮಾಲಂಕಾರ ಲಕ್ಷಣಂ.

ಬಗೆದಿಂಗಿತಚೇಷ್ಟಾಕಾ
ರಗತಂಗಳನಂತರಂಗದೊಳ್ ಮಱಸಿದುದಂ ।
ಮಿಗೆ ಸೂಚಿಸುವುದು ಸೂಕ್ಷ್ಮಾ
ನುಗತಾಳಂಕಾರಮಿಂತು ತದುದಾಹರಣಂ ॥ ೧೧೮ ॥

ತಿಳಿಪಲಡಿಗೆಱಗಿದೋಪನ
ತಳಂಗಳಾ ತೀಟದಿಂ ಪದಂಗಳೊಳೊಗೆದಾ ।
ಪುಳಕಚಯಂಗಳ್ ಕಳೆದುವು
ಮುಳಿಸಂ ನಲ್ಲಳ್ಗೆ ಬೆಳ್ಮಗಂಗೆಯ್ದಿರೆಯುಂ ॥ ೧೧೯ ॥

ಪರುಷಾಳಾಪಮುಮತಿನಿ
ಷ್ಠುರವೀಕ್ಷಣಮುಖವಿಕಾರಮುಂ ಮಱಸಿರೆಯುಂ ।
ತರಳಾಪಾಂಗಮುಮಾಕೆಯ
ದರಹಸಿತಮುಮಱಿಯೆ ಪೇೞ್ದುವೆಱಕಮನೆರ್ದೆಯೊಳ್ ॥ ೧೨೦ ॥

(ಇಂತು ಸೂಕ್ಷ್ಮಾಲಂಕಾರಂ)

(೧೪) ವಿಶೇಷಾಲಂಕಾರ ಲಕ್ಷಣಂ.

ಗುಣಜಾತ್ಯಾದಿಗಳೊಳಗನು
ಗುಣಮಾಗಿರೆ ಪೇೞಿದವಱ ವಿಕಳತೆಯುಂ ಸ ।
ಯ್ತಣಿಸಿ ವಿಶೇಷಮನಱಿಪುವ
ಗಣನೆ ವಿಶೇಷಾನುಭಾವಸದಳಂಕಾರಂ ॥ ೧೨೧ ॥

ಲಕ್ಷ್ಯಂಗಳ್.

ಅಲರಂಬು ಕಬ್ಬುವಿಲ್ ಕೋ
ಮಲಸರಸಿಜನಾಳತಂತು ತಿರು ಮತ್ತಿವಱಾ ।
ಬಲದಿನಗಲ್ದರನೆಚ್ಚಾ
ತ್ರಿಲೋಕಮಂ ಕಂತು ಬಸಕೆ ಬರಿಸುವನೆಂತುಂ ॥ ೧೨೨ ॥

ಸ್ಫುರಿಯಿಸದೆ ದಶನವಸನಾಂ
ತರಮಾರಕ್ತಂಗಳಾಗದೆನಸುಂ ಕಣ್ಗಳ್ ।
ಭರಿತಭ್ರೂಕುಟಿ ಕಲಮಾ
ಗಿರದೆ ಮುಖಂ ಗೆಲ್ದನಿಂತುವರಿನೃಪಬಲಮಂ ॥ ೧೨೩ ॥

(ಇಂತು ವಿಶೇಷಾಲಂಕಾರಂ)

(೧೫) ಸಮಾಹಿತಾಳಂಕಾರ ಲಕ್ಷಣಂ.

ಪರವಸದ ಬಗೆಯೊಳೊಂದಂ
ದೊರೆಕೊಳಿಸುವುದಱಿಂಗತರ್ಕಿತೋಪಸ್ಥಾನಂ ।
ನಿರುತಂ ಸಮಾಹಿತಾಳಂ
ಕರಣಾಂತರಮಕ್ಕುಮಿಂತು ತದುದಾಹರಣಂ ॥ ೧೨೪ ॥

ಲಕ್ಷ್ಯಂಗಳ್.

ಮುಳಿದಿರ್ದ ನಲ್ಲಳಲ್ಲಿಗೆ
ತಿಳಿಪಲ್ ಪೋಪೆನ್ನ ಒಗೆಗೆ ದೊರೆಕೊಳೆ ಮತ್ತಂ ।
ತೆಳಪೆಱೆ ಗಗನಾಂತರದೊಳ್
ಪೊಳೆದತ್ತಿತ್ತಂ ವಸಂತ ಸಮಯೋತ್ತಂಸಂ ॥ ೧೨೫ ॥

ಕಂ॥ ತಡೆತಡೆದು ಕಾಂತನಲ್ಲಿಗೆ
ನಡೆಯಲ್ ಬಗೆದೆನಗೆ ಕಾರ ಕಾರಿರುಳೊಳ್ ಸ।
ಯ್ತಡಿವಡಿಕೆಗಳಿಂ ತೊಡೆದ
ತ್ತೆಡೆವಱಿಯದೆ ಪೊಳೆವ ಮಿಂಚು ಮುಗಿಲೆಡೆಯೆಡೆಯೊಳ್ ॥ ೧೨೬ ॥
(ಇಂತು ಸಮಾಹಿತಾಳಂಕಾರಂ)

(೧೬) ಸಮಾಸೋಕ್ತ್ಯಲಂಕಾರ ಲಕ್ಷಣಂ.

ತಱಿಸಂದು ಮನದೊಳೊಂದಂ
ಪೆಱತಂ ಮತ್ತದನೆ ಪೋಲ್ವುದಂ ಕುಱುಪುಗಳಂ।
ಕುಱಿಮಾಡಿ ಮಾಡಿ ಪೇಳ್ವುದು
ನೆಱೆಯೆ ಸಮಾಸೋಕ್ತಿಯೆಂಬುದಿಂತದಱ ತೆಱಂ ॥ ೧೨೭ ॥

ಲಕ್ಷ್ಯಂಗಳ್.

ತಾಮರೆಯಲರೊಳ್ ಸರಸನಿ
ಜಾವೋದದೊಳೊಂದಿ ನಲಿದು ಮಕರಂದ [ರಜೋ] [1]
ವ್ಯಾ[ಮುಗ್ಧದೊ]ಳೀ ಮುಗುಳೊಳ
ಮಾಮಾಟ್ಕೆಯಿನಱಸಿ ಸುಱಿವುದಳಿ ಕೆಲಗೆಲದೊಳ್ ॥ ೧೨೮ ॥

(1) ಲಕ್ಷ್ಯಲಕ್ಷಣಸಮನ್ವಯಂ.

ನೆರೆದಳಿವಿದಗ್ಧಗಣಿಕಾ
ಸುರತಾಸವಸೇವನಾಕೃತೌದನನಾಗಿ।
ರ್ದಿರದೆ ತರುಣೀರತಾಂತರ
ಸರಾಗಮಂ ಪೇಳ್ವುದಲ್ಲಿ ತುಂಬಿಯ ನೆವದಿಂ ॥ ೧೨೯ ॥

ಲಕ್ಷ್ಯಾಂತರಂ.

ದಾನಪರನಂ ನಿಜೋನ್ನತ
ಮಾನನನಾರೂಢವಿಪುಳವಂಶನನಂತೊಂ।
ದಾನೆಯನಪಾಯಪಂಕದೊ
ಳೀನುಂ ತಳ್ಪಿಲ್ಲದಿರ್ದುದಂ ಕಾಣಿಸಿದಂ ॥ ೧೩೦ ॥

1. ಈ ಅಲಂಕಾರದಲ್ಲಿ ಲಕ್ಷ್ಯಲಕ್ಷಣ ಸಮನ್ವಯವು ಉಕ್ತವಾಗಿದೆ. ಇಲ್ಲಿಂದ ಮುಂದೆ ಹೀಗೆಯೇ ಸಮನ್ವಯವುಂಟು.

(೧) ಲಕ್ಷ್ಯಲಕ್ಷಣ ಸಮನ್ವಯಂ.

ಕಂ॥ ತ್ಯಾಗಾದಿಗುಣಗಣೋದಯ
ಭಾಗಿಯನೇನಾನುಮೊಂದುಪಾಯಾಂತರಮಂ ।
ನೀಗಲ್ ನೆಱೆಯದೆಯನುಪಮ
ನೀಗಣಿದದಿನಾನೆಮಾಡಿ ನುಡಿದಂ ಬಗೆಯಂ ॥ ೧೩೧ ॥

[ಇಂತು ಸಮಾಸೋಕ್ತಿ]

(೧೭) ಪರ್ಯಾಯೋಕ್ತಾಲಂಕಾರ ಲಕ್ಷಣಂ.

ಬಗೆದರ್ಥಮನಱಿಪದೆ ಮೆ
ಲ್ಲಗೆ ತಿರ್ದುವ ಬಗೆಯನದಱ ನೆಪದಿಂ ಪೇಱತಂ ।
ನಿಗದಿಸುವುದು ಪರ್ಯಾಯೋ
ಕ್ತ್ಯಗತಾಳಂಕಾರಮದಱ ಪಾಂಗಿಂತಕ್ಕುಂ ॥ ೧೩೨ ॥

ಲಕ್ಷ್ಯಂ.

ನೀಮಿರ್ಬರುಮನ್ನೆಗಮಿಂ
ತೀಮಾಟಕ್ಕಿಯೊಳಿನಿಸುಪೋಱ್ತು ನುಡಿವುತ್ತಿರಿಮಾ ।
ನಾವೋದಕುಸುಮಸಮಿತಿಯ
ನಾಮರಗಳೊಳಾಯ್ದು (ಕೊಯ್ದು)ಮಿಲ್ಲಿಗೆ ಬರ್ಪೆಂ ॥ ೧೩೩ ॥

ಲಕ್ಷ್ಯಲಕ್ಷಣಸಮನ್ವಯಂ.

ಕೆಳದಿಯುಮಭಿಮತ(ನು)ಮನೊ
ರ್ಬುಳಿಗೂಡಿ ವಿದಗ್ಧೆ ಸುರತಸೇವನಮಂ ಮೊ ।
ಕ್ಕಳಮವರ್ಗೆ ಮಾಡಲೆಂದಾ
ಗಳೆ ಪೋಗಲ್ ಬಗೆದು ನುಡಿದಳಿಂತೀಮಾತಂ ॥ ೧೩೪ ॥

(ಇಂತು ಪರ್ಯಾಯೋಕ್ತಾಲಂಕಾರಂ)

---

೧. ಕಾವ್ಯಾದರ್ಶದಲ್ಲಿ ಆದಿಯಿಂದಲೂ ಒಂದು ಪದ್ಯದಲ್ಲಿ ಲಕ್ಷ್ಯವನ್ನು ಹೇಳಿ ಮತ್ತೊಂದರಲ್ಲಿ ಲಕ್ಷ್ಯಲಕ್ಷಣ ಸಮನ್ವಯವನ್ನು ಮಾಡಿರುವನು. ಈ ಗ್ರಂಥದಲ್ಲಿಯಾದರೋ ಆ ಪದ್ಧತಿಯು ಇಲ್ಲಿಂದ ಮುಂದೆ ಒಂದೆರಡು ಅಲಂಕಾರದಲ್ಲಿ ಮಾತ್ರ ಇದೆ.

(೧೮) ವಿರೋಧಾಲಂಕಾರ ಲಕ್ಷಣಂ.

ಕಂ|| ಒಂದೊಂದಱೊಳೊಂದದುವಂ
ತಂದೊಬ್ಬುಳಿಗೆಮಾಡಿ ತದ್ವಿಶೇಷಾಂತರಮಂ ।
ಸಂದೇಹಮಿಲ್ಲದಱಿಪುವು
ದೊಂದೆ ವಿರೋಧಾಭಿಧಾನಮದುಮಿಂತಕ್ಕುಂ ॥ ೧೩೫ ॥

ಲಕ್ಷ್ಯಂಗಳ್.

ಶರದಾಗಮದೊಳ್ ಕಳಹಂ
ಸರವಂ ಪೆರ್ಚಿತ್ತು ಕಿವಿಗೆ ಸೊಗಯಿಸಿ ಪೀನಂ ।
ವಿರಳತರಮಾಯ್ತು ಬರ್ಹಿಣ
ವಿರಾವಮುರುಮುದವಿರಾಮವಿರಸವಿರಾಗಂ ॥ ೧೩೬ ॥

ಮಲಯಾನಿಳನೆಸಕದಿನುದಿ
ರ್ದಲರ್ಗಳ ಮಕರಂದಮಾಲೆಗಳ್ ಪರೆದತ್ತಂ ।
ನೆಲದೊಳ್ ಬಿಟ್ಟುಂ ಪಡೆದುವು
ವಿಲೋಚನಾಂಬುಗಳನಗ್ಗಳಂ ವಿರಹಿಗಳಾ ॥ ೧೩೭ ॥
(ಉಪಸಂಹೃತಿ)

ದೊರೆಕೊಳ್ವಂತಿರೆ ಮುನ್ನಂ
ವಿರೋಧಗತಮಾರ್ಗಭೇದಮಂ ತೋಱಿದೆನಾ ।
ದರದಿನುಪಮಾದಿಗಳೊಳಂ
ನಿರುತಮನುಕ್ತಮುಮನಱಿಗೆ ಲಕ್ಷ್ಯಾಂತರದೊಳ್ ॥ ೧೩೮ ॥
[ಇಂತು ವಿರೋಧಾಲಂಕಾರಂ]

(೧೯) ಅಪ್ರಸ್ತುತಾಲಂಕಾರ ಲಕ್ಷಣಂ.

ಪ್ರಸ್ತುತಮಲ್ಲದುದನೆ ಮಿಗೆ
ವಿಸ್ತಾರಿಸಿ ನೆಗೞೆ ಪೇೞ್ದೊಡಕ್ಕುಂ ಮತ್ತ ।
ಪ್ರಸ್ತುತಮೆಂಬುದಲಂಕೃತಿ
ವಿಸ್ತರಮಿಂತಕ್ಕುಮದಱ ಲಕ್ಷ್ಯವಿಭಾಗಂ ॥ ೧೩೯ ॥

ಲಕ್ಷ್ಯಂ.

ಕಂ॥ ಮೃಗಗಣಮೆ ಸುಖಂ ಬಾೞ್ಗುಂ
ಸೊಗಯಿಸುವ ವನಾಂತರಾಳದೊಳ್ ಬಹುತೃಣದೊಳ್ ।
ಬಗೆದಳಿಪಿ ಸುೞಿದು ನೋಡದೆ
ಮೊಗಮಂ ವಸುಮದವಿರಾಮಕಲುಷಾಯತರಾ ॥ ೧೪೦ ॥

ಲಕ್ಷ್ಯಲಕ್ಷಣ ಸಮನ್ವಯಂ.

ಸಂತಂ ಮೃಗಗಣವೃತ್ತಿಯ
ನಿಂತಪ್ರಸ್ತುತಮನಱಿಪಿದಂ ಪರಸೇವಾ ।
ಚಿಂತಾವಿಷಾದಿತಾಂತ
ಸ್ಸ್ವಾಂತಂ ಸಂತೈಸಲೆಂದು ತನ್ನಂ ತಾನೇ ॥ ೧೪೧ ॥

[ಇಂತಪ್ರಸ್ತುತಾಲಂಕಾರಂ]

(೨೦) ನಿದರ್ಶನಾಲಂಕಾರ ಲಕ್ಷಣಂ.

ಗುಣದೋಷಾದಿಗಳಿಂದನು
ಗುಣಮಾಗಿರೆ ಪೇೞ್ದು ತದನುಸದೃಶದಿನೊಂದಂ ।
ಪ್ರಣಿಹಿತನಿದರ್ಶನಕ್ರಮ
ದೆಣಿಸುವುದಕ್ಕುಂ ನಿದರ್ಶನಾಲಂಕಾರಂ ॥ ೧೪೨ ॥

ಲಕ್ಷ್ಯಂಗಳ್.

ಅಮಳಿನಗುಣವೃತ್ತಗಳಿಂ
ಸಮುಪಸ್ಥಿತಸಕಳಜನರ್ಗಳುಪಚಿತಗುಣಮಂ ।
ಸಮನಾಗಿಸುವರ್ ಕನ್ನಡಿ
ಕಮನೀಯಾಕಾರಬಿಂಬಮಂ ತಾಳ್ದುವವೋಲ್ ॥ ೧೪೩ ॥

ಜನಮಱಿಯದನ್ನೆಗಂ ಮು
ನ್ನೆ ನಯಮನಱಿದಱಿಪಲಾರ್ಪೊಡದು ಮಂತ್ರಿಗುಣಂ ।
ಜನವಾದಂ ನೆಗೞೆ ನಗ
ಧ್ವನಿವೋಲನುಕರಣವಾರ್ತೆ ಮಂತ್ರಿಯ ಗುಣಮೇ ॥ ೧೪೪ ॥

ಕಂ॥ ತಲೆಸೂಡಿ ಮುನ್ನೆ ಕಜ್ಜದ
ಫಲಮಂ ಬೆಸಗೊಂಡುವೇ೯ವನಲ್ಲಿಂ ಬೞಿಯಂ ।
ತಲೆಯಂ ಕಿರಿಯಿಸಿ ದಿನಸಮ
ನಲಸದೆ ಬೆಸಗೊಳ್ವನಂತು ಗಾವಿಲನಕ್ಕುಂ ॥ ೧೪೫ ॥

ಪ್ರತಿಕೂಲನಾಗಿ ನಿಲೆ ವಿಧಿ
ಮತನಯಮನುಕೂಲಮಾಗಿ ನಿಲೆಯುಂ ಕಾರ್ಯ ।
ಸ್ಥಿತಿಯಂ ಸಾಧಿಸಲಾಗದು
ಮೃತಕಕೃತೋಪಕೃತಿಯವೊಲನರ್ಥಾಯಾಸಂ ॥ ೧೪೬ ॥

ಪದೆದುದಯಿಸಲೆಂದುಂ ಕಾ
ಲದೊಳಲ್ಲದುದಾರತೇಜನರ್ಕನುಮಲ್ಲಂ ।
ಸದುದಿತಗುಣನದಱಿಂ ನಯ
ವಿದನಪ್ಪಂ ಕಾಲಮಂ ನೆರಂ ತೋರ್ಕೆ ನೃಪಂ ॥ ೧೪೭ ॥

ಪಡೆಯಱಿಯಲಾದೊಡಱಿಯಂ
ಕಿಡಿಸುಗುಮಂತಃಕಳಂಕನೃಪಮಂಡಳಮಂ ।
ತಡೆಯದೆ ತಮಸ್ಸ್ವಭಾವಂ
ಕಿಡಿಸುವವೋಲಱಿದು ರಾಹು ಶಶಿಮಂಡಳಮಂ ॥ ೧೪೮ ॥

ಕಿಱಿದೆಂದೇೞಿಸಿ ಪಗೆಯಂ
ಪಱಿಪಡೆ ಕಿಡಿಸದೊಡೆ ಪೆತ್ತು ಕಾಲದ ಬಲಮಂ ।
ನೆಱೆದಿಱಿಗುಂ ನೆಱೆದನುವಿಂ
ಮಱಿಸುವವೋಲ್ ದಿವಸಕರನನಂಬುದನಿವಹಂ ॥ ೧೪೯ ॥

ಒಳಗಿರ್ದ ವೈರಿಗಳ್ ಮೊ
ಕ್ಕಳಮೊಯರ್ ಪೆರ್ಚಲಧಿಕವಿಭವರ್ಕಳುಮಂ ।
ತಳರದೊಡನಿರ್ದು ಬಡವಾ
ನಳನೆಂದುಂ ಪೆರ್ಚಲೀಯದಂತಂಬುಧಿಯಂ ॥ ೧೫೦ ॥

ಕಂ॥ ಪರಪಕ್ಷಮುಳ್ಳಿನಂ ತನ
ಗಿರವುಬ್ಬಸಮುದಱನಱಿವುದದನೇಗೆಯ್ದುಂ ।
ಪರೆದ ಪುಡಿಯೆಲ್ಲಮಂ ನೀರ್
ನೆರೆದು ಕೆಸರ್ಮಾಡದನ್ನೆಗಂ ನೆಲಸುಗುಮೇ ॥ ೧೫೧ ॥

ಕುಱಿಗೊಂಡು ನೆಗಲ್ವನಿಚ್ಚೆಯ
ನಱಿಯದೆ ತನ್ನಿಚ್ಚೆಯಿಂದೆ ಕಜ್ಜಂ ಬೇಟ್ವಂ ।
ತಱಿಸಲಿಸಲಾಜನಾರ್ತನ
ತೆಱನಱಿಯದೆ ಮರ್ದುವೇಟ್ವ ಬೆಜ್ಜನ ತೆಱದಿಂ ॥ ೧೫೨ ॥

ಪರಿಣಾಮಪಥ್ಯಮಂ ಸುಖ
ಪರಿಕರಮಂ ಮೆಚ್ಚದನ್ನರಾರೀ ಮಾತಂ ।
ನಿರತಿಶಯರಸಸಮೇತಮ
ನರೋಚಕಂ ಮೆಚ್ಚದಂತೆ ಸೊಗಯಿಸುವುಣಿಸಂ ॥ ೧೫೩ ॥

ಉಪಸಂಹೃತಿ.

ಇಂತುದಿತಭೇದಮಂ ದೃ
ಷ್ಟಾಂತಾಳಂಕಾರಮಾರ್ಗಮಂ ಕನ್ನಡದೊಳ್ ।
ಸಂತತ ಗುಣಮಂ ಕೆಯ್ಕೊ
ಳ್ವಂತಾಗಿರೆ ಬಗೆದು ಪೇೞ್ಗೆ ಪರಮಕವೀಶರ್ ॥ ೧೫೪ ॥
[1][ಇಂತು ದೃಷ್ಟಾಂತಾಳಂಕಾರಂ]

(೨೧) ಸಹೋಕ್ತ್ಯಲಂಕಾರ ಲಕ್ಷಣಂ.

ಗುಣಜಾತ್ಯಾದಿಗಳಿಂ ದೊರೆ
ಯೆಣಿಸುವುದು ಸಹೋಕ್ತಿಯೆಂಬುದಕ್ಕುಂ ನಾನಾ ।
ಗಣನಾ ವಿಶೇಷಮಾಗೀ
ಗಣಿದದಿನಾರಯ್ದು ಕೊಳ್ಗೆ ಲಕ್ಷ್ಯಮನದಱಾ ॥ ೧೫೫ ॥

1. ಈ ಅಲಂಕಾರದ ಹೆಸರನ್ನು ಮೊದಲು ನಿದರ್ಶನೆಯೆಂದು ಹೇಳಿ ಉಪಸಂಹೃತಿಯಲ್ಲಿ "ಇಂತು ದೃಷ್ಟಾಂತಾಲಂಕಾರ ಮಾರ್ಗಂ" ಎಂದು ಬೇರೆ ಹೇಳಿರುವುದಲ್ಲದೆ, 'ಇದು ಕನ್ನಡದೊಳ್ ಸಂತತಗುಣಮಂ ಕೈಕೊಳ್ವಂತಾಗಿರೆ ಪೇೞ್ವುದು' ಎಂದು ಇದಕ್ಕೆ ಕನ್ನಡದಲ್ಲಿ ಹೆಚ್ಚು ಪ್ರಾಶಸ್ತ್ಯವುಂಟೆಂದೂ ಹೇಳಿರುವನು. ದಂಡಿಯಲ್ಲಿ ನಿದರ್ಶನಾಭೇದವು ಇಷ್ಟು ವಿಶದವಾಗಿಲ್ಲ.

ಲಕ್ಷ್ಯಂ.

ಕಂ॥ ಅತಿಧವಳಮಾಯ್ತು ಗುಣಸಂ
ತತಿಯೊಡನೆ ಯಶೋವಿತಾನಮಾಶಾಧೀನಂ ।
ಸತತಂ ಪೆರ್ಚಿತ್ತು ನಿಜಾ
ಯತಿಯೊಡನೆ ಮಹಾವಿಭೂತಿ ಪರವೋದಯನಾ ॥ ೧೫೬ ॥

[ಇಂತು ಸಹೋಕ್ತ್ಯಲಂಕಾರಂ]

(೨೨) ಸಂಕೀರ್ಣಾಲಂಕಾರ ಲಕ್ಷಣಂ.

ಸಂಕೀರ್ಣಮೆಂಬುದುಕ್ತಾ
ಳಂಕಾರಸಮೂಹಸಂಕರಕ್ರಮಮಕ್ಕುಂ ।
ಶಂಕಾವಿರಹಿತಚಿತ್ತರ
ದಂ ಕಾವ್ಯದೊಳಿಂತು ಪೇೞ್ಗೆ ಕವಿವೃಷಭರ್ಕಳ್ ॥ ೧೫೭ ॥

ಲಕ್ಷ್ಯಂ.

ಅಪರಾಗಂ ಮುನಿಪತಿವೋ
ಲಪಗತಗುಣನಾಗಿಯುಂ ನಿಜಾಯತದೋಷಂ ।
ವಿಪುಳಯಶೋಧನಲೋಭಂ
ನೃಪವೃಷಭನರಾತಿನಿಕರತರುದವದಹನಂ ॥ ೧೫೮ ॥

(ಇಂತು ಸಂಕೀರ್ಣಾಲಂಕಾರಂ)

(೨೩) ಪರಿವೃತ್ತ್ಯಲಂಕಾರ ಲಕ್ಷಣಂ.

ಪರಿವೃತ್ತಿ ಯೆಂಬುದಕ್ಕುಂ
ನಿರುಪಮಮರ್ಥಸ್ವರೂಪವಿನಿಮಯವಚನಂ ।
ಪರಮಗುಣೋದಯಮದಱಾ
ಸ್ವರೂಪಮಂ ಬಗೆದು ಕೊಳ್ಗೆ ಮತ್ತೀತೆಱದಿಂ ॥ ೧೫೯ ॥

ಲಕ್ಷ್ಯಂ.

ಅರಿಗೆ ದುರಾಹವರಂಗಾಂ
ತರದೊಳಭೀತಂ ನಿಜಾರಿಸಮಿತಿಗಳಿಂದಂ ।
ನೆರೆದ ಜಯಂಗೊಂಡಾಗಡೆ
ಸುರಾಂಗನಾಸುರತವಿಷಯಸುಖಮಂ ಕೊಟ್ಟಂ ॥ ೧೬೦ ॥

(೨೪) ವ್ಯಾಜಸ್ತುತ್ಯಲಂಕಾರ ಲಕ್ಷಣಂ.

ಕಂ॥ ಅತಿಶಯಮಾಗಿರೆ ಗುಣಸಂ
ತತಿಯಂ ದೋಷಮನೆ ಪೇಟ್ದವೋಲ್ ಪೇಟ್ದುದು ನಿ।
ಶ್ಚಿತಶಬ್ದಾರ್ಥವ್ಯಾಜ
ಸ್ತುತಿಯೆಂಬುದುಮದಱ ಮಾಟಕ್ಕೆ ಮತ್ತಿಂತಕ್ಕುಂ ॥ ೧೬೧ ॥

ಲಕ್ಷ್ಯಂಗಳ್.

ಜಲರಾಶಿಪ್ರಭವೆಯನವಿ
ಕಲಕೃಷ್ಣಗುಣಾನುಸಕ್ತೆಯಂ ಮಿಗೆ ಲಕ್ಷ್ಮೀ।
ಲಲನೆಯನಾಂತುಂ ವಕ್ಷ
ಸ್ಸ್ಥಲದೊಳ್ ಪೇಟಿಂತುದಾರಚರಿತನೆ ಅಪ್ಪೈ ॥ ೧೬೨ ॥

ಸತತಂ ಭುಜಂಗಭೋಗಾ
ಶ್ರಿತೆ ನಿನ್ನ ಕಳತ್ರಮಿೞಧರಾವಧು ಮತ್ತಂ।
ತತಿಶಯದೆ ಮಹಾಪುರುಷ
ವ್ರತಮಂ ತಾಳ್ದುವಳುದಾರಚರಿತಕ್ರಮದಿಂ ॥ ೧೬೩ ॥

[ಇಂತು ವ್ಯಾಜಸ್ತುತ್ಯಲಂಕಾರಂ]

(೨೫) ಹೇತ್ವಲಂಕಾರ ಲಕ್ಷಣಂ.

ಕಾರ(ಣ) ಮಾಗಿರ್ಪುದಳಂ
ಕಾರಂ ಹೇತೂಕ್ತಿಯೆಂಬುದದು ತಾಂ ನಾನಾ।
ಕಾರಂ ಜ್ಞಾಪಕ ಸದಳಂ
ಕಾರಸುಮಾರ್ಗಪ್ರಯೋಗಮಿೞತೆಱನದಱಾ ॥ ೧೬೪ ॥

ಲಕ್ಷ್ಯಂಗಳ್.

ಇಂದುಕಿರಣಂಗಳಿಂದಂ
ಚಂದನರಸದಿಂದೆ ಮಾಗಿಯಾ ನೀರಿಂದಂ।
ನಂದದು ಪರಿತಾಪಾನಳ
ನೆಂದಱಿದೆಂ ನಿನ್ನ ಮೆಯ್ಯ ಕಾಮಜ್ವರಮಂ ॥ ೧೬೫ ॥

ಕಂ॥ ಅಱಿವುಳ್ಳವರೊಳ್ ಬೆರಸದು
ದಱಿಂದಮಱಿಯದರೊಳಪ್ಪ ಪರಿಚಯದಿಂದಂ ।
ನೆಱೆಯಿಂದ್ರಿಯಮಂ ಗೆಲ್ಲದು
ದಱಿಂದಮಕ್ಕುಂ ಜನಕ್ಕೆ ಹೀನಂ ಬೆಸನಂ ॥ ೧೬೬ ॥

ಬೆಳೆದೊಱಗಿದ ಕಳವೆಗಳುಂ
ತಿಳಿಗೊಳದೊಳಗಲರ್ದ ಸರಸಿಜಪ್ರತತಿಗಳುಂ ।
ಕಳಹಂಸೆಗಳ್ಗೆ ಕೋಮಳ
ವಿಳಾಸವತಿಗಳ್ಗೆ ಪಡೆಗುಮೊಸಗೆಯನಾಗಳ್ ॥ ೧೬೭ ॥

ತಿಳಿಗೊಳಗಳುಮಮಳಾಶಾ
ವಳಯಮುಮತಿಧವಳಜಳದ ಜಳಧರಪಥಮುಂ ।
ಕೊಳಪೆಳವೆಱೆಯುಂ ತಳೆದುವು
ಮುಳಿಸಂ ಕಾಮಿಗಳ ಚಿತ್ತದೊಳ್ ನೆಲಸಿದುದಂ ॥ ೧೬೮ ॥

(ಇಂತು ಹೇತ್ವಳಂಕಾರಂ)

(೨೬) ವಿಭಾವನಾಳಂಕಾರ ಲಕ್ಷಣಂ.

ಕಾರಣಮನಱಿಪೆ ನಿಜಸಂ
ಸ್ಕಾರಗುಣಾತಿಶಯದೊಳ್ ತಗುಳ್ಚುವುದಕ್ಕುಂ ।
ಸಾರಂ ವಿಭಾವನಾಳಂ
ಕಾರಂ ಮತ್ತದಱ ಲಕ್ಷ್ಯಮೀತೆಱನಕ್ಕುಂ ॥ ೧೬೯ ॥

ಲಕ್ಷ್ಯಂ.

ಸಮಱುಗೆಯಿಲ್ಲದ ಮಱುಕಮು
ಮಮರ್ದಿರೆ ಕೆಯ್ಗೆಯ್ದೊಪ್ಪುವಂದಮುಮವಳಾ ।
ನೆವಮಿಲ್ಲದ ದರಹಸಮುಂ
ಸಮದಾಲಸಲಲಿತಗಮನಮುಂ ಸೊಗಯಿಸುಗುಂ ॥ ೧೭೦ ॥

(ಇಂತು ವಿಭಾವನಾಳಂಕಾರಂ)

(೨೭) ಲೇಶಾಲಂಕಾರ ಲಕ್ಷಣಂ.

ಕಂ॥ ಗುಣಪೊಳವಜ್ಞೆವುದಿನಿಸವ
ಗುಣಮಂ ದೋಷದೊಳಮಿನಿಸುಗುಣಮಮಂ ತಂದಿ ।
ರ್ದೆಣಿಸುವುದು ಲೇಶಮೆಂಬುದು
ಗಣಿದದಿನಿಂತಕ್ಕುಮದಱ ಲಕ್ಷ್ಯವಿಭಾಗಂ ॥ ೧೭೧ ॥

ಲಕ್ಷ್ಯಂಗಳ್.

ಮಾನಿಯುಮುದಾರಚರಿತನು
ಮಾನತರಿಪುನಿಕರನುಂ ಮುನಸ್ವಿಯುಮಿಂತಾ ।
ಮಾನಸರನಾರುಮಂ ಮನ
ಕೇನುಂಮುಟ್ಟಿಲ್ಲದಂತು ಬಗೆವುದು ದೋಷಂ ॥ ೧೭೨ ॥

ಕುಲಜನುಮಲ್ಲಂ ನಣ್ಪಿನ
ಬಲಮುಂ ತನಗಿಲ್ಲ ಕಣ್ಗಮೇಬಿದನಾರೊಳ್ ।
ನೆಲಸಿನೆಲ್ಲಿಯುಮನವಂ
ಚಲನೆಂದುಂ ಪತ್ತುವಿಡವದೊಂದುಂಟು ಗುಣಂ ॥ ೧೭೩ ॥

(ಇಂತು ಲೇಶಾಲಂಕಾರಂ)

(೨೮) ಉದಾತ್ತಾಲಂಕಾರ ಲಕ್ಷಣಂ.

ಮಿಗೆ ಮನದ ಪೆಂಪುಮಂ ಕೈ
ಮಿಗೆ ವಿಭವದ ಪೆಂಪುಮಂ ವಿಶೇಷಿಸಿ ಪೇೞಲ್ ।
ಬಗೆವುದುದಾತ್ತಾಲಂಕಾ
ರಗುಣೋದಯಮದಱದಿಂತು ಸದುದಾಹರಣಂ ॥ ೧೭೪ ॥

ಲಕ್ಷ್ಯಂಗಳ್.

ಚಲದೆಡೆಗೆ ಪಿರಿದು ರಜಮುಂ
ನೆಲನುಂ ಪ್ರಿಯದೆಡೆಗೆ ಕಿಱಿದು ಕೊಳಲುಂ ಕುಡಲುಂ ।
ಚಲಮುಂ ಪ್ರಿಯಮುಂ ಬೞಿ ಸಮ
ಬಲಮಾಗಿರೆ ನೆಗೞ್ವ ಬಗೆಗೆ ಕಿಱಿದೇಂ ಪಿರಿದೇಂ ॥ ೧೭೫ ॥

ಕಂ॥ ಅೞಿದೞಿಪಿ ಬೞಿಯ ನುೞಿಯದೆ
ಪೞಿವರುಮಂ ತವಿಸಿ ಕೞಿಯದುೞಿವಳನಾದಂ ।
ಪೞಿಕೆಯ್ದು ತೊೞ್ತನುೞಿದಂ
ತುೞಿದ ಮಹಾಪುರುಷರೞಿಯದುೞಿದರೆ ಸಿರಿಯಂ ॥ ೧೭೬ ॥

ಕಸವರಮೆಂಬುದು ನೆಱೆ ಸೈ
ರಿಸಲಾರ್ಪೊಡೆ ಪರವಿಚಾರಮುಮಂ ಧರ್ಮಮುಮಂ ।
ಕಸವೇಂ ಕಸವರಮೇನು
ಬ್ಬಸಮಂ ಬಸಮಲ್ಲದಿರ್ದು ಮಾಡುವರೆಲ್ಲಂ ॥ ೧೭೭ ॥

ಪಾೞಿ ನಿಲೆ ನೆಗೞಿ ಬಾೞ್ವುದು
ಬಾೞೆಂಬುದು ನಿಕ್ಕುವಂ ಗುಣಗ್ರಾಮಣಿಗಳ್ ।
ಪಾೞ್ಗಾಗೆ ಕೆಗೞೆ ಬಾೞ್ವಾ
ಬಾೞೇನಾಚಂದ್ರತಾರಮೋ ಮಾನಸರಾ ॥ ೧೭೮ ॥

ಪೊಲ್ಲಮೆಯುಂ ಗುಣಮುಂ ತಮ
ಗಲ್ಲದೆ ಪುದುವಲ್ಲ ಮತ್ತೆ ತನಗುಂ ಪೆಱರ್ಗಂ ।
ನಿಲ್ಲದೆ ಜನಮುಂ ತಾಗಿಯು
ಮೆಲ್ಲಂ ಮುನಿಸೊಸಗೆವೆರಸು ಪೞಿಗುಂ ಪೊಗೞ್ಗುಂ ॥ ೧೭೯ ॥

ಮಿಗೆ ಪೞಿವರೆನ್ನನೆನ್ನದೆ
ಪೊಗೞ್ವರ್ ನೆರೆದೆಲ್ಲರೆನ್ನನೆನ್ನದೆ ತನ್ನೊಳ್ ।
ಬಗೆದುಭಯಲೋಕಹಿತದೊಳ್
ನೆಗೞ್ಗೆ ಜನಂ ಪೞಿಗೆ ಪೊಗೞ್ಗೆ ತನಗೇನದಱೊಳ್ ॥ ೧೮೦ ॥

ಪ್ರಣತಾರಿ [1]ತ್ರುಟಿತಮುಕ್ತಾ
ಮಣಿಗಳ್ ಮಾತ್ರಾಂಕದಿಂ ಕೞಲ್ದುದಿರೆ ಸಭಾಂ ।
ಗಣಮೊಪ್ಪೆ ಹೀರನಾರಾ
ಯಣನಾ ತಾರಕಿತನಭದವೋಲ್ ಸೊಗಯಿಸುಗುಂ ॥ ೧೮೧ ॥

---

1. ತ್ರುಟಿತ ಎಂಬಲ್ಲಿ ತ್ರು ಎಂಬಕ್ಷರಕ್ಕೆ ಶೈಥಿಲ್ಯವನ್ನು ಹೇಳಬೇಕು. ಇದು ವ್ಯಾಕರಣ ಶುದ್ಧವಲ್ಲ.

ಕಂ॥ ಪರಚಕ್ರಭೂಪರಟ್ಟಿದ
ಕರಿಗಳ್ ಬಿಡುತರ್ಪ ಮದದ ಪೊನಲಿಂದೆತ್ತಂ ।
[ನರಲೋಕ ಚಂದ್ರನಾ] ಮಂ
ದಿರದೊಳಗೆಲ್ಲಕಾಲಮುಂ ಕೆಸಱಿಕ್ಕುಂ ॥ ೧೮೩ ॥

(ಇಂತುದಾತ್ತಾಲಂಕಾರಂ)

(೨೯) ಅಪಹ್ನುತ್ಯಲಂಕಾರ -ಲಕ್ಷಣಂ.

ಅತಿಶಯಿತವಸ್ತುವಿಷಯ
ಪ್ರತೀತಿಯಂ ಮಱಸಿ ನಿಱಿಸಿ ಪೇೞ್ವುದು ಪೆಱತಂ ।
ಸತತಮಪಹ್ನುತಿ ಸದಳಂ
ಕೃತಿ ಮತ್ತಿಂತಕ್ಕುಮದಱ ಲಕ್ಷ್ಯವಿಕಲ್ಪಂ ॥ ೧೮೪ ॥

ಲಕ್ಷ್ಯಂಗಳ್.

ಅಮೃತಮಯಕಿರಣನೆಂಬುದು
ಮಮರದು ಶಿಶಿರಾಂಶುವೆಂಬುದುಂ ಶಶಿಗೆಂದುಂ ।
ಸಮನಿಸಿ ವಿಷಕಿರಣನುಮನ
ಲಮರೀಚಿಯುಮೆಂದೆನಲ್ಕೆ ಮೋಹಾಪೋಹಂ ॥ ೧೮೫ ॥

(ಮೋಹಾಪೋಹಂ)

ಕುಸುಮಂಗಳೆಂಬ ಮಾತದು
ಪುಸಿ ದಹನಮಯಂಗಳಂಬುಗಳ್ ಮನಸಿಜನಾ ।
ಜಸಮಱಿಯೆ ಸುಡುವುದೆರ್ದೆಯಂ
ಬಿಸಿಯವಿವೆಂದಿಂತೆ ಪೇೞ್ಗೆ ಧರ್ಮಾಪೋಹಂ ॥ ೧೮೬ ॥

(ಧರ್ಮಾಪೋಹಂ)

ಸ್ಮರನಸ್ತ್ರಸಮಿತಿಯದು ನಿ
ರ್ಭರಮಂಗಮನರ್ಚಿ ಪೋಗೆಯುಂ ಪೋೞಬಱಿಯಂ ।
ದೊರೆಕೊಳಿಸಲಾಗದದಱಿಂ
ಶರತತಿಯಲ್ತೆಂಬುದಿಂತು ಧರ್ಮಾಪೋಹಂ ॥ ೧೮೭ ॥

(ಧರ್ಮಾಪೋಹಂ)

ಕಂ॥ ಸ್ಮರನೈದಂಬುಗಳಲ್ಲಿವು
ಶರಕೋಟಿಗಳಿಲ್ಲದಾಗಳಿಂತೀ ಲೋಕಾಂ।
ಶರವರ್ಷಿ ವಿರಹಿಗಣಮಂ
ನಿರುತಂ ಮರ್ದಿಸುವವನೆನೆ ಸುಗುಣಾಪೋಹಂ ॥ ೧೮೭ ॥

(ಸುಗುಣಾಪೋಹಂ)

[ಇಂತಪಹ್ನುತ್ಯಲಂಕಾರಂ]

(೩೦) ರಸವದಲಂಕಾರಂ.

ನವವಿಧರಸಂಗಳಂ ಮನ
ಕೆವರೆ ನಿರೂಪಿಸುವವಚನವಿರಚನೆ ರಸವ।
ತ್ಯವಿಧಾಲಂಕಾರಂ ಕೇಳಿ
ತು ವಿಕಲ್ಪಿಸಿ ತೋರ್ಪೆನದಱ ಲಕ್ಷ್ಯಕ್ರಮಮಂ ॥ ೧೮೮ ॥

ರಸಭೇದಂಗಳ್.

ವೀರಾದ್ಭುತಕರುಣಾಶೃಂ
ಗಾರಭಯಾನಕಸರೌದ್ರ ಬೀಭತ್ಸಮಹಾ।
ಸಾರತರಹಾಸ್ಯ ಶಾಂತಾ
ಧಾರಂ ನವವಿಧವಿಕಲ್ಪಮಾರಸಮಾರ್ಗಂ ॥ ೧೮೯ ॥

ರಾವಣನಂ ಕೊಂದು ಜಯ
ಶ್ರೀವಧುವಂ ತಾಳ್ದಿ ಮುಯ್ಪಿನೊಳ್ ವರಸೀತಾ।
ದೇವತೆಯುಂ ತರ್ಪನ್ನೆಗ
ಮೋವದೆ ಪುರುಷಬ್ರತೋಚಿತಂ ವೀರರಸಂ ॥ ೧೯೦ ॥

(ವೀರರಸಂ)

ಜಲನಿಧಿಯಂ ಪಾಯ್ದೊರ್ವನೆ
ನಿಲಿಕಿ ದಶಾನನನ ಪೊಲಲನಾಲಂಕೆಯನಾ।
ಕುಲಮಿಲ್ಲದಿಱಿದು ನಿಂದಂ
ಕಲಿಯಾವಂ ಬಗೆದು ನೋಟ್ಪೊಡದ್ಭುತಮಾದಂ ॥ ೧೯೧ ॥

(ಅದ್ಭುತರಸಂ)

ಕಂ॥ ಕರಿಕರಿದು ಮನೋಧೃತಿಯಿಂ
ನೆರೆವಾಸೆಯೊಳಿರ್ದಳಲ್ಲದುೞಿದೊಡೆ ನಿನ್ನಾ ।
ವಿರಹಾನಳನಾತಾಪದೆ
ಕೊರಗುಗುಮಿನ್ನಾಕೆಗಿನಿಸು ಕರುಣಿಸು ಮನದೊಳ್ ॥ ೧೯೨ ॥

(ಕರುಣರಸಂ)

ಪುಳಕಿತಕಪೋಳಫಳಕಂ
ವಿಳಸಿತಮದಿರಾರುಣೇಕ್ಷಣಂ ಸ್ಫುರಿತೋಷ್ಠಂ ।
ಕೆಳದೀ ನಿನ್ನ ಮುಖಂ ತಳ
ಮಳಗೊಳಿಸುಗುಮಿಂತು ನಿಭೃತಶೃಂಗಾರಂ[1] ॥ ೧೯೩ ॥

(ಶೃಂಗಾರರಸಂ)

ತಾಳತರುವಿತತಿಯೊಳ್ ಬೇ
ತಾಳಂಗಳ್ ಮೊೞೆದು ತೆಱೆದು ಬಾಯ್ಗಳನಾಪಾ ।
ತಾಳಬಿಲಂಗಳವೋಲ್ ತಳ
ತಾಳಲಯಕ್ರಮದೆ ಕುಣಿಯೆ ಭಯಮಯನಾದೆಂ ॥ ೧೯೪ ॥

(ಭಯಾನಕರಸಂ)

ಕೊಂದು ಜಟಾಯುವನಾತಂ
ಮುಂದಿಟ್ಟಾ ಜನಕಸುತೆಯನೊಯ್ದುಂ ಮತ್ತಾ ।
ಪಂದೆಯನಂತಕಮುಖದೊಳ್
ತಂದಿಟ್ಟಂದಲ್ಲದುೞಿಗುಮೇ ರೌದ್ರರಸಂ ॥ ೧೯೫ ॥

(ರೌದ್ರರಸಂ)

ನವವಿವರಾವೃತಪೂತ
ದ್ರವತ್ವಗಾವೃತವಿಮಿಶ್ರಮಾಂಸೋಪಚಿತಂ ।
ಧ್ರುವಮಸುಚಿತ್ರಭ್ರಮಿತ
ಕ್ರಿಮಿಹಂ ಮೆಯ್ ಬಗೆವೊಡಿಂತು ಕಿಸುಗುಳಮಾದಂ ॥ ೧೯೬ ॥

(ಬೀಭತ್ಸರಸಂ)

1. ಮದ್ರಾಸ್ ಲೈಬ್ರರಿ ತಾಳಪತ್ರಪ್ರತಿಯಲ್ಲಿ ಇಲ್ಲಿಯವರೆಗೆ ಮಾತ್ರವಿದೆ. ಮುಂದಿನ ಪತ್ರಗಳು ಗಳಿತವಾಗಿವೆ.

ಕಂ॥ ಪರಪುರುಷಸೇವನಾಕೃತ
ಸುರತವಿಕಾರಂಗಳೆಲ್ಲಮಂ ನಿಜಪತಿಯೊಳ್ ।
ನೆರೆದಾಗಳೆ ಮಱೆಯಲ್ ಬಗೆ
ದಿರವದು ನಗಿಸಿತ್ತು ಪೀನಮಭಿಸಾರಿಕೆಯಾ ॥ ೧೯೭ ॥
(ಹಾಸ್ಯರಸಂ)

[ಮೃಗಗ]ಣದೊಳ್ ಪರಿಚಿತಮಂ
ದ್ವಿಗುಣಮದೋರಂತೆ ಮಟ್ಟಮಿರ್ದುದು ಮತ್ತಂ ।
ವಿಗತವಿಕಾರಾಕಾರಂ
ಸೊಗಯಿಸುಗುಂ ನಿನ್ನ ರೂಪು ಶಾಂತಾಧಾರಂ ॥ ೧೯೮ ॥
(ಶಾಂತರಸಂ)

(೩೧) ಊರ್ಜಿತಾಳಂಕಾರ ಲಕ್ಷಣಂ.

ಆರೂಢನಿಜಮನೋಹಂ
ಕಾರೋತ್ಕರ್ಷಪ್ರಕಾಶ ಮೂರ್ಜಿತಸದಳಂ[1] ।
ಕಾರಂ ತದಿ[ಯ ಭೇದ] ವಿ
ಚಾರಮನೀತೆಱವಿನಱಿದು ಕೊಳ್ಗೆ ಕವೀಶರ್ ॥ ೧೯೯ ॥

ಕೊಲ್ಲೆಂ ಬಿಸುಡಾಯುಧಮಂ
ಪುಲ್ಲಂ ಕರ್ಚೆಱು ಪುತ್ತನಡಿಗೆಱಗೆನ್ನಾ ।
ನಿಲ್ಲದೆ ತೊಲಗಿದಿರಿಂದಂ
ತಲ್ಲದೊಡೆೞ್ದಾರ್ದು ಕೆಯ್ದುಗೆಯ್ ನೀನೀಗಳ್ ॥ ೨೦೦ ॥

(೩೨) ವ್ಯಾವೃತ್ತ್ಯಲಂಕಾರ ಲಕ್ಷಣಂ. 2

ಮಗುೞ್ದಂ ಮ[ತ್ತಿನ] ಮಾತಂ
ನೆಗೞ್ದರೆ ಪೇೞ್ದಾಗಳಕ್ಕುಮಾವ್ಯಾವೃತ್ತಿ ।
ಸ್ವಗತಾಳಂಕಾರಂ ಬಗೆ
ಗಗಾಧಮನರದಱ ತೆಱನನೀಕುಱುಪುಗಳಿಂ ॥ ೨೦೧ ॥

1. ಮೂರ್ಜಸ್ವಿದಳಂ – ಎಂಬ ಪಾಠವು ಪೂರ್ವಾಚಾರ್ಯಸಮ್ಮತಪಾಠವು.
2. ಈ ಅಲಂಕಾರವನ್ನು ದಂಡಿಯು ಹೇಳಿಲ್ಲ.

ಲಕ್ಷ್ಯಂಗಳ್.

ಕಂ॥ ವಿರಹಂ ಪರಿತಾಪಮನಾ
ಪರಿತಾಪಮುಮಳಿಪನಳಿವು[ಮಾ] ವಲ್ಲಭನೊಳ್ ।
(ನೆರೆ)ದಿರ್ಪ ಬಗೆಯನಾನೆರೆ
ದಿರವುಂ ಸುರತಾನುರಾಗಮಂ ಪೆರ್ಚಿಸುಗುಂ ॥ ೨೦೨ ॥

ನುಡಿಯಂ ತಗುಳ್ಚಿ ನೋಟಂ
ನುಡಿ ಪರಿಚಯಮುಮಂ ತಗುಳ್ಚಿ ಪರಿಚಯಮುಳಿಪಂ ।
ತಡೆಯದೆ ತಗುಳ್ಚಿ ಮನವಳಿ
ಪೊಡಗೂ[ಡಿದು]ದಂ ತಗುಳ್ಚುಗುಂ ಕಾಮಿಗಳಾ ॥ ೨೦೩ ॥

(೩೩) ಪ್ರಿಯತರಾಲಂಕಾರ ಲಕ್ಷಣಂ.

ಪ್ರಿಯಕುಶಲಪೂರ್ವಕೋಚಿತ
ನಯವಿನಯೋದಾರರುಚಿರವಚನಪ್ರಾಯಂ ।
ಪ್ರಿಯತರಮೆಂಬುದು ಸಕಳ
ಕ್ರಿಯಾನುಗಮಿತಾರ್ಥಮಿಂತು(ತ)ದುದಾಹರಣಂ ॥ ೨೦೪ ॥

ಲಕ್ಷ್ಯಂ.

ಗು[ರುಜನ]ದ ಪರಕೆಯಂ ಬಂ
ಧುರಪುಣ್ಯಫಳಾನುಬಂಧಮಂ ನೆರೆದೆನ್ನೊಳ್ ।
ಪರಮಾನುಭಾವಭರಮಂ
ದೊರೆಕೊಂ(ಡು)ವದಿಂದು ಬರವಿನೊಳ್ ನಿಮ್ಮಡಿಯಾ ॥ ೨೦೫ ॥

(೩೪) ಆಶೀರಲಂಕಾರ ಲಕ್ಷಣಂ.

ದೊರೆಕೊಂಡು ಮನದ ಬಗೆಯಂ
ಪಿರಿದಾಗಿರೆ ಪಿರಿಯರೊಸಗೆಯಂ [ಬಗೆದಂ]ದುಂ ।
ಪರಮಾಶೀರರ್ಥಾಳಂ
ಕರಣಾಂತರಮದಱ ಲಕ್ಷ್ಯಮಿತೆಱನಕ್ಕುಂ ॥ ೨೦೬ ॥

ಲಕ್ಷ್ಯಂ.

ಕಂ॥ ಆಯುಂ ಶ್ರೀಯುಂ ವಿಜಯಮು
ಮಾಯತಿಯುಂ ನೃಪತಿ ನಿನಗೆ ನಿಜಸಂತತಿಯುಂ ।
ನ್ಯಾಯದೆ ಪೆರ್ಚುವುದಕ್ಕೀ
ತೋಯಧಿಧರ[ಣೀಧ]ರಾಧರಸ್ಥಿತಿವರೆಗಂ ॥ ೨೦೭ ॥

(೩೫) ಭಾವಿಕಾಲಂಕಾರಂ.

ಗೀತಿಕೆ॥ ಭಾವಮೆಂಬುದಕ್ಕುಂ ಕವಿಗಳಾ
ಭಾವಿಸಿ ಮನದ ಬಗೆಯೊಂದಿದರ್ಥಂ ।
ಕೇವಳಮದಱಿ[ಂ]ೞ[ಳ]ಂಕೃತಿ
ಭಾವಿಕಮೆಂಬುದಕ್ಕುಂ ನೃಪತುಂಗದೇವಮತದಿಂ ॥ ೨೦೮ ॥

(೩೬) ಧ್ವನ್ಯಳಂಕಾರಂ.

ಕಂ॥ ಧ್ವನಿಯೆಂಬುದಳಂಕಾರಂ
ಧ್ವನಿಯಿಸುಗುಂ ಶಬ್ದದಿಂದಮರ್ಥದೆ ದೂಷ್ಯಂ ।
ನೆನೆವುದಿದನಿಂತು ಕಮಳದೊ
ಳನಿಮಿಷಯುಗಮೊಪ್ಪಿ ತೋರ್ಪುದಿಂತಿದು ಚೋದ್ಯಂ ॥ ೨೦೯ ॥

(ಮಹಾಕಾವ್ಯನಿಷ್ಠಮಾದ ಅಷ್ಟಾದಶವರ್ಣನೆಗಳ ವಿವರಣಂ).

ಮಾಲಿನೀವೃತ್ತಂ॥ ಅತಿಶಯಮಿತಿಹಾಸೋಪಾಶ್ರಯಂ ಮೇಣ್ ಕಥಾವಿ
ಶ್ರುತಚತುರ[1]ವಿ [ಕಾ] ಶೋ[1]ತ್ಪಾದಿತಾರ್ಥೋತ್ಕರಂ ಮೇ ।
ಣತಿಕುಶಲಬಲೀಲಾಚಾರಲೋಕೋಪಕಾರೋ
ದಿತಪರಮಗುಣೈಕೋದಾರಧೀರಾಧಿಕಾರಂ ॥ ೨೧೦ ॥

ಪರಮಸುಖಪದಶ್ರೀಧರ್ಮಕಾಮಾರ್ಥಮೋಕ್ಷ
ಸ್ಥಿರವಿಷಯವಿಶೇಷಾಖ್ಯಾನವಿಖ್ಯಾತತತ್ವಂ ।
ಪುರಜನಪದಶೈಲಾದಿತ್ಯಚಂದ್ರೋದಯಾಸ್ತಾಂ
ತರಸಮೃಗಗಣಬ್ಯಾವರ್ಣನಾನಿರ್ಣಯಾರ್ಥಂ ॥ ೨೧೧ ॥

1. ಕವೀಶೋ.

ಮಾಲಿನೀವೃತ್ತಂ॥ ಸಮುದಿತಕುಸುಮಾಮೋದೋದಯೋದ್ಯಾನಲೀಲಾ
ಕ್ರಮವಿಹಿತಜಲಕ್ರೀಡಾವಿನೋದಾದಿನೀತಂ ।
ಪ್ರಮದಮದನಮಾದ್ಯದ್ಯೌವನೋದ್ಯಾನರಾಮಂ
ರಮಣ ರಣಿ(ತ) ಗೋಷ್ಠೀಬಂಧಸಂಧಿಪ್ರಬಂಧಂ ॥ ೨೧೨ ॥

ವಿವಿಧವಿಭವಶೋಭಾರಂಭಲಂಭಪ್ರಲಂಬೋ
ದ್ಭವವಿಹಿತವಿವಾಹೋತ್ಸಾಹ ಸಾಕಲ್ಯಕಲ್ಪಂ ।
ಪ್ರವರನೃಪಕುಮಾರಾತ್ಮೋದಯಾವಿಃಪ್ರಮೋದಾ
ಸವಸಮುದಿತಸೇವಾರಾತಿವೃತ್ತಾಂತವೃತ್ತಂ ॥ ೨೧೩ ॥

ನಯವಿನಿಮಯನಾನಾಮಂತ್ರದೂತಪ್ರಯಾಣಾ
ಕ್ಷಯಸಮಯವಿಳಾಸೋಲ್ಲಾಸಿ ಸಂಗ್ರಾಮಿತಾಂಗಂ ।
ಭಯವಿರಹಿತವೀರ್ಯೌದಾರ್ಯಗಂಭೀರಕಾರ್ಯಾ
ಶ್ರಯವಿಶದಗುಣಶ್ರೀನಾಯಕೋತ್ಕರ್ಷವೇದ್ಯಂ ॥ ೨೧೪ ॥

ವಿಳಸಿತಸದಳಂಕಾರಾದಿಸಂಸಾಧಿತಾರ್ಥಂ
ಕುಳವಿದಿತಪದೋದ್ಯತ್ಕೋಮಳಾಳಾಪಶೀಳಂ ।
ಸುಳಲಿತಗುಣನಾನಾವೃತ್ತಜಾತಿಪ್ರವೃತ್ತಾ
ಸ್ಖಳಿತರಸವಿಶೇಷೋಪಾಶ್ರಯ ಶ್ರೀನಿವೇಶಂ ॥ ೨೧೫ ॥

ನಯವಿದುದಿತಯುಕ್ತಿವ್ಯಕ್ತಿಲೋಕಪ್ರತೀತ್ಯಾ
ಶ್ರಯಸಕಳಕಳಾಲೀಲಾಕರಾಲ್ಪೋಪಜಲ್ಪಂ ।
ನಿಯತಸಮಯಸಾರಾಸಾ(ರಾ)ಧನೀಯಾದಿತಾರಾ
ನ್ವಯಪರಮತಪೋನುಷ್ಠಾನಮಿಷ್ಟಾರ್ಥಸಿದ್ಧಂ ॥ ೨೧೬ ॥

ವಿಗತಮಳಮುಪಾತ್ತಾರಾತಿ ರಾ(ಸಾ) ರ್ಥಾರ್ಥವೀರಂ
ಸ್ಥಗಿತಮಮಿತನಾನಾಶಬ್ದವೀಚಿಪ್ರಸಂ(ಪಂ)ಚಂ ।
ನಿಗದಿತಗುಣರತ್ನೈಕಾಕರಾ(ರಂ) ಸಾಗರಂಬೋಲ್
ಸೊಗಯಿಸಿ ಧರಣೀ [ಚಕ್ರಾಂಬ]ರಾಕ್ರಾಂತಮಕ್ಕುಂ ॥ ೨೧೭ ॥

ಗೀತಿಕೆ॥ ಇಂತು ಮಿಕ್ಕ ವರ್ಣನೆಗಳ್
ಸಂತತಮೊಂದಾಗಿ ಪೇೞ್ದ ಕಾವ್ಯಂ ಧರೆಯೊಳ್ ।
ಸಂತತಿ ಕಿಡದೆ ನಿಲ್ಕುಮಾಕ
ಲ್ಪಾಂತಂಬರಮಮೋಘವರ್ಷಯಶಂಬೋಲ್ ॥ ೨೧೮ ॥

ಗ್ರಂಥೋಪಸಂಹೃತಿ.

ನೃಪತುಂಗ ಸಭಾಸದಪ್ರಶಂಸೆ.

ದ್ರುತವಿಳಂಬಿತಂ॥ ಸಕಳಲೌಕಿಕಸಾಮಯಿಕೋರುವೈ
ದಿಕವಿಶೇಷವಿವೇಕಪರಾಯಣಂ ।
ಪ್ರಕಟಿತೋಕ್ತಿವಿವಿಕ್ತಿಕಳಾಕಳಾ
ಪಕಮುಪಾಹಿತಸಾಹಿತವಿದ್ಯೆಯೊಳ್ ॥ ೨೧೯ ॥

ಅತಿಶಯಪ್ರ(ವಿ)ತಿಭಾವಿಭವಂ ಮಹಾ
ಚತುರವೃತ್ತಿ ನಿತಾಂತಮನಾಕುಳಂ ।
ಪ್ರತಿವಿತರ್ಕಿತಲಕ್ಷಣಲಕ್ಷ್ಯಮಾ
ಶ್ರಿತಮಹಾನೃಪತುಂಗಸಭಾಸದಂ ॥ ೨೨೦ ॥

*ವೃ॥ ಭಾವಿಸಲ್ ಬಗೆದವಂ ಮಿಗೆ ಜಾಣನಶೇಷಭಾ
ಷಾವಿಶೇಷವಿಷಯಾತಿಶಯಾಮಳಕೌಶಳಂ ।
ದೇವತಾಗುರುಗುಣೋದಯವೃದ್ಧಜನೋಪಸಂ
ಸೇವನಾಪರನಪಾಕೃತವೈಕೃತಚಾಪಳಂ ॥ ೨೨೧ ॥

*ವೃ॥ ಪರಮಕಾರು(ರ)ಣಿಕನಪ್ಪನಪಾಕೃತದೋಷಸಾ
ದರಮನಾಗಿಸುವನಪ್ಪನಶೇಷಜನಂಗಳೊಳ್ ।
ಪರಗುಣಾಸ್ತ (ಸ) ಹನನಲ್ಲದನಾತ್ಮಗುಣೋದಯಾಂ
ತರಸರೂಪನ.....................ಪಾರಪರಾಯಣಂ ॥ ೨೨೨ ॥

ಮಂಗಲವೃತ್ತಂ॥ ಬಗೆದು ಮೋಕ್ಷ ಪರಮಧರ್ಮಮನರ್ಥಿಯಿನನ್ವಯ
ಪ್ರಗ(ತಿ)ಣಿತಾಭ್ಯುದಯಮೋಕ್ಷಸುಖಾಶ್ರಯಹೇತುವಂ ।
ನೆಗಟ್ಟ್ಗೆ ಮೋಣುದಿತನಿರ್ಮಳಕೀರ್ತಿವಿತಾನಮಂ
ಜಗದಗಾಧವಿವರೋದರದೀಪವಿಕಲ್ಪಮಂ ॥ ೨೨೩ ॥

ಗೀತಿಕೆ॥ ಕೂಡೆ ಪೇಳ್ದ ನುತಕಾವ್ಯಮನಿಂತಭಿಮಾನಿ ತಾ(ಂ) ನಿ(ರ)
ಗೀಡಿತಮಹಾಪುರುಷವ್ರತನಿಶ್ಚಿತಂ ।
ಕೂಡದಂತೆ ಪೆಱರೊ ಮೆಚ್ಚಿನೊಳೀತೆಱನಪ್ಪೊಡಂ
ನೋಡದಂ ಕುಱಿತಾವನಮೋನುಮಂ ॥ ೨೨೪ ॥

* ಈ ವೃತ್ತಗಳ ಹೆಸರು ಪ್ರಸಿದ್ಧವಾಗಿರುವ ಛಂದೋಗ್ರಂಥಗಳಲ್ಲಿಲ್ಲ.

*ವೃ॥ ಅಂತು ಬಿಟ್ಟು ತೆಱದಿಂ ವರಗೀತಗುಣೋದಯೈ
ಕಾಂತ..............ವಿಷಯಾಶಯರಾಗಿ ನಿರಾಕುಳಂ ।
ಸಂತತಂ ನುಡಿಗಳೊಳ್........................
..................ಬಗೆದು ಪೇೞ್ವುದುದಾರ ಕವೀಶ್ವರಂ ॥ ೨೨೫ ॥

ಗೀತಿಕೆ॥ ಪಾರ್ಥಿವಲೋಕನಪ್ಪನೆಂದುಂ ಕವಿ ವರ್ಣಿಕುಂ
ಸ್ವಾರ್ಥಚಯಂ ನುತಸರಸ್ವತೀ ।
ತೀರ್ಥಾವತಾರ ಮಾರ್ಗನೆಸಕಂ
.... ॥ ೨೨೬ ॥

*ವೃ॥ ಕುಲಜಾತಿ ದೇಶವಿಶದಂ ವಿನಯೋಪಚಾರಂ
ನಿಲಯೈಕ ವೃತ್ತಿ............................।
ವಿಲಸದ್ಗುಣಾಗುಣವಿವರ್ತಿ ಗುರೂಪದೇಶಾ
ಮಲಿನಾವಬೋಧವಿದಿತಾಖಿಳಚೋದ್ಯವಿ[ಂ]ದೇಂ ॥ ೨೨೭ ॥

ಮದಮಾನಮಾಯಭಯಲೋಭವಿಷಾದ ಹರ್ಷಾ
ಭ್ಯುದಿತಾಂತರಂಗರಿಪುವರ್ಗ್ಗಜಯಾವತಾರಂ ।
ವಿದಿತ......ವಿಭವ ಭಾವಿತ ವಿಶ್ವಲೋಕಂ
ಬುಧಗೋರ್ತು ಕಾವನನುನೀತಗೃಹೀತವಾಕ್ಯಂ ॥ ೨೨೮ ॥

ಪರಮಾನುಭಾವನಭಿಮಾನಿ ವಿನೋದಶೀಲಂ
ಪರನತ್ಯುದಾರಚರಿತೋದಯನೇಕರೂ[ಪಂ] ।
ಸರಸಾಶ್ರಯಪ್ರವರಮೂರ್ತ್ತಿ ಪರೋ[ಪಕಾರಂ]
ನಿರುತಂ ಗುಣೋದಯನಕಾರಣಧುರ್ಯಮಿತ್ರಂ ॥ ೨೨೯ ॥

ಅಸಹಾಯಸಾಹಸ ವಿನೋದಿ ವಿವಿಕ್ತಚಿತ್ರ
ಪ್ರಸವ ಪ್ರಕಾಶಿತಮಹೋದಯತತ್ವಸತ್ವ ।
ವ್ಯಸನವ್ಯಪೇತಮಪನೀತಕಲಾಕಲಾಪಂ
[ಸ]ಶಶಿ ಖಂಡನಿರ್ಮ್ಮಲಯಶೋವಿವಿಧಾವತಂಸಂ ॥ ೨೩೦ ॥

* ಈ ವೃತ್ತಗಳ ಹೆಸರು ಈಗ ಪ್ರಸಿದ್ಧವಾಗಿರುವ ಛಂದೋಗ್ರಂಥಗಳಲ್ಲಿಲ್ಲ.

ಪುಷ್ಪಿತಾಗ್ರಾವೃತ್ತಂ॥ ಪರಿವೃತ ನೃಪತುಂಗ ದೇವಮಾರ್ಗಾ-
ತರಗತಬೋಧವಿಶೇಷಯಾನಪಾತ್ರಂ।
ಪರಮಗುಣಪರೀತಕಾವ್ಯರತ್ನಾ
ಕರದುರುಪಾರಮನೆಯ್ದುಗುಂ ಮಹಾತ್ಮಂ　॥ ೨೩೧ ॥

*ಕಂ॥ ದ್ವಿಪ್ರಾಸಂಸುಭಗಂ ದ್ವಂ
ದ್ವಪ್ರಾಸಂ ಕಾವ್ಯರಚನೆ(ಗುಚಿ)ತ(ಮೆ)[ನಿ] ಪ್ಪಾ।
ತ್ರಿಪ್ರಾಸಂ [ಸಲೆಯಂತಾ
ದಿಪ್ರಾಸಂ] ಬೇಱಿ ನಾಲ್ಕುತೆಱನಾಗಿಕ್ಕುಂ　॥ ೨೩೨ ॥

†ಅರಸರೊಳೆಲೆ ನೀಂ ಸರಸಮ
ನರಸಿಯವೊಲಾಡುತಿರ್ಪೆ ನಿನಗಿದು ಗುಣಮೇ।
ಅರಸರ್ ಸರಸಮನಱಿವರೆ
ಸರಸಮನಾಡರಸರಲ್ಲದವರೊಳ್ ಮಗಳೇ　॥ ೨೩೩ ॥

*ಒಂದೊಂದಱ ಸೌಂದರ್ಯಮ
ನೊಂದೊಂದೀಕ್ಷಿಸಲೊಡರ್ಚೆ ನಾಸಿಕಮಡ್ಡಂ।
ಬಂದಂದಮನೀಕ್ಷಿಸಿ ಪೆಱ
ಗಿಂ[ದಂ]ದೀಕ್ಷಿಸು[ವು]ವವಳ ನಿಡಿಯೆಸಳ್ಗಣ್ಗಳ್　॥ ೨೩೪ ॥

ನುಡಿಸಿದನೆನ್ನಂ ನಲ್ಲಂ
ಬಿಡಿಸಿದನೆನ್ನಂತರಂಗದನುತಾಪಮನೊ।
ಲ್ದುಡಿಸಿದನುಳ್ಳೊಳ್ಪುಡೆಯಂ
ತುಡಿಸಿದನೆನಗರಕೆಯಪ್ಪ ಮಣಿಭೂಷಣಮಂ　॥ ೨೩೫ ॥

---

* ಈ ಪ್ರಾಸವಿಚಾರವು ಗ್ರಂಥದ ಉಪಸಂಹಾರಸ್ಥಳದಲ್ಲಿ ಉಕ್ತವಾಗಿರುವುದು ಅಸ್ಥಾನೋಕ್ತ ದೋಷಕ್ಕೆ ಗುರಿಯಾಗಿರುವುದು. ಆದುದರಿಂದ ಇದನ್ನು ಆಧುನಿಕರು ಸೇರಿಸಿರಬಹುದು. ಹಾಗಿಲ್ಲದಿದ್ದರೆ ಈ ಭಾಗವು ಎರಡನೆಯ ಪರಿಚ್ಛೇದದ ಪ್ರಾಸ ವಿಷಯವನ್ನು ತಿಳಿಸುವ ಪ್ರಕರಣದಲ್ಲಿರುವ ೪೩ ನೆಯ ಕಂದದ ಮುಂದಾದರೂ ಇರಬೇಕು.

† ಇದು ಶಬ್ದಾನುಶಾಸನದಲ್ಲಿ ಉದ್ಧೃತವಾಗಿದೆ.

* ಇದು ಲೀಲಾವತೀಕಾವ್ಯದಲ್ಲಿದೆ. ಆದರೆ ಉತ್ತರಾರ್ಧದ ಪಾಠವು ತುಂಬಾ ವ್ಯತ್ಯಸ್ತವಾಗಿರುವುದು. (ಆ. 3. ಪ. 42).

ಗೀತಿಕೆ॥ ತಾರಾಪತಿವತ್ಕೀರ್ತಿವಿಹಾರಾ
[ಹಾರ] ಪ್ರಭಯಾ ನಿಜತನುಪೂರಾ ।
ಪೂರಾಶ್ರಿತಹೃತ್ಕ್ಲೇಶವಿದೂರಾ
ದೂರೀಕೃತ ಬಲವಿಸ್ತಾರಾ ॥ ೨೩೭ ॥

ವ॥ ಇವು ಕ್ರಮದಿಂ ದ್ವಿಪ್ರಾಸ, ದ್ವಂದ್ವಪ್ರಾಸ, ತ್ರಿಪ್ರಾಸ, ಅಂತಾದಿಪ್ರಾಸ ಈ ನಾಲ್ಕುಬೇಱಿ ಅನ್ಯಮಾರ್ಗ್ಗಲಕ್ಷಣಂ.

ವೃ॥ ನಿರವದ್ಯಾನ್ವಯನುದ್ಧಮುದ್ಧತಮ[ಹಾಕ್ಷೀ]ರಾಬ್ಧಿ ಡಿಂಡೀರಪಾಂ
ಡುರಮಾಕ್ರಾಂತ ಸಿ[ಸು]ಶೈಲಸಾಗರಧರಾಶಾಚಕ್ರವಾಳಂಬರಂ ।
ಪರಮಶ್ರೀವಿಜಯಪ್ರಭೂತಿಜಯಶ[ಂ]ಸ್ತ್ರೀಬಾಲವೃದ್ಧಾಹಿತಂ
ಪರಮಾನಂದಿತಲೋಕವೊಪ್ಪೆ ನೆಲೆಗೊಳ್ಗಾಚಂದ್ರತಾರಂಬರಂ ॥ ೨೩೭ ॥

ಇದು

ಪರಮ ಸರಸ್ವತೀ ತೀರ್ತ್ಥಾವತಾರ ನೃಪತುಂಗ ದೇವಾನುಮತ

ಮಪ್ಪ

ಕವಿರಾಜಮಾರ್ಗದೊಳ್

ಅರ್ತ್ಥಾಲಂಕಾರ ಪ್ರಕರಣಂ.

॥ ತೃತೀಯ ಪರಿಚ್ಛೇದಂ ॥

ಕವಿರಾಜಮಾರ್ಗಾಲಂಕಾರಂ

ಸಮಾಪ್ತಂ.

ಪರಿಶಿಷ್ಟಂ ೧.

ನೃಪತುಂಗ, ದಂಡಿ, ಭಾಮಹ ಇವರುಗಳು ಹೇಳಿರುವ ಅರ್ಥಾಲಂಕಾರಗಳ ಹೆಸರು, ಸಂಖ್ಯೆ ಕ್ರಮ ಇವುಗಳ ತಾರತಮ್ಯವನ್ನು ತೋರಿಸುವ ಪಟ್ಟಿ.

ಕವಿರಾಜಮಾರ್ಗದಲ್ಲಿ ಹೇಳಿರುವಂತೆ ಅಲಂಕಾರಗಳ		ಕಾವ್ಯಾದರ್ಶದಲ್ಲಿ ಹೇಳಿರುವಂತೆ ಅಲಂಕಾರಗಳ		ದಂಡಿಯು ಹೇಳಿರುವುದಕ್ಕೆ ಪ್ರತಿಯಾಗಿ ಕವಿರಾಜಮಾರ್ಗದಲ್ಲಿಯ ಹೆಸರು, ಸಂಖ್ಯೆ.		ಭಾಮಹನು ಹೇಳಿರುವ ಅಲಂಕಾರಗಳ	
ಸಂಖ್ಯೆ.	ಹೆಸರು.	ಸಂಖ್ಯೆ.	ಹೆಸರು.			ಸಂಖ್ಯೆ.	ಹೆಸರು.
1	ಜಾತಿ	1	ಸ್ವಭಾವಾಖ್ಯಾನಂ	1	ಜಾತಿ	...	ಇಲ್ಲ
2	ರೂಪಕಂ	2	ಉಪಮಾ	7	,, (ಉಪಮಾನಂ)	3	...
3	ಅರ್ಥಾಂತರವಿನ್ಯಾಸಂ	3	ರೂಪಕಂ	2	,,	1	...
4	ಅತಿರೇಕಂ (ವ್ಯತಿರೇಕ)	4	ದೀಪಕಂ	6	,,	2	...
5	ಯಾಥಾಸಂಖ್ಯಂ	5	ಆವೃತ್ತಿಃ	32	ವ್ಯಾವೃತ್ತಿ (ಆವೃತ್ತಿ)	...	ಇಲ್ಲ
6	ದೀಪಕಂ	6	ಆಕ್ಷೇಪಃ	10	,,	4	...
7	ಉಪಮೆ (ಉಪಮಾನಂ)	7	ಅರ್ಥಾಂತರನ್ಯಾಸಃ	3	ಅರ್ಥಾಂತರವಿನ್ಯಾಸ	5	...
8	ಅತಿಶಯಂ	8	ವ್ಯತಿರೇಕಃ	4	ಅತಿರೇಕ (ವ್ಯತಿರೇಕ)	6	...
9	ಸದೃಶಯೋಗಿಕೆ	9	ವಿಭಾವನಾ	26	,,	7	...
10	ಆಕ್ಷೇಪಂ	10	ಸಮಾಸೋಕ್ತಿಃ	16	ಸಮಾಸೋಕ್ತಂ	8	...
11	ಶ್ಲೇಷಂ	11	ಅತಿಶಯೋಕ್ತಿಃ	8	ಅತಿಶಯಂ	9	...
12	ಉತ್ಪ್ರೇಕ್ಷೆ	12	ಉತ್ಪ್ರೇಕ್ಷಾ	12	,,	11	...
13	ಸೂಕ್ಷ್ಮಂ	13	ಹೇತುಃ	25	,,	29	ಇಲ್ಲ
14	ವಿಶೇಷಂ	14	ಸೂಕ್ಷ್ಮಃ	13	,,	...	ಇಲ್ಲ
15	ಸಮಾಹಿತಂ	15	ಲವಃ	27	(ಲವ) ಲೇಶ,	...	ಇಲ್ಲ
16	ಸಮಾಸೋಕ್ತಂ	16	ಕ್ರಮಃ	5	ಯಾಥಾಸಂಖ್ಯಂ	...	ಯಾಥಾಸಂಖ್ಯ
17	ಪರ್ಯಾಯೋಕ್ತಂ	17	ಪ್ರೇಯಃ	33	ಪ್ರಿಯತರಂ	10	...
18	ವಿರೋಧಂ	18	ರಸವತ್	30	,,	12	...

19	ಅಪ್ರಸ್ತುತಂ	19	ಊರ್ಜಸ್ವಿತ್	31	ಊರ್ಜಿತಂ	13	...
20	ನಿದರ್ಶನಂ	20	ಪರ್ಯಾಯೋಕ್ತಂ	17	...	14	...
21	ಸಹೋಕ್ತಿ	21	ಸಮಾಹಿತಂ	15	...	15	ಇಲ್ಲ
22	ಸಂಕೀರ್ಣಂ	22	ಉದಾತ್ತಂ	28	...	...	...
23	ಪರಿವೃತ್ತಿ	23	ಅಪಹ್ನುತಿಃ	29	...	16	...
24	ವ್ಯಾಜಸ್ತುತಿ	24	ಶ್ಲೇಷಃ	11	...	17	ಶ್ಲಿಷ್ಟ
25	ಹೇತು	25	ವಿಶೇಷಃ	14	...	18	ವಿಶೇಷೋಕ್ತಿ
26	ವಿಭಾವನೆ	26	ತುಲ್ಯಯೋಗಿತಾ	9	...	19	ಸದೃಶಯೋಗಿತಾ
27	ಲವಂ (ಲೇಶಂ)*	27	ವಿರೋಧಃ	18	...	21	ಅಪ್ರಸ್ತುತ ಪ್ರಶಂಸಾ
28	ಉದಾತ್ತಂ	28	ಅಪ್ರಸ್ತುತಸ್ತೋತ್ರಂ	19	ಅಪ್ರಸ್ತುತಂ	20	...
29	ಅಪಹ್ನುತಿ	29	ವ್ಯಾಜಸ್ತುತಿಃ	24	...	22	...
30	ರಸವದಲಂಕಾರಂ	30	ನಿದರ್ಶನಾ	20	...	23	...
31	ಊರ್ಜಿತಂ	31	ಸಹೋಕ್ತಿಃ	21	...	24	...
	(ಊಜಸ್ವಿದಲಂಕಾರ)					25	...
32	ವ್ಯಾವೃತ್ತಿ (ಆವೃತ್ತಿ)	32	ಪರಿವೃತ್ತಿಃ	23	...	26	...
33	ಪ್ರಿಯತರ	33	ಆಶೀಃ	34	...	...	...
34	ಆಶೀಃ	34	ಸಂಕೀರ್ಣಂ	22	...	27	...
*35	ಭಾವಿಕಂ	35	ಭಾವಿಕಂ	35	...	28	...
36	ಧ್ವನಿ	...	ಇಲ್ಲ	...	...	...	ಇಲ್ಲ
						30	ಸಂದೇಹ
						31	ಅನನ್ವಯ
						32	ಉಪಮೇಯೋಪಮಾ

* ಸಂಗ್ರಹ ಸ್ಥಳದಲ್ಲಿ ಲವ ಎಂದೂ ಲಕ್ಷಣವನ್ನು ಹೇಳುವಲ್ಲಿ ಲೇಶ ಎಂದೂ ಬೇರೆಬೇರೆ ಹೆಸರನ್ನು ಹೇಳಿರುವನು.

* 35, 36 ನೆಯ ಈ ಅಲಂಕಾರಗಳು ಅಲಂಕಾರಗಳ ಹೆಸರನ್ನು ಹೇಳಿರುವ ಕಂದಪದ್ಯಗಳಲ್ಲಿ (ಪರಿ. III. ಪ. 2. 3. 4.) ಹೇಳಿಲ್ಲ. ಆ ಸ್ಥಳದಲ್ಲಿ 34 ಅಲಂಕಾರಗಳನ್ನು ಮಾತ್ರ ಹೇಳಿರುವನು.—36. (ಧ್ವನಿ) ಇದನ್ನು ದಂಡಿಯೂ ಹೇಳಿಲ್ಲ, ಭಾಮಹನೂ ಹೇಳಿಲ್ಲ.

† ಭಾಮಹನು ಜಾತಿ, ಆವೃತ್ತಿ, ಲವ, (ಲೇಶ,) ಹೇತು, ಸೂಕ್ಷ್ಮ, ಸಮಾಹಿತ, ಈ ೬ ಅಲಂಕಾರಗಳನ್ನು ಹೇಳಿಲ್ಲ. ಸಂದೇಹ, ಅನನ್ವಯ, ಉಪಮೇಯೋಪಮಾ, ಈ 3 ಅಲಂಕಾರಗಳನ್ನು ಹೆಚ್ಚಾಗಿ ಹೇಳಿರುವನು.

ದಂಡಿಯು ಹೇಳಿರುವುದು—35 ಅಲಂಕಾರಗಳು.

ನೃಪತುಂಗಾನುಮತೋಕ್ತವಾದುದು. 34 ಅಥವಾ 36 ಅಲಂಕಾರಗಳು.

ಭಾಮಹನು ಹೇಳಿರುವುದು 32 ಅಲಂಕಾರಗಳು.

ಪರಿಶಿಷ್ಟಂ ೨.

A

(ಭಿನ್ನ ಪಾಠಗಳು)

ಮೈಸೂರ್ ಓರಿಯೆಂಟಲ್ ಲೈಬ್ರೆರಿ ಪುಸ್ತಕ.

No. 125.

(ಅಕಾರ ಇದೆ)

I

ಶ್ರೀಮತೇ ರಾಮಾನುಜಾಯ ನಮಃ.

1. ನಾವನನಗಲಳ್
2. ಶಯಧವಲಂ
3. ವರ್ನ್ನೆ, ಹಂಸವಿಭಾವದೆ
6. ನೇಕವಿವೇಕ...ತಪ್ಪಂ
7. ಮೃಗಪತಿ, ರೊಳಮ ಪ್ರತಿಹತವಚನ
9. ಅದರಿಂ
10. ಬಡಜನಮು ... ಯಲ್ಕೆಯತುದೆಂವು ವಲ್ತೆ
11. ಮತಿಭಾವತ್ವ...ತಕ್ಕುಂ...ಯಿಂ
13. ......ಅದರ
14. ಕೃತಿಯೊಳಿಡುವನಂ
19. ಲವುಕಿಕಸಾಮ್ಯೆಕೋ
24. ವಿವಿಧಮೆನಿಕ್ಕು
28. ಸಾಮ್ಯೆಕಾದಿ
29. ನೆಗಳ್ತೆಗದ್ಯಾ
32. ನುಡಿಗೆಲ್ಲಂ—(ಎಂಬಕಂದಲಿಲ್ಲ)
34. ಬಿದಂಡಗಬ್ಬ
35. ಮತ್ತ್ರಂ ದಲ್ ಗೀತಿಕೆ
41. ಪಾಗದಮುವನಕ್ಕುಂ... ಅವರವಱ ಲಕ್ಷ್ಮ
43. ನೆದೆವೆತ್ತ
44. ದಾಗದುಮುದಾರ
45. ಕಾಣೆಗೆಯ್ದುಂ
46. ದೇಸೆಬೇಱಿ
49. ರವನೆನೆ ಬೆಳ್ಪಡೆಯದು
50. ರಸಿಕತೆಯೊಳ್
54. ನಿತಪ್ತತಂ
63. ದೂರವೆಡೆತುನಮಪೂರ್ಗರಂ
64. ರೇತಾತಿತೀವ್ರ
66. ವಿದಿರ್ದಾರ್ದು
72. ವಿಪರೀತಮುನದು ಮಾಡುಗು
73. ಪೋಟಿಬ್ದೊಡ...... ಲಡಲಡಿಸಿ ದಲಸಡಂ......
75. ದೇಸೆಯನೆ
83. ಹರ ಮಿಂನ್ನ (ಮಾತೃಕೆಯಲ್ಲಿ ಹೀಗೆ ಸ್ಥಳ ಬಿಟ್ಟಿದೆ)
84. ದಪತಾರ್ತ್ಥಂ—ದೀ ಷ್ಟಾಂತಂ
85. ದಳ್ತಿಎ
86. ದ್ದೇಶಿಯ ನುದೇಶಿ— ಶಿಯರ್ಥಾಸಂ—
87. ಬುಧ ತತಮುದಱಿಎ
88. ದೊಳಗೆನಂ—ನಿಂ ಪೊಲ
89. ನೊಂದು ದೊಳ್ಸಂ—

91. ಧಿಪ—ತ್ವತ್ಯೈೀ—ಯಂ
—ಲ್ಕೆ ದರ್ಸಂ
94. ನೆನಿಂನನ
95. ವಿಸಂಧಿ ಎಂಬು—
96. ತಿರ್ಪ ಆಗಳ್ತಾ
98. ತರೆಯಂತಕ್ಕುಂ
100. ಸಂಖ್ಯೆ 100 ಇದೆ. 99 ಇರಬೇಕು.
101. ದಲಿಲ್ಲದದುಮುಮನಱ
103. ದರದರೆ...
104. ಮತ್ತಾಗ ವಚನಂ
106. ಕ್ರಮುವಿ ವ್ಯಕ್ತಂನ್ಯಾಯ
107. ವಿಪಿಪ್ಪಜನ
109. ಭೇದಂ ಱಕ್ಕು
110. ವರನಾಷ್ಟಾದಿ—ಕರ್ತುಗೆ
111. ಇಂತಿಂ ನಂತಾತ್ಮಕ
112. ವಧುವ ಪೇಸದೆ—
114. ದಯಾವಚನ ದಿಂದೆ ಯೆ
115. ನಿತವನೀಶ ರನಾಥಿಯೆ—
116. ಣಿಪ್ಪುವಕ್ಕೆ ಳ್ಬರಿಣಿಪ್ಪುವಕ್ಕೆ
117. ಮನುಗದರಿಂ—ಕಾರಣವಿಭಕ್ತಿ
118. ಬಂದಲು ಪಾವುಡಂ—
119. ಭಾಗಮುಂ—ಯರ್ಕಸಂಖ್ಯಾ
120. ವಲೆ—ಕುದು ಱಱ
121. ಕ್ತಿಮಾಡಿಬಂದಿದೆಯು ಮೆಕವಾಕು ಕಾವ್ಯ
122. ನೊದುಲಿ ಮುಂ—ಕಲ್ತದಂಮಂತರೆ
123. ಪನಂ ಸುಭಟ—
124. ಳ್ಗಳಂ — ಳೆಯುಂ—ಬೆಳ್ಚಗೆ — ಗನಾನಮನಂ
126. ಮಣಿವಿಭೂಷಣಂ—
ಅರಮೆ—ದೋಷಮುಂ ವಿಶೇಷ
127. ಗುರುದ್ಯೋಗ— ದೆಂಬುದು॥—ನಂಬುಗೀಲಾ ವದೋಷ
128. ಬಗೆದವನಾವನೊದನಟ್ಟದೆ—
ಮರಿಮಾನಸ—ರಿಗೆಮೆಂನ ನರ್ಪಿಬಾಱದೆ—ನವನಂದವಂ
129. ಳ್ಕಿ ತವಿುತೆಱ—
130. ಮೆಲ್ಲಮೆಳರಲೆ— ಪಾಡರಿವಂದಮಂ
131. ಬೇಱವೆರೆ — ಕೀಱಲ್ಲಿಯ ಷಮಾ
132. ದ್ಧರುನಾರತಂ—ಮಂ ವರಬಗೆಯ
133. ಗೊರವರುಂ ಗುಣವೃದ್ಧಮಂ ಯಕ್ಕುಪಿತದೋರು
134.—ತಗುಳ್ತು—ಱ ಳ್ದವಗುಣಂ-ವೆಂಪಂ ಜಿದೊ—
135.—ರೆಲ್ಲರ ಮಂತೆಬ — ಸಂಕಿಸದೆ ನಂಬುಮಿಕ್ಕ
136. ಫಳಿಯಿಗೆ—ನೆವವಿದೊಡಿಂತು
137. ವಿಕಲ್ಪದೊಲೆಱದೊಳೆ
138. ದ್ರುತವಿಳಂಬಿತಂ — ವಿಃದಾಯತವಧಾರಣ—
139. ಕುಲನೀತನೆ—ನೆಲಸವೀಯ
143.—ಕ್ರಮದಾ ತುಳ್ ಜಳದ — ಹರಂ॥
ನಿಯಮಿ—ದುಷವಪ್ರತಿ-ದಳ್ತಿ ಇನಿ
ದುರ್—ಯಾಯ ಮಿದಭ್ಯುಪಗವೋ
ಜಳದ ಸಂಹತಿಯಂತಿರೆ — ಹೆವಂ॥
ಉಪಮಿ
146. ಕ್ರಮದಕ್ಕು—
147. ಕ್ರಮನಮನಾಭ
148.—ಧವಳೋರ್ವಿಶೋ ತಾಳಂ
149.—ಮಿಗಲಿಂದ ನಾಳ್ಕುಡಿ—ಳ್ದುದು—
150.—ಳಾಪಕಳಾಪಕಥಿತ—
(ಆಶ್ವಾಸಾಂತ್ಯಗದ್ಯದಲ್ಲಿ)
ವರ್ಣನಾನಿರ್ಣಯಂ

ಪರಿಚ್ಛೇದಂ II.

3. ಪೇಳ್ವಿ ನೂಳ್ಕೆ
6. ಕೂಸಿಕತ್ತಲೆಯೊಳ್

7.—ದೂ ತಿಯಂಬರಿಸಿ—
9.—ತಂಸಂ ಪೇಳ್ದೊ—
12. ಮೇಣ್ಪೆಱಂ -
13. ಸ್ವಯವರಂ—ನಪವಾದು ವಾದರೆನ—
15. ಯೊಳಮೂಱ—ಮಾತುಗೆ—
19. ರಣೆಯೊಳಿಥೆಷ್ಟಮಳಿದೆಡೆ—
20.—ಡೆತ್ತ
26. ವಿಶೇಷದೊಳಾಪೋದ್ದೇಶ
28. ಷಣ್ಣಗುಣ—ಡಂಕಚಾರಣೆ ಗಳಂಪಂತಂ
31. ಸಾತೋಪ—
32. ಮಾದಱ ದಿನ—ದಾವುದದನ—ಕ್ರಮ ದಿವಿಚಾರಿತೋರು—
31.—ದಿಂಬಿನೆ — ಲಿರ್ದಂ — ನಿಂತೆ ಕಳಿದು ಪೋದ "
32.—ಪುತ್ರಿಕೆಯಲಿ—
44.—ತಱಿಸಲದೊಡಾ ನೀನೆಲಕೆಲ್ಲಂ ಪಾವ ನೀಯ ಚರಿತನೆಯಾದೆಂ॥೬೭ ಸುಕು ಮಾರತರಾಕ್ಷರ
71.—ಕರಲ್ಕಿಕಳೆದುದು—
74.—ವಿನಿಹರತಿ—
75.—ದಿಗಳಿಂ—ಳಿ ನೆ
76.—ನಿಜ ಹುಯುಗದಿ
77.—ದೊಳಹಿಮ—ನೆ ತ್ತಂಬುದಾ
79.—ಳ್ವೊಡಕ್ಕು — ಗದುಮೂಳಱಪಾಂ ತಕ್ಕುಂ
80. ಇದದಕ್ಷಿ—ರ್ಗ ದೀಚ್ಯ—ವಿಶೇಷ್ಯಣ—
82.—ಯುಗಂಗಳ್
84. ಎಂದಿಂತೆ - ದಾಗಿ ಗಿಪೇಟ್ಡಿ—ನಿಸಿಲ್ಲಿ
85.—ಸ್ಯೆತಾಗಿ ಸಮಱಿಪೇಟಿ್ಡ — ಗದ್ಯ ಕ್ರಿಯಾಮಸಮೇತಂ
86.—ಸಮುಮಿತಪ್ರ—
87.—ಯೆಯು ನಱಿದೆ

90.—ಳೊಂದೂದೋಜಸ್ವಿ—ಕೈಕೊಡೆಯೂ —ಸುಕರಕರ
91.
92. } ಈ ಪದ್ಯಗಳಿಲ್ಲ—(ನಿರಂತರವಾಗಿದೆ)
97.—ದನಂತದಂತ ಭೇದಂ
101. ಳಾವುವಾನುಪ ವನ್ನಿರ್ಗತಮಾರ್ಗಯುಪ್ರ —ನಿರ್ನೀತೆ—
103. ನೋಡುವೆ ನರ್ತ್ಥಿಗು—ಮನದಳ್ಕಱ ನೋಳ್ಪೆ—ನೊದಿ ಡುವೆನೆಂಬು—
106. ವನಾಸನಾ । ರತಸುಖ
107.—ದಾಂಪರ ನೆಂಬುದಿದಾ
108.—ದಾಕ್ಷಿಣಾತ್ಯವಾ । ಮನದೊಳಗಾಗ ದುಂ—
109.—ನಿಷೇದಿಗಳೊಳ್
111.—ಗುಣೋದಯಕ್ಕವಿಯದೆಂ
113.— ಮಿಕ್ಕಶಬ್ದಾಲಂಕಾರಮಕ್ಕುಂದುಕಂ ಮುಸಯಮುಕಂ ಪ್ರೇಮದಿಂ ಗೋಪಿತ ತ್ರುಯಂ ಶ್ರೀಮದಧ್ವಬ್ರಮುಂ ಚಕ್ರ ......ವ್ಯಂಗಳ್ ಕವಿಶೇಷ ಮಿಂತ್ತೊ ಪ್ಪಿಮಿವಱಿ ಲಕ್ಷ್ಯಭೇದಮುಂ
114.—ಮೊದಲೊಳ್ ಪೇಟ್ವುದು ದುಕರಂ
115.—ಕೆನ್ನಂ ನಿರಂತರಮ
116.—ಪೆನ್ನಂ — ದಕ್ಕಿಂಕೆ — ತಾಳಿಂತಳಿಜ ನಂಕನಾನದೆ
117.—ಶ್ಲೋಕಂ ನಾದ— —ದಮುಸಾಧಿಸಾ
118.—ನಾನಮಾನ ಮಸೇನಾನೀ ಸೇನಾ ಸೇಮನನಾದಿ ನಾ॥ ಮಾನ ಸೇನ ಮನಾನಾದಿ ದಿನನಾಮನಮಾನದಿ
119.—ತೋಪತಾ್ತ—ಚತುರ್ಥಿಳಿಪ ಲಕ್ಷಮಂ —ನಿಂನಿಂ ನಿಂನನೆ ನಿಂನಾನಾನಾ...॥
121.—ನಂನಿನೇನಂನನಾನಾನೆ ನಿಂನೆನೆನನ ನೂನನಂ ॥

122.—ನೀ—ನಿನಾನಿಂ ನನನನು
123.—ಕಿಡಿ ಕಿಡಿಪಂತೆ—
124.—ನೂರೂಢಗುಣ —
131.—ನೇತ್ರಕ್ಕಿಳಿವಂ—ಅತಾಭ್ಯಂ
132.—ದಾರುಣದಾರುಣ—
133.—ತಾರತಾರಕ ರಾಗಾಭಾತರಮಣೀಯೆ ಯಂ
134.—ಅಜೇಯಂ — ಮಮತ್ತ — ತ್ರಿಜಗ ದೂದನಂ
135.—ಸಾಮಯಿಕ—
137.—ನೆರೆದಾನೆಲ್ಲ—ದಾನಲ್ಲನೀಂ
138.—ಲಾಗದೇನೆಂಬವನ—

(ಅರ್ಥಭ್ರಮಣ) ಇಲ್ಲ

140.—ನೃಂಪರಿಗೊನರಾದಮಂ
142.—ಮಿಱಿ ದಾನಪನೊಳ್ — ಲಕ್ಷ್ಮೀ ಮದುಂತಂ
143.—ಬಗೆದುವೊಳಿಕೆಯೊಜ
146.—ಕಾಲದಿ—ಬಱಿ ನೆಲದೊಳ್
148.—ಕ್ಷುಚಯಂ—
148.—ಅವುದಂ ಬಾಗಿದಂದು ಮಥತಂ-ವುದಂ ಚಿತ್ತಾವಯವಂ ದಿವದಿನಿಂದುಗಿತ ಗಗ ನಂನುಡಿವವು—ಗೊಳ್ವದಾ
151.—ವಕ್ಕಳ—
152.—ದಪಳಂ ಬನದೊಳ್
153.—ಮಾರ್ಗೋಪಚಿತ — ಮಾರ್ಗಾಳಂ ಕಾರಂ ಕ್ರಿಯವಾ—ಗುಣದೊಳೆ—
154.—ಗುಣವಿಮಲಾಂಬು ಗಣನಾ — ಥಾನ ಲಂಕ್ರಿಯಂ —ಮಾಳ—
155.—ಯ್ದುವಱಿ

ಪರಿಚ್ಛೇದಂ III.

1.—ವಿಬುಧಾಸ್ಪದ—
2.—ಧುರತಿಶಯ—
4.—ವ್ಯಾಸ್ತುತಿ — ವ ನಾಂವೊದತ್ತಾಪ—
7.—ಹತಿತಶಾಬಜಾಶಿಂತ ಕಳಾಪಂ ಸವಿಲಾಂ—
9.—ರೋಮಾಂಚಕಂ ಭುವಂ— —ಮದವಾಸೆ—
10.—ನುಳಿ ॥
14.—ರೂಪಗಂ ಕ್ರಮಂ
20.—ಶಾಂತಿಯನಾಜಲ—
22.—ಜರಶ್ವಿಚಂ— —ಕ್ರಮವ ಭಿನ್ನ—
24.—ಲ್ಲಿದುಕಸನ—
25.—ವೆಂಬಬುಜದಲರಾ — ದೊಪ್ಪುವ— ಬತುಂ ಗೆದೊಸಗೆ—
28.—ಲೆವೇಡಿ ಅತೊಂದ—
29.—ಷವಿರುತ್ಮಕಂ—
30.—ಕಳಿಯಲಕ್ಕು—
33.—ದೋಷಾಕ ಮಪ್ಪೊಡಿಂ
36.—ಕರನಾಗಿ ವಸಂತ—ನೆಂಬ ವಿಪರೀತಂ
38.—ಬಗೆ ದರ್—
39.—ತಿಯಂ ಶಬ್ದಾರದಿಂ — ಗುಣೋದಯೆ ಕೃತ ವಿಸ್ತರಂ—
41.—ಲಾಕರ ಕರಿರ್—
43.—ಸಿತಮ ಕಣಿಣಭೋ—
45.—ಕದಂಬಂ ಚಿತರಾಜ—
46.—ಮಂಬ ಚಿತರಾಜ—
47.\
48. } —ಮಪಸ್ತಕಳಂ ಕಮಲನನಿಲ—ಮನ ನಾತಳ ಸಾಪ್ಯ ಮನನಿನಿಯತ — ದರ್ಮನ ಶಯನಂ—
49. ವ್ಯತಿರೇಕ ತಗತ—
50.—ಲಿಲಳನಂ ನೀಂ ಪೋಲ್ತೆ
51.—ತಿಳಿಗೆಳನನೆ—
52. ಯಾಥಾ—ಲಕ್ಷಮಿವಕ್ಕುಂ ಬಗೆಗಾದೀಪಕದ—

53.—ಷಿಯಪ್ಪ ಪಳಿಗಿಂದೀ—ಳಿವ—
54.—ಮಳಾಂಕು ನಂತೆ—
55.—ಕ್ಕುಮಮಳ—ಮೊವ್ಯತ—
56.—ತರಮಾಯ್ತು
57.—ಬಳ ಮಾಡಿದ—
59.—ತೆಱದೆ ಡೊದುಪಮಾ—
60.—ವಸ್ತೂ ಪಮಾ ಂಬುದು
62.—ತಳದವೊ ನಿಂನಯುನೀವಲ್ಲವಮೆಲೆನೆ
63.
64. } —ನಾಮಾಂಕಿತ ರಸಿಜ
65.—ಪೆಱದು ಳ್ಸದೃಶಂ
66.
67. } —ದಲ್ಲದೆಲ್ಲೆಂಬ—ಯೋಪಯಿೊಕೆ—
67.—ನೆಂಬುತಕ್ಕಾಗಿ—ಕನದ ಮಿಂದುಗಂ—
68.—ಲೋಚನ ಸಮವಾಯ
69.—ವೋಹದಿಂದೆ ನೋಹೋಪಮಿತಂ
71.—ಜಿತಶ್ರಿ ನಿಂನಮುಖಂ—
72.—ಪಮಾ ಷಂ
74.—ದೇಕ ಯಶೀಕಂ॥—ಮುಖಂ—
75.—ಸ್ಪರ ಗಳ್ನಿರುತ—
77.
78. } —ಗಳ್ದೊರೆ ವುತನಗೆ — ಮುಖಂ ನಿತಾಂತಮೆಂಬಾ —
79.—ಪ್ಪುದುದುರು—ತಸಂ ವೋಪ—
80. ಮಳಯರ್ದ—
81.—ಮಾಹಾ ನಿಜೋದಾ ಶ್ರಸಂ
83.—ತಾಂಬುಜಸುಮಮಂ — ಲ್ಕುವೊಂದೊ ಡಱಗೆ ವಾ—
84.—ಶುದ್ಧಭೂಮಿಯೊಳ್—
85.—ಥರಾನಿಂನ—ಯಶನಿಲತಾರಾ—
86.—ಕೊಳ್ಗಿ ಪಮೆಯಂ
87.—ಮಾನದರನಱುದು—
88.—ಬುದು ಮಿಂನದು—ಪ್ರಸಂನಾ
89.—ಪ್ರಸಂ ಷಂ

91.—ಖಮುನಱುದು ಶರ್
92.—ತಗುಳುವು—
93. ಗೈರಿ ದ್ರುಮಂ—
96.—ವಿವಕ್ಷಿತ — ಯೋಗ್ಯತಾಲಂಕೃತತಿಲಕ್ಷ—
97.—ನೆಯುವರೊಳ್
98.—ಪರವೂ — ಸಂಗಮುಮಾ
99.—ತಱುಸಲಱುವಂ
100.—ಸಾಸ್ಪದವೊದಲಾ —
102.—ತಗುಳ್ದುವೇಗದೆ ತಪದೊಳ್ — ದತಿ ಶಯಾ—
103.—ಕಾಂತಾಕರ—
105.—ನೆಗಳ್ಚ—
106.—ನಿನುಂತೆ—ಸಾದರ
107.—ದೆಪೆಕ್ಷಸ—
111.—ಪಹಲೆ—ನಿಸೇವ್ಯ
112.—ದೇಹಂಗಳೊಳೇ
113.—ಕಳಾಕಂ—
119.—ಗಾಯಿಪೆನೆ —
120.—ಪೇಟ್ದುದೆಱಕ—
121.—ಸ್ಯೆತೆಣಿಸಿ—
126.—ಸ್ಯೆತಡಿವಡಿಕೆಗಳಂ ತೊಡೆದ—
128.—ವುದಳಿ ದೊಳ್ ॥
129.—ದತಿವಿರುದ್ಧ—
130.—ನಪಾಯ ದೊಳೆ—
132.—ನಱುಯಿಪವೆವೆಲ್ಲಗೆ—
134.—ಯಮುಭಿಮತವು—ಬರ್ಳಿಗುಡೆ
138.—ವಿರಹಿಗಳೊಳ್
139.—ವಿಸ್ತಾರಿ (ಓಲೆಬಡೆದಿದೆ)ಂ ಮತ್ತಂಪ್ರ
140.—ವನಾಂ (   ) ವುತೃಣ—
141.—ತ್ತಿಯ (   ) ತಮುಱು—
146.—ತಿಯ (   ) ಯಾಸಂ—
147.—ತೋರ್ಕೆ (   ) ಯಱುಯ

148.
149. } —ಳಮಂ (   ) ಪಗೆಯಂ

150.—ರ್ಕಳ್ಮಂ—ಲೀಯ ತಂಬುಧಿ

151.—ಪಿರೆದ—

155.—ಮಾದೀಗಣಿದ—ಕೊಳೆ—

170.—ದದಜಿರಸಮ

172.—ಮುಟ್ವಿಲದಂತು—

173.—ದೊಂದುಂ ಗುಣಂ

175.—ಚಲಮುಂನೆ ಪ್ರಿಯ—

177.—ಮೇನುಣ್ಬಸನಂ—

178.—ಮೇರಮೇ—

184.—ಶಿಶಿರಾಂಶುವೆಂದು ವಿೂಶಶಿಗೆಂದುಂ—
ಱನುಮಲ್ಲದಮರೀಚಿ—ನಲ್ತೆ—

186.—ದದಜಿ ತತಿ—

187.—ಸರಕೋಟಿ—

188.—ಗಳಂ ನಮನಕೆ—
ರೂದವಚನ—ಸತ್ಯವಿದಾ—

189.—ಬೀಭತ್ಸು—

190.—ಯ್ವಿನೊ...ಪ್ಪಂನೆಗ

191.—ದಿಜಿದನಿಂದಂ—ಲಿವಂಬ—
...ದ್ಭುತ—

192.—ರಹಾನಳನಾಳಾಪದೆ—

193.—ತಳಮುಳಿಷುಗುಂ—ತ ಗಾರ—

195.—ಟ್ವಾಜ ಸುತೆಯ

198. ...ಱದೊಳ್—

199.—ತದಿ ವಿಚಾರ—

200.—ಲ್ಲದೊಡೆಳಾರ್ದು—

201.—ಮ...ಳ್ದಾಗಳಕ್ಕು—

202.—ತಾಪಮು...ಬಗೆದಿರ್ಪ

203.—ಡಗೂ ದಂ—

204.—ರುಚಿತ—

205. ಗ   ದಪರಕೆ—
—ಕೊಂಡ ವದಿಂದು—

206.—ಗೆಯಂದುಂಪರ—

208.—ಕೇವಳಮದ...ಭಾವಕ—

209.—ಕಮಳದೊ...ಯುಗ

210.—ರವಿಶೋ—ತ್ರೋ...ಲಬಲೀ—

211.—ವಿಶೇ ...ಂ ॥ ಪುರ—

211.—ಲೀಲಾ...ದಾದಿನೀಕಂ ॥ ರಮಣರಣಿ
ಗೋಷ್ಠಿ—

213.—ದ್ಭವ...ತ್ಸಾಹ—ಸೇವಾರಾತಿ

214.—ಮಂ...ಪ್ರಯಾಣ

215.—ಸುಲ...ಸಾವೃತ್ತ

216.—ಜಲ್ಪಂ ... ಯಸಾರಾ — ಪರ...
ನುಷ್ಠಾನ—

217.—ರಾತ್ಥಾರ್ಥ — ಶಬ್ದ ... ಱರತ್ನೈಕಾಕ
ರಾಸಾ...ಧರಣೀಚ ರಾಕ್ರಾಂತ—

218.—ಕಾವ್ಯ...ದೆನಿಲ್ಕು

219.—ವೇಕ...ಕ್ತಿಕಳಾ—

220.—ಪ್ರವಿ—ಪ್ರ...ತಮಹಾ

221.—ಗುರುಗು...ಸೇವನಾ

222.—ರಣಿಕ-ಗಣಾಸ್ತ್ರಹ...ಯಾಂತರಸರೂ
ಪನಪಾರ—

223.—ಶ್ರಯ—...ಱುದಿಶ—

224.—ನಿಂತಭಿ...ಡಿತಮ
ಹಾ—ಪೆಜಿರೊಮೆಚ್ಚ
—ವನುಮೇನುಮಂ ॥

235.—ಳ್ದ...ಣೊದಯ್ಯೈಕಾಂತವಿಷಯಾಶಯ
—ವರ್ ನೃಪತುಂಗ...

ಮುಂದೆ ಗ್ರಂಥವಿಲ್ಲ

B

ಮೈಸೂರ್ ಓರಿಯೆಂಟಲ್ ಲೈಬ್ರರಿ ಪುಸ್ತಕ

No. 110.

(ಅಕಾರವಿದೆ)

I

ಶ್ರೀಮದ್ವೇದವ್ಯಾಸಾಯ ನಮಃ

1.—ಸಾವನನಗಲಳ್

3.—ವಿಭಾವದಿ

4.—ರೋಚಿತರಚನೆ

5.—ನಪ್ಪವನತಿ

6.—ನೇಕವಿವೇಕ

7.—ಮೃಗಪತಿ

—ಮಪ್ರತಿಹತವಚನ

8.—ಜನಂಗಳ್

10.—ಯಲ್ತದಂ ಕಲ್ತೊಡನೋದುವ ಬಲ್ಕೆ-

11.—ಶ್ರುತಪರಿಚಯು—ತಕ್ಕುಂ—ತಿಯಿಂ—

13.—ದಯತಾಳ್ದೀ—

14.—ಚಿನಂ ನಗದಗೃಹಾ—

15.—ಬಗೆಯಂ ಬರದಿರೆ

18.—ಕವೀಶಪ್ರಧಾನ—

20.—ಬುಧಜನವಾವಿವಿಕ್ತ

24.—ವಿವಿಧಮೆನಿಕ್ಕುಂ—

26.—ಸಂಸ್ಕೃತಕಾವ್ಯದ—ಹರುಷಚರಿ—

28.—ಸಾಂ ಮೈಕಾದಿ—

29.—ನೆಗಟಿತ್ತಿಗದ್ಯಾ—

30.—ವಿದ್ಯಾಪಾದಪರ—ಯುುಕ್ತಂ

32.—ತ್ರಾಣಮುುಂಬೆ ಡೆಯು—

33.—ಪಾಲಾದಿಗಳೀ

34.—ಬೆದಂಡಗಬ್ಬ

35.—ಮತ್ತಂದಲಿತಿಕೆ

36.—ವಿಷದವಿಷಯ—

39.—ಕಮುಂವಾಮಾತುಗಳಂ

43.—ನೆರ್ದವೆತ್ತ—

44.—ಪೇಳ್ವುದಾಗದುಮುದಾರ—

46.—ಬೇಸರುವಂ—

50.—ರಸಿಕತೆಯೊಳ್—

52.—ಅಹರಹರುಚ್ಚೈ" ಎಂಬ ಈ ಕಂದವು ಇದರಲ್ಲಿಲ್ಲ

59.—ನಾನಾಭರದಿ—

63.—ಲ್ತೂರುಂ ದೂರಮಡೆ—ಣ್ಣಿಂದಂದ

72.—ರೀತಮುನದು॥ ಮಾಡುಗು—

75.—ದೇಸಿಯನೆ—

77.—ಚತುಃಪದಪದವಿ—

86.—ಮನನುಮುದಂತುಪೇಟಿ³

93.—ನ್ಯೂನಾ ಮದಜುಂ—

106.—ಉಕ್ತಿವಿಚಾರನ್ಯಾಯನಿಯುಕ್ತಂ

108.—ವಿವೇ ಕಿಗರುಹಿತ—

112.—ಸಿರ್ಕುಮಾಣಂ—

117.—ಕಾರಣವಿಭಕ್ತಿ—

118.—ನಾಡೆ

122.—ಮಂತರೆ—ಳಾದುದಂ—

128.—ಬಗೆದವನಾವನೋಡಲಟ್ಟಿದೆ—ದಾನು ಡಿವಸೀರ್ಕವೆನ್ನನರ್ಪಿ

129.—ಸರೆಯಲಾಬಲವೆಲ್ಲ—

130. ಶಿರವೆಲೊಡ್ಡಳಿ—
132.—ಚ್ಚಯೋದ್ಭಾವಿತ—
135.—ನೆತನೆ ಪೂಣ್ದು—
143. } ದುಪಚಿತಕ್ರಮುದಾ ತುಗಳ್ ಜಳದ?—
144. }
144.—ದಭ್ಯುಪಗವೋ......ಗಳಳ
144.

ಜಳದಸಂಹಿತೆಯಂತಿರೆಹಸ್ತಿಗಳ್ ।
ಗಳಿತಧಾರೆಗಳಂತಿರೆ ಪತಿಗಳ್ ॥
ಬಳಿಸಿಕಾರ್ಗಣೆಯಾಯ್ತು ಮಹಾಹವಂ.
(ಮೂರುಪಾದಮಾತ್ರ)

148. ಳೋರ್ವಿಶೋದಿತಾ —

ಅಂತು ಪ್ರಥಮಪರಿಚ್ಛೇದ ೧-ಕ್ಕೆ ಕಂದ, ವೃತ್ತ, ಗೀತಿಕೆ, ದ್ರುತವಿಳಂಬಿತ ಸಹಿತಾ ೧೫೦-ಕ್ಕೆ ಮಂಗಳ ಮಹಾ (ಎಂದಿದೆ).

II ನೆಯ ಪರಿಚ್ಛೇದಂ.

ಶ್ರೀಮದ್ವೇದ ವ್ಯಾಸಾಯ ನಮಃ.

14.—ಚಪಳಧ್ವಜ—
18.—ವುದುಮನೊಂದು ಬಾರದ.
20.—ಯೊಳಲಘು ಚ್ಚರನೆಯೆ —
(ಪದ್ಯಸಂಖ್ಯೆತಪ್ಪಿದೆ)
33.—ಕುಡಲಿರ್ದಂ—
36.—ಪುತ್ರಿಕೆಯಲ್ಲಿ ಬಿಳ್ದ —
40.—ಕೇತನಾಭತರಲೋಚನೆಯಂ—
42.—ಜನಿತಮುಂ ಮಾದಲತಿಲತನಯನ—
44.—ನೊಲವಿಂಪೆತ್ತಂ —
46.—ತಱಿಸಲಲಾಗದಾ—
48.—ಪೊರದಿರೆಯೊಂದೊಂದ—
52.—ಬಗೆವಾಗಳೆರಡೆ.
62.—ಮುದಿತವಿಧಾನಂ—
63.—ಶ್ಯಾರದ—
65.—ಪುಷ್ಪಾಕರಂ.
67.—ದಿನಕರಖರ.
72.—ಪರ್ಯಾಯ ವಿವಿಧಾಕ್ಷರ—
73.—ಒಂದರ ಹತ್ತುಗಳಂ—ಳಿಟ್ಟುಕೂಡಿ.
74.—ವಿಂದವಲನಲಕ್ಷ್ಮೀದಿನ—ವಿನಹರ —
79.—ನೆಗಟ್ತಿಗದು ಮದರ—
78.—ಲೀಲಾಂಬುಜ
85.—ಗದ್ಯಕ್ರಿಯಾಮ
98.—ಪ್ರಗುಣ ಗುಣೋದಯರ್ಕಳ್
101.—ವೃತ್ತಿ ವಿ ತಮಂತದೀಯ
102.—ಮನದಳ್ಕರಿ ನೋಟ್ಟಿನಟ್ಟು
104.—ಸುಖಸಂಗತ
105.—ಮೆಂದುಪವನಾಂತರ
107.—ಮಾರ್ಗಗತಿಯಂ
111.—ಕ್ಕಲಿಯದ
110. } ಮಿಕ್ಕ ಶಬ್ದಾಲಂಕಾರಮಕ್ಕುಂರದುತಂ
112. } ಮುನಿಯಮತಂ ಪ್ರೇಮದಿಂ ಗೋಪಿತ ತದ್ವಶ್ರಮಂ ನಕ್ರನಾಮಂ ಮುರಜ ಬಂಧಕಂ ೧೧೧ ॥

113.—ಮಿವರೆಲಕ್ಷ್ಯ
114.—ಸಮಸ್ತಾರ್ದ್ಧ—ಮೊದಲೊಳ್ಪೇಳ್ವ ಡದು
115.—ತಾನೆತಾನೇ —ಕೆನ್ನಂ (ಕೆನ್ನಂ)
116.—ವದಕ್ಕೆಂ ಕೆಳಾಡಾನಮಾನಳ —ನೆಂಕನಾನದೆ ಸನೆದೇನನಾ
117.—ಮನಾದೀನಾನಾದಾನದಭೇದನಾ ॥
118.—ನಾನಮಾನಸನಾಗಿಸೆನಾ ಸೆಮನಾ—ಮಾನಸೇನಮನಾನಾದಿ ದಿನಾನಾ
119.—ಗೂಢಸಮದ್ಧಿಗಳಿಪ—
120.—ಘನಸ್ತನಂ—
121.—ನೀಸೇನಂತಂನ—
122.—ನೀನೆ ನಾನಿಂನ್ನನುಮಾನ—
123.—ಕೇಡಿಪಂಬಾರ—ಕೇಡಿಪಂ—ಕೇಡಿಪಂ —ಕೆಡಿಸಲ್ಬುಡಿ—ಮೇ

124.—(ಲತಾಭ್ಯಂ)
125.—ದಿರ್ದ್ವನಾಗನೇ ॥
126.—ದೀನಾ—ಸಾನಿನ್ನನಾನೆನಾ ॥
ದೀನಾ—ನೀನೆನಿಂನ್ನ
130.—ಮಿಕ್ಕಳಿಪಂ—ನೇತ್ರಕ್ಕಳಿವಂ
132.—ದಾಭನಂ—
133.—ಷಾದಾಮಾ—ನಿತಂಬಂ ॥—
ಕರಾಗಾಭತಾರ ತಾರವು...
134.—ಲ್ಕುಮುಮತ್ತಾಗಜಂ — ತ್ರಿಚಗದೂ
ದನಂ
135.—ಲೋಕನಾ ಕಾಸರಕೋರಕಾ ॥
137.—ನಾನೆಲ್ಲಿನೀಂ ॥ ೧೩೪ ॥ [1]
ನಾಣದಂತಿ ರಿಸಂಗಡಿಯೊಳ್ಸರ್ವಯಮ
ಕಂ ॥ ೧೩೫ ॥
138.—ಗಜನೆ ನೆರಪ್ಪಲಾಗ ದೇನೆಂಬಂಧನ
ದೊಪ್ಪಮು ವನೇಚರಮುದಾ (ಅರ್ಧ
ಭ್ರಮಣಂ)
139.—ನರದಾನವರಾನೋ ನೆರದಾಕೆನರಾಕಮ
—ತಿಂದವಧಾರಿಕ್ಕುಂ.
140.—ಪರಾದಾನೆಂ—ಪರಿಚನರರಾಥಮಂ ॥
(ಮುರಜಬಂಧಂ)
141.—ದಿವ್ಯ ಸೇವಾದರದಿಗಡೆ ನೀನರಸಿ
142.—ಮದಂ ದಂತೇ—ನೀಂ ಣಾದಾರ್ಯಾ—
ಳಂ—
143.—ರ್ವಕವಿಗಳನೆನೆ ವಿನಿಂಪೇಟ್ಟಿದ್ದಿಂ ದುಷ್ಕ
—ಬಗೆದು ವೊಳಿಕೆಯೊ—
144.—ಭಾವಿಸ—
146.—ಕಳೆವಾಡು ತದ—
147.—ನೆರನೆ ತಾಂ—
148.—ತ್ವಕ್ಷುಚಯಿಂ
150.—ಆವುದಂ—ದಂದು — ದಂಚಿತಾ—
ದಿವದೆನಾದುಗಿತಂಗಗನಂ — ವವು—
ಕೊನರ್ುಡಿಯಂ

152.
153.
154. } —ಲಾಟಸುಗುಮ ವೆಳಂಬ
ವಳಾಂಬುಗಣನಾತೀ
ತಾಂ—ವಿಧಾನನಲಂ
ಕ್ರಿಯಾ—ಗಭೇತಂ ॥ ೧೫೦ ॥

(ಇಲ್ಲಿ ಅಂತ್ಯಗದ್ಯವಿದೆ)

ಶ್ರೀ ಶ್ರೀ ಮಂಗಳಂಶುಭಂ ಶ್ರೀಹರಯೇನಮಃ
ಶೋಭನಮಸ್ತು ನಾರಾಯಣಾಯನಮಃ

ಪರಿಚ್ಛೇದಂ III.

ಶ್ರೀಮಧ್ವೇಶಾಯನಮಃ

1.—ಶ್ರೀವಿಧಿ ವಿಬುಧಾಸ್ಪದ—
